ನಮ್ಮ ನದಿಗಳು ಮತ್ತು ಸಮಸ್ಯೆಗಳು

ಶೇಷನಾರಾಯಣ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ನಮ್ಮ ನದಿಗಳು ಮತ್ತು ಸಮಸ್ಯೆಗಳು

ಶೇಷನಾರಾಯಣ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

NAMMA NADIGALU MATTU SAMASYEGALU
by : **Sri Sheshanarayana**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 64 Price : Rs. **30=00** : **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ಮೂವತ್ತು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು

ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ

ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ

ಶ್ರೀ ಬಿ.ಎಂ. ಪಾಟೀಲ, ಬಿಜಾಪುರ

ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ

ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ

ಶ್ರೀ ಅ.ಸಿ. ಹಿರೇಮಠ, ಹಾವೇರಿ

ಪ್ರೊ. ಕೆ.ಬಿ. ತಳಗೇರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಡಾ. ಜಗನ್ನಾಥ ಹೆಬ್ಬಾಳೆ, ಬೀದರ

ಶ್ರೀ ಕ.ಮ. ಪುರದ, ರಾಯಚೂರು

ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ

ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ

Sri H.B.L. Rao, Navi Mumbai

Sri I.V. Bhatta, Kasaragod

Sri C. Ramaswamy, Chennai

Sri H. Ramachandrappa, Ananthpura

ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ

ಡಾ. ಕಮಲಾ ಹಂಪನಾ, ಬೆಂಗಳೂರು

ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

ಶ್ರೀಮತಿ ಭಾನು ಮುಷ್ತಾಕ್, ಹಾಸನ

ಶ್ರೀ ರಫಾಯಲ್ ರಾಜ್, ಬೆಂಗಳೂರು

ಡಾ. ಎಲ್. ಹನುಮಂತಯ್ಯ, ಬೆಂಗಳೂರು

ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ

ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ನಾಲ್ಕು ಮಾತು

ಬೀದರಿನಲ್ಲಿ ನಡೆಯುವ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆ ಆಗಲಿರುವ ಕೃತಿಗಳಲ್ಲಿ ಇದೂ ಒಂದು. ನಮ್ಮ ನಾಡಿನ ಎಂದರೆ ಕರ್ನಾಟಕದ ನದಿಗಳ ಸ್ಥೂಲ ಪರಿಚಯ, ಅವುಗಳ ಹುಟ್ಟು ಬೆಳವಣಿಗೆ ಹಾಗೆಯೇ ಅವುಗಳಿಂದ ನಮ್ಮ ನೀರಾವರಿ ವ್ಯವಸ್ಥೆಗೆ ದೊರಕಬಹುದಾದ ಅನುಕೂಲ್ಯತೆಗಳು - ಇಂಥವನ್ನು ಆದಷ್ಟು ಮಟ್ಟಿಗೆ, ಒಂದು ನಿಗದಿತ ಸಮಯದಲ್ಲಿ ಬಿಡಿಸಲು ನಾನು ಪ್ರಯತ್ನಿಸಿದ್ದೇನೆ.

ಕರ್ನಾಟಕದ ನದಿಗಳು ಎನ್ನುವಾಗ ಕೃಷ್ಣೆ, ಕಾವೇರಿಯರೇ ತುಂಬಿಕೊಳ್ಳುತ್ತಾರೆ. ಈ ನದಿಗಳ ಉಪನದಿಗಳೂ ಸೇರಿಕೊಂಡರೆ ಕರ್ನಾಟಕ ಆಗಿಬಿಡುತ್ತದೆ. ಹಾಗೆಯೇ ಎರಡು ಪ್ರಮುಖ ನದಿಗಳು ಹಾಗೂ ಉಪನದಿಗಳು ಅಲ್ಲದೆ, ಪಡುವಣ ಕಡಲನ್ನು ಹೋಗಿ ಸೇರುವ ಕಿರುನದಿಗಳೂ ಇವೆ. ಅವುಗಳ ಕಿರುಪರಿಚಯವನ್ನು ತಕ್ಕಮಟ್ಟಿಗೆ ಮಾಡಿದ್ದೇನೆ.

ಒಂದು ನದಿ ಎನ್ನುವಾಗ ಅದು ಎರಡು ಮೂರು ರಾಜ್ಯಗಳಲ್ಲಿ ಹರಿದು ಹಾದು ಹೋಗುತ್ತದೆ. ನಮ್ಮ ನೆರೆಹೊರೆಯ ರಾಜ್ಯಗಳು ಎನ್ನುವಾಗ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು- ಆಗುತ್ತದೆ. ಇಲ್ಲಿ ಹುಟ್ಟಿ ಈ ರಾಜ್ಯಗಳಲ್ಲಿ ಹಾಯ್ದು ಸಮುದ್ರ ಸೇರುವ ನದಿಗಳ ವಿಚಾರವಾಗಿ ಬೆಳೆದಿರುವ ವೈಮನಸ್ಯಗಳನ್ನು ನಾಲ್ಕು ಮಾತುಗಳಲ್ಲಿ ನಾನು ವಿವರಿಸಿದ್ದೇನೆ.

ಸಾಮಾನ್ಯ ಓದುಗರಿಗೆ ನಮ್ಮ ನದಿ, ಉಪನದಿ, ಅದರ ಬಳಕೆ, ನದಿಗಳ ವಿಚಾರವಾಗಿ ನೆರೆಹೊರೆ ರಾಜ್ಯಗಳೊಂದಿಗೆ ಇರುವ ವಿರಸ-ಇಂಥವನ್ನು ಸಾಕಷ್ಟು ಸರಳವಾಗಿ ಅರ್ಥವಾಗುವ ಹಾಗೆ ಬಿಡಿಸುವುದೇ- ಈ ಕೃತಿಯ ಉದ್ದೇಶ.

ಈ ಕೃತಿ ಹೊರಬರುವಲ್ಲಿ ಮುಖ್ಯಮಂತ್ರಿಗಳ ವಿಷಯ ಅಧಿಕಾರಿಗಳಾದ ಕೆ.ಆರ್. ಕಮಲೇಶ್, ಜಲಸಂಪನ್ಮೂಲ ಇಲಾಖೆಯ ಅಧೀನ ಕಾರ್ಯದರ್ಶಿಗಳಾದ ಐ.ಡಿ. ಧಮನ್ ಹಾಗೂ ಕಾನೂನು ಸಚಿವ ಎಚ್.ಕೆ.ಪಾಟೀಲರ ಆಪ್ತ ಸಹಾಯಕ ಕಾರ್ಯದರ್ಶಿಗಳಾದ ಜೆ.ಕೆ. ಜಮಾದಾರ್ ಸೂಕ್ತ ಮಾಹಿತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಹಾಗೆಯೇ ಪರಿಷತ್ತಿನ ಅಧ್ಯಕ್ಷರಾದ ಚಂಪಾರವರ ಸಹಕಾರ ಸಂಪೂರ್ಣವಾಗಿ ನನಗೆ ದೊರಕಿದೆ. ಅಚ್ಚುಕೂಟದ ಸಿಬ್ಬಂದಿ ವರ್ಗ ಮುದ್ರಣ ಕೆಲಸ ಮುಗಿಸಿದೆ.

ಇವರೆಲ್ಲರನ್ನೂ ಈ ಕೃತಿ ಹೊರಬರುತ್ತಿರುವ ಸಮಯದಲ್ಲಿ ಅತ್ಯಂತ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಶೇಷನಾರಾಯಣ

ಪರಿವಿಡಿ

೧. ನಮ್ಮ ನದಿಗಳು

ನದಿಗಳ ಹುಟ್ಟು ವಿಸ್ಮಯಕರ. ಎತ್ತರ ಪ್ರದೇಶ ಅಥವಾ ದಟ್ಟ ಕಾಡು, ನೀರಿನ ಸೆಲೆ ಇರುವ ಜಾಗಗಳು- ಹೀಗೆ ಅವುಗಳ ಉಗಮ. ಜಗತ್ತಿನ ಎಲ್ಲ ನದಿಗಳೂ ಹಾಗೆಯೇ.

ಜಗತ್ತಿಗೆ ಹೋಲಿಸಿದರೆ ಭಾರತದಲ್ಲಿ ನದಿಗಳ ಉದ್ದ ಕಡಮೆ. ಇಜಿಪ್ತಿನಲ್ಲಿ ಹರಿಯುವ ನೈಲ್ ನದಿ ೬೬೭೦ ಕಿಲೋ ಮೀಟರುಗಳ ಉದ್ದ ಇದೆ. ಇದೇ ಜಗತ್ತಿನ ಮೊದಲ ನದಿ. ಅಮೆಜಾನ್ ೬೪೩೭ ಕಿಲೋ ಮೀಟರುಗಳು- ಹೀಗೆ.

ಭಾರತದಲ್ಲಿ ಸಿಂಧೂ, ಬ್ರಹ್ಮಪುತ್ರಾ ಮಾತ್ರ ೨೯೦೦ ಕಿಲೋ ಮೀಟರ್ ಉದ್ದ ಇವೆ. ನಮ್ಮ ನಾಡಿನಲ್ಲಿ ಇವೇ ದೊಡ್ಡ ಅಥವಾ ಉದ್ದದ ನದಿಗಳು. ಗಂಗೆ ೨೫೧೦. ದಕ್ಷಿಣದ ನದಿಗಳ ಉದ್ದ ಈ ರೀತಿ ಇವೆ.

ಗೋದಾವರಿ	೧೪೫೦	ಕಿಲೋ ಮೀಟರುಗಳು
ಕೃಷ್ಣಾ	೧೨೯೦	ಕಿಲೋ ಮೀಟರುಗಳು
ಕಾವೇರಿ	೮೦೨	ಕಿಲೋ ಮೀಟರುಗಳು

ಇವು ಮೂರೂ ಕರ್ಣಾಟಕದಲ್ಲಿ ಇವೆ. ಆದರೆ ಗೋದಾವರಿಯ ಪಾತ್ರ ತುಂಬಾ ಕಡಮೆ. ಉತ್ತರದಂಚಿನಲ್ಲಿ ಬೆಳ್ಳಿಗೆರೆಯಾಗಿ ಇಣುಕಿ ನೋಡಿ ಹೊರಟುಹೋಗುತ್ತದೆ.

ಭಾರತದ ಮಧ್ಯಭಾಗದಲ್ಲಿ ಅಥವಾ ದಕ್ಷಿಣ ಪ್ರಸ್ಥಭೂಮಿಯಲ್ಲಿ ನರ್ಮದಾ, ತಪತಿ ನದಿಗಳ ಉಗಮ. ಇವು ಪಶ್ಚಿಮದ ಕಡಲನ್ನು ಅಪ್ಪುವ ನದಿಗಳು. ಮಹಾನದಿ ಒರಿಸ್ಸಾದಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಸೇರಿಬಿಡುತ್ತದೆ.

ದಕ್ಷಿಣದ ಬಹುತೇಕ ನದಿ, ಉಪನದಿಗಳು ಪಶ್ಚಿಮ ಘಟ್ಟದಲ್ಲಿಯೇ ಉತ್ಪತ್ತಿಯಾಗುತ್ತವೆ. ಈ ಸಾಲುಬೆಟ್ಟಗಳೇ ನಮಗೆ ಅನ್ನ ನೀಡುವ ನದಿಗಳಿಗೆ ಅಮ್ಮನ ಮನೆ.

ಕರ್ಣಾಟಕದಲ್ಲಿ ಕೃಷ್ಣಾ-ಕಾವೇರಿಯೇ ಮುಖ್ಯವಾದ ನದಿಗಳು. ಕೃಷ್ಣಾ ಮಹಾರಾಷ್ಟ್ರ-ಕರ್ಣಾಟಕ- ಆಂಧ್ರ; ಕಾವೇರಿ ಕರ್ಣಾಟಕ- ತಮಿಳುನಾಡು ಹೀಗೆ ಹಾಯ್ದು ಬಳಿಕ ಬಂಗಾಳ ಕೊಲ್ಲಿಯನ್ನು ಅಪ್ಪಿಬಿಡುತ್ತವೆ.

ಕರ್ನಾಟಕದಲ್ಲಿಯೇ ಹುಟ್ಟಿ, ಪಶ್ಚಿಮಕ್ಕೆ ಹರಿದು, ಅರಬ್ಬಿಸಮುದ್ರ ಸೇರುವ ಕೆಲವು ನದಿಗಳೂ ಇವೆ. ಅವುಗಳ ಬಗ್ಗೆ ಮುಂದೆ ಪ್ರಸ್ತಾಪಿಸೋಣ.

ನಮ್ಮ ನದಿಗಳಿಂದ ನಮಗೆ ದೊರಕುವ ಸೌಲಭ್ಯ- ಸಂಪತ್ತು ಹಾಗೆಯೇ ಅವುಗಳ ಬಳಕೆ- ಇತ್ಯಾದಿಗಳನ್ನು ಪ್ರಸ್ತಾಪಿಸುವುದಕ್ಕೆ ಮೊದಲು ನಿಸರ್ಗ ನಮಗೆ ನೀಡಿರುವ ನದೀಪಾತ್ರಗಳ ವೈಭವವನ್ನೂ ಮೋಹಕತೆಯನ್ನೂ ಸೊಬಗನ್ನೂ ಕುರಿತು ಎರಡು ಮಾತು ಹೇಳೋಣ.

ನದಿಗಳಿಂದಲೇ ಆಯಾಯಾ ದೇಶದ ಸಂಸ್ಕೃತಿ ಪ್ರಾರಂಭವಾಗುತ್ತದೆ; ನಾಗರಿಕತೆ ಬೆಳೆದಿದೆ. ಒಂದಾನೊಂದು ಕಾಲದಲ್ಲಿ ಬೆಂಕಿಯನ್ನು ಇನ್ನೂ ಕಂಡುಹಿಡಿಯದ ಆದಿಮಾನವ ನದೀತಟಗಳಲ್ಲಿಯೇ ವಾಸಿಸುತ್ತ ಇದ್ದ. ಹಸೀಮಾಂಸವೇ ಆಗ ಅವನಿಗೆ ಆಹಾರವಾಗಿತ್ತು. ಒಂದಾನೊಂದು ಕಾಲದಲ್ಲಿ ನಮ್ಮ ಅಜ್ಜನ ಅಜ್ಜನ ಅಜ್ಜನ ಅಜ್ಜ ಜಿಂಕೆ ಸುಲಿದು ಮೊಲ ಹಿಡಿದು ಹಕ್ಕಿಗಳನ್ನು ಬೇಟೆಯಾಡಿ ಹೀಗೆಯೇ ಒಂದು ಥರ ಕಾಡುಮನುಷ್ಯ ಆಗಿದ್ದ, ಥರ ಅಲ್ಲ, ಕಾಡುಮನುಷ್ಯನೇ ಆಗಿದ್ದ.

ಎಷ್ಟೋ ಸಹಸ್ರ ಸಹಸ್ರ ಲಕ್ಷ ಲಕ್ಷ ವರುಷಗಳು ಕಳೆದವು. ಕರಾರುವಾಕ್ಕಾಗಿ ಲೆಕ್ಕ ಹೇಳುವವರು ಯಾರು? ಒಂದೊಂದಾಗಿ ಮಾನವ ಕಂಡುಹಿಡಿಯುತ್ತ ಬಂದ. ಬೆಂಕಿ ವಸತಿ ಬೆಳೆ ಆಹಾರ ವ್ಯವಸಾಯ- ಹೀಗೆ.

ಮಾನವ ವಿಕಾಸ ಈ ರೀತಿ ಚಕ್ರಚಕ್ರಗಳಾಗಿ ಉರುಳುಉರುಳಾಗಿ ಉರುಳತೊಡಗಿತು.

ಒಂದು ಸ್ವಾರಸ್ಯವಾದ ವಿಷಯದತ್ತ ನಿಮ್ಮ ಗಮನವನ್ನು ಸೆಳೆಯಬೇಕು. ಎತ್ತರದ ಪ್ರದೇಶಗಳಲ್ಲಿ ಒಂದು ನದಿ ಉಗಮವಾಗುತ್ತದಷ್ಟೆ. ಆನಂತರ ಇಳಿಜಾರಿನಲ್ಲಿ ಹಾಯ್ದು ಸಮತಟ್ಟು ಪ್ರದೇಶಕ್ಕೆ ಪ್ರವೇಶಿಸಿ, ಆ ನದಿ, ಸಮುದ್ರಕ್ಕೆ ಹೋಗಿ ಸೇರಿ ಬಿಡುತ್ತದೆ. ಅದು ಪಶ್ಚಿಮವೋ ಪೂರ್ವವೋ ಯಾವುದಾದರೂ ಆಗಿರಬಹುದು. ನಮ್ಮ ನಾಡಿನಲ್ಲಿ ಪಶ್ಚಿಮಕ್ಕೆ ಹೋಗಿ ಸೇರುವ ನದಿಗಳು ತುಂಬಾ ಕಡಮೆ. ಸಿಂಧೂ, ನರ್ಮದಾ, ತಪತಿ- ಹೀಗೆ. ಘಟ್ಟದಾಚೆ ನೇತ್ರಾವತಿ ಮುಂತಾದ ಚಿಲ್ಲರೆ ಚಿಲ್ಲರೆ ನದಿಗಳು- ಪೂರ್ವ ಕಡಲನ್ನು ಅಪ್ಪುವ ನದಿಗಳೇ ಜಾಸ್ತಿ.

ಯಾವಾಗ ಒಂದು ನದಿ ಎತ್ತರದಿಂದ ಕೆಳಗೆ ಹರಿದು ಬಂದು ಸಮತಟ್ಟು ಪ್ರದೇಶಕ್ಕೆ ಪ್ರವೇಶಿಸುತ್ತದೆಯೋ ಆಗ ಆ ಪ್ರಾಂತ್ಯದ ಜನ ಆ ನದಿಯ ನೀರನ್ನು ಹೆಚ್ಚು ಬಳಸಿಕೊಳ್ಳುತ್ತಾರೆ. ಇದು ಸಹಜ.

ನಮಗೆ ಬೆಟ್ಟಸಾಲುಗಳ ಸಂಪತ್ತು ಇದೆ. ಪಶ್ಚಿಮ ಘಟ್ಟಗಳು ಇವೆ, ನಿಜ. ಆದರೆ ನಮ್ಮ ನದಿಗಳು ಅಲ್ಲಿ ಹುಟ್ಟಿ ಪೂರ್ವಕ್ಕೆ ಓಡಿಬಿಡುತ್ತವೆ. ಹಾಗಾಗಿ ನದೀ ಮುಖಜ ಭೂಮಿಗಳು ಎಂದರೆ ಡೆಲ್ಟಾ - Delta- ನಮಗೆ ಇಲ್ಲ, ಕರ್ನಾಟಕಕ್ಕೆ ಇಲ್ಲ, ಹಾಗಾಗಿ ಕಾವೇರಿ -

ಕೃಷ್ಣಾ-ಗೋದಾವರಿ ಮುಂತಾದ ನದಿಗಳ ಹೆಚ್ಚಿನ ಪಾತ್ರ ಆಂಧ್ರ, ತಮಿಳುನಾಡು ಮುಂತಾದ ರಾಜ್ಯಗಳಿಗೆ ದಕ್ಕಿಬಿಡುತ್ತದೆ.

ಕಾಡಿನ ಸಂಪತ್ತು ನಮಗೆ ಇದೆ. ಹುಲಿ, ಆನೆಗಳು ಇವೆ. ಬಿದಿರ ಹೆಳಲು ಹೇರಳವಾಗಿಯೇ ಇದೆ. ಆದರೆ ಸಮುದ್ರ ಇಲ್ಲ. ಅರಬ್ಬೀ ಸಮುದ್ರ ನಮಗೆ ಇದ್ದರೂ ಅಲ್ಲಿಗೆ ಹೋಗಿ ಅಪ್ಪಳಿಸುವ ಡೆಲ್ಟಾ ಮಾಡುವ ಉದ್ದದ ಅಗಲದ ನದಿಗಳು ಇಲ್ಲವೇ ಇಲ್ಲ. ಉದ್ದ ಅಗಲ ಇದ್ದರೆ ಮಾತ್ರ ನದಿ ಹರಡಿಕೊಳ್ಳುತ್ತದೆ. ಡೆಲ್ಟಾ ಆಗುತ್ತದೆ.

ಬಂಗಾಳದಲ್ಲಿ ಒಂದು ಮಾತು ಇದೆಯಂತೆ. ಎಂಥ ಬಡವನೂ ಈ ಮಾತನ್ನು ಹೇಳುತ್ತಾನಂತೆ. ''ಈ ಕಡೆ ಕೈಚಾಚಿದರೆ ಒಂದು ಹಿಡಿ ಭತ್ತ ಸಿಗುತ್ತದೆ. ಆ ಕಡೆ ಕೈಚಾಚಿದರೆ ಒಂದು ಮೀನು. ನಾನು ಯಾವುದಾದರೂ ಒಂದನ್ನು ತಿಂದು ಬದುಕಿಕೊಳ್ಳುತ್ತೇನೆ.''

ಗಂಗೆ ಸಮುದ್ರ ಸೇರುವ ಜಾಗ ಅಲ್ಲಿ ಡೆಲ್ಟಾ ಆಗಿಬಿಟ್ಟಿದೆ. ಬ್ರಹ್ಮಪುತ್ರಾ ಸಹ ಅಲ್ಲಿಗೆ ಬಂದು ಕೂಡಿಕೊಳ್ಳುತ್ತದೆ. ಆದುದರಿಂದಲೇ ಅಲ್ಲಿನ ಜನ ಹಾಗೆ ಹೇಳಲು ಸಾಧ್ಯವಿದೆ.

ನದಿಗಳು ನಾವು ಹೇಳಿದ ಹಾಗೆ ಕೇಳುವುದಿಲ್ಲ. ಲೆಫ್ಟ್ ರೈಟ್ ಮಾಡುವುದಿಲ್ಲ. ಕೇಳಮ್ಮಾ ಎಂದು ಮೃದುವಾಗಿ ಹೇಳಿದರೂ ಉಹೂಂ. ಗದರಿಸಿ ಕೇಳೇ ಎಂದರೆ ಮುಗಿಯಿತು ನಿಮ್ಮ ಕಥೆ. ಅದು ಮುಖ ಗಂಟುಹಾಕಿಕೊಳ್ಳುತ್ತದೆ. ನಮ್ಮ ಹೆಂಗಸರು ಮುಖ ಗಂಟುಹಾಕಿಕೊಳ್ಳುವುದು, ಕುಂಬಳಕಾಯಿ ಮಾಡಿಕೊಳ್ಳುವುದು ಚಿಟಿಕೆ ಹೊಡೆದಷ್ಟು ಸುಲಭವಷ್ಟೇ. ಅವೂ ಅದೇ ಥರ.

ನದಿಗಳಿಗೆ ಅವುಗಳಿಗೇ ಪ್ರತ್ಯೇಕವಾದ ಒಂದು ಅಸ್ತಿತ್ವ ಇದೆ. ನಮಗಾದರೆ ಆಯುಸ್ಸಿಗೆ ಒಂದು ಮಿತಿ ಇದೆ. ಕಾಲ ಇದೆ. ಒಬ್ಬ ಒಂದು ನೂರು ವರ್ಷಗಳು ಬದುಕಬಲ್ಲ. ಹೆಚ್ಚೆಂದರೆ ಅದಕ್ಕೆ ಮೇಲೆ ನಾಲ್ಕೋ ಆರೋ- ಇಷ್ಟೇ. ಅಲ್ಲಿಗೆ ಅವನ ಕಥೆ ಮುಗಿಯಿತು. ಆಮೇಲೆ ಅವನ ಕಥೆ ಗೋವಿಂದೋ ಗೋವಿಂದಾ.

ಆದರೆ ನದಿಗಳ ಇತಿಹಾಸ ಸಹಸ್ರ ಸಹಸ್ರ ಸಹಸ್ರ ವರ್ಷಗಳ ಹಿಂದೆ ಹೋಗುತ್ತದೆ. ನಮಗೆ ದೊರಕಿರುವ ಆಧಾರಗಳಿಂದ ನಮ್ಮ ಇತಿಹಾಸ ಎಂದರೆ ಮಾನವ ಇತಿಹಾಸ ಎಂದಿನಿಂದ ಪ್ರಾರಂಭ ಆಗುತ್ತದೋ ಅಂದಿನಿಂದಲೂ ನದಿಗಳು ಇವೆ. ಮಾನವ ಮೊದಲು ಹುಟ್ಟಿದನೋ? ನದಿ ಮೊದಲು ಹುಟ್ಟಿತೋ?

ಜನ ಉದ್ದಕ್ಕೂ ನಮ್ಮ ನದಿಗಳ ನೀರನ್ನು ಬಳಸಿಕೊಂಡು ಬಂದಿದ್ದಾರೆ; ವ್ಯವಸಾಯ ಮಾಡಿದ್ದಾರೆ. ನದಿಗಳು ನಮಗೆ ಅನ್ನ ನೀಡಿವೆ; ನಮ್ಮ ಬಾಳನ್ನು ಬೆಳಗಿಸಿವೆ.

ಹತ್ತು ಸಹಸ್ರ ವರುಷಗಳ ಹಿಂದೆ ವ್ಯವಸಾಯ ಪ್ರಾರಂಭವಾಯಿತು ಎಂದು ಹೇಳುವವರು ಇದ್ದಾರೆ.

ಉದ್ದಕ್ಕೆ ಉದ್ದಕ್ಕೆ ಸಹಸ್ರ ಸಹಸ್ರ ವರುಷಗಳಿಂದ ಹರಿದುಬಂದಿರುವ ಕೆಲವೇ ಕೆಲವು

ನದಿಗಳು ನಿಸರ್ಗದ ವೈಪರೀತ್ಯಗಳಿಂದ ತಮ್ಮ ತಮ್ಮ ಪಾತ್ರಗಳನ್ನು ಬದಲಾಯಿಸಿರಬಹುದು. ಕೆಲವು ನದಿಗಳು ಅದೃಶ್ಯವೇ ಆಗಿರಬಹುದು, ಸರಸ್ವತಿ ನದಿಯ ಹಾಗೆ. ಆದರೆ ಇಂಥವುಗಳ ಸಂಖ್ಯೆ ಕಡಮೆ.

ಹೀಗೆ ನದಿ ಸಹಸ್ರ ಸಹಸ್ರ ವರುಷಗಳಿಂದ ಉದ್ದಕ್ಕೂ ಹರಿದುಬಂದು ಮಾನವನ ಜೀವನದಲ್ಲಿ ಮಹತ್ತರ ಪಾತ್ರವಹಿಸಿವೆ. ದೊಡ್ಡ ದೊಡ್ಡ ಸಾಮ್ರಾಜ್ಯಗಳು ನದೀತಟಗಳಲ್ಲಿ ತಲೆಎತ್ತಿವೆ ಹಾಗೂ ಅಳಿದಿವೆ. ಆದರೆ ನದಿಗಳು ಮಾತ್ರ ಮಾಮೂಲಿನಂತೆ ಉದ್ದಕ್ಕೂ ಹರಿದುಕೊಂಡು ಬಂದಿವೆ.

ತುಂಬಿದ ಒಂದು ನದಿಯನ್ನು ನೋಡುವುದಕ್ಕೇ ಚೆನ್ನ. ನೋಡಿಕೊಂಡೇ ಇರಬೇಕು ಎನಿಸುತ್ತೆ. ಆ ಹೊರಳು, ಆ ಚಿಮ್ಮು ಆ ಅಲೆಗಳ ಚಿನ್ನಾಟ, ಆ ಬೆಳ್ನೊರೆ, ಅದು ಕುಣಿಯುವ ರೀತಿ, ಶಬ್ದಗಳನ್ನು ಹೊರಳಿಸುವ ಮೋಜು – ನದಿಯ ವೈಭವವೇ ವೈಭವ.

ಕೆಲವು ಸಲ ಹರಿಯುವ ಒಂದು ನದಿ ಮೈಸೂರು ಗೌರಮ್ಮನ ಹಾಗೆ ಶಾಂತವಾಗಿದ್ದರೆ, ಮತ್ತೊಂದು ಸಲ ಕಾಳಿಯ ಹಾಗೆ ಆರ್ಭಟಿಸುತ್ತದೆ. ಹಾಗೆ ಏನು ? ಕಾಳಿಯೇ. ಅಲೆಗಳನ್ನು ಬಾನಿನ ಎತ್ತರ ಚಿಮ್ಮಿಸುತ್ತದೆ. ಆರ್ಭಟ ಮಾಡುತ್ತದೆ.

ಹೀಗೆಂದೇ ಮಾನವ ನದಿಗಳನ್ನು ತಾಯಿಗೆ ಹೋಲಿಸಿದ. ಪೂಜ್ಯಭಾವನೆಯಿಂದ ನೋಡಿದ. ಅವಕ್ಕೆ ಪೌರಾಣಿಕ ಕಥೆಗಳನ್ನು ಹೆಣೆದ. ಅವುಗಳ ನೀರನ್ನು ಅವು ಸಿಗದ ಜಾಗಕ್ಕೆ ಡಬ್ಬಿಗಳಲ್ಲಿ ತುಂಬಿಸಿ ತೀರ್ಥ ಎಂದ. ತಾಯೀ ಎಂದು ಕೈಮುಗಿದ. ನದಿಗೆ ನಾಣ್ಯಗಳನ್ನು ಎಸೆದ.

ಗಂಗೆಗೆ ಭಗೀರಥ, ಯಮುನೆಗೆ ಯಮು, ಕೃಷ್ಣಾಕ್ಕೆ ಶ್ರೀಕೃಷ್ಣ ಕಾವೇರಿಗೆ ಅಗಸ್ತ್ಯ- ಹೀಗೆ ನದಿಗೆ ಹಲವು ಪೌರಾಣಿಕ ಕಥೆಗಳು ಇವೆ; ರೋಚಕವಾಗಿವೆ.

ಈಗ ನಮ್ಮ ಕರ್ಣಾಟಕದ ವಿಚಾರ ತೆಗೆದುಕೊಳ್ಳೋಣ.

ಕರ್ಣಾಟಕದಲ್ಲಿ ಕೃಷ್ಣಾ, ಕಾವೇರಿ – ದೊಡ್ಡ ನದಿಗಳು ಹಾಗೂ ಜೀವನದಿ ಇಲ್ಲವೇ ಸಮೃದ್ಧ ನದಿಗಳು. ಇವುಗಳಿಗೆ ಉಪನದಿಗಳು, ಉಪನದಿಗಳಿಗೆ ಉಪನದಿ ಗಳು ಮೊಮ್ಮಕ್ಕಳ ಹಾಗೆ ಸೇರಿಕೊಂಡರೆ ಕರ್ಣಾಟಕ ಆಗಿಬಿಡುತ್ತದೆ. ಹಾಗೆಯೇ ಕಾವೇರಿ, ಕೃಷ್ಣೆಯರ ಕಥೆಗಳೂ ಹೆಣೆದುಕೊಳ್ಳುತ್ತವೆ.

ಈ ಎಲ್ಲ ನದಿ, ಉಪನದಿಗಳ ಸಂಪತ್ತೇ ನಮ್ಮ ಜೀವಾಳ; ಸಂಪತ್ತು; ಬದುಕು.

ಈಗ ನಮ್ಮ ಕಥೆಯನ್ನು ಕೃಷ್ಣಾ ನದಿಯಿಂದ ಪ್ರಾರಂಭಿಸೋಣ.

*****

೨. ಕೃಷ್ಣಾ

ಕೃಷ್ಣಾ ಕರ್ನಾಟಕದ ದೊಡ್ಡ ನದಿ. ಗೋದಾವರಿ ಕೃಷ್ಣೆಗಿಂತ ದೊಡ್ಡದು, ನಿಜ. ಆದರೆ ಅದರ ಪಾತ್ರ ಕರ್ನಾಟಕದಲ್ಲಿ ಸ್ವಲ್ಪವೇ. ಹಾಗಾಗಿ ಅದನ್ನು ಬಿಟ್ಟು ಬಿಡೋಣ. ಕೃಷ್ಣಾ ನದಿಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳೋಣ.

ಪರ್ಯಾಯ ದ್ವೀಪದ ಆಕಾರದಲ್ಲಿ ಇರುವ ದಕ್ಷಿಣ ಭಾರತದಲ್ಲಿ ಕೃಷ್ಣಾ ಎರಡನೆಯ ಅತಿ ದೊಡ್ಡ ನದಿ. ಮೊದಲನೆಯದು ಗೋದಾವರಿ. ಗೋದಾವರಿಯ ಉದ್ದ ೧೪೬೫ ಕಿಲೋ ಮೀಟರುಗಳು. ಕೃಷ್ಣಾ ೧೨೯೦ ಕಿಲೋಮೀಟರುಗಳು.

ಎಲ್ಲ ನದಿಗಳಿಗೆ ಇರುವಂತೆ ಕೃಷ್ಣೆಗೂ ಪೌರಾಣಿಕ ಕಥೆಗಳು ಇವೆ. ಒಂದು ಕಾಲದಲ್ಲಿ ಎಂದರೆ ದ್ವಾಪರಾ ಯುಗದಲ್ಲಿ ಕೃಷ್ಣೆ ತೀರಾ ಬಡ ಹೆಣ್ಣುಮಗಳಾಗಿದ್ದಳು. ಆಗ ಆಕೆ ಶ್ರೀಕೃಷ್ಣನನ್ನು ಪ್ರಾರ್ಥಿಸಿದಳು. ಕುಚೇಲನಿಗೆ ಸೌಲಭ್ಯ ಒದಗಿಸಿಕೊಟ್ಟ ಶ್ರೀಕೃಷ್ಣ ಪರಮಾತ್ಮ ಇನ್ನು ಒಂದು ಹೆಣ್ಣಿಗೆ ನೆರವು ನೀಡದೆ ಇರುತ್ತಾನೆಯೇ? ಆಕೆಗೆ ಸಕಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟ. ಹೀಗೆ ಕಥೆ ಬೆಳೆಯುತ್ತದೆ.

ಕೃಷ್ಣಾ ಪಶ್ಚಿಮ ಘಟ್ಟಶ್ರೇಣಿಯ ಮಹಾದೇವ ಸಾಲುಬೆಟ್ಟದಲ್ಲಿ, ಮಹಾ ಬಲೇಶ್ವರದ ಸಮೀಪ ಉತ್ಪತ್ತಿಯಾಗುತ್ತ... ...ಮ ನಿಸರ್ಗಧಾಮವೂ ಹೌದು. ಹಾಗೆಯೇ ಸಮುದ್ರಮಟ್ಟದಿಂದ ೪೩೮೫ ಅಡಿಗಳ ಎತ್ತರದಲ್ಲಿಯೂ ಇದೆ. ವಿಶೇಷವೆಂದರೆ ಇದರ ಉಗಮ ಅರಬ್ಬೀ ಸಮುದ್ರಕ್ಕೆ ಸಮೀಪ. ಆದರೆ ಪೂರ್ವಕ್ಕೆ ದೌಡಾಯಿಸುತ್ತದೆ. ಬಂಗಾಳ ಕೊಲ್ಲಿಯನ್ನು ಅಪ್ಪುತ್ತದೆ. ನದಿಗಳಿಗೆ ಏನು ಇಂಥ ಚೆನ್ನಾಟವೋ?

ಮಹಾರಾಷ್ಟ್ರದಲ್ಲಿ ಜನ್ಮ ತಾಳಿ, ಕರ್ನಾಟಕಕ್ಕೆ ಪ್ರವೇಶಿಸಿ, ಅಲ್ಲಿಂದ ಆಂಧ್ರ ಪ್ರದೇಶಕ್ಕೆ ಓಟ.

ಕೃಷ್ಣಾ ಮಹಾರಾಷ್ಟ್ರದಲ್ಲಿ ೩೦೪ ಕಿಲೋ ಮೀಟರುಗಳು ಹರಿಯುತ್ತದೆ. ಕರ್ನಾಟಕದಲ್ಲಿ ೪೮೦ ಕಿಲೋ ಮೀಟರುಗಳು. ಉಳಿದದ್ದು ಎಂದರೆ ೫೦೬ ಕಿಲೋ ಮೀಟರುಗಳು ಆಂಧ್ರ ಪ್ರದೇಶ.

ನಮ್ಮ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ ಎಷ್ಟು ಗೊತ್ತೆ? ೧,೯೦,೬೪೧ ಚದುರ ಕಿಲೋ ಮೀಟರುಗಳು. ಇದರಲ್ಲಿ ಕೃಷ್ಣಾ ಕಣಿವೆಯ ಹರವು ರಾಜ್ಯದ ಒಟ್ಟು

ಭೌಗೋಳಿಕ ವಿಸ್ತೀರ್ಣದ ಶೇಕಡಾ ೬೦ರಷ್ಟು ವ್ಯಾಪ್ತಿಯುಳ್ಳದ್ದು ಆಗಿದೆ.

ಕೃಷ್ಣಾ ನದಿ ಕಣಿವೆಯ ಒಟ್ಟು ವಿಸ್ತೀರ್ಣ ೨೫೭೦ ಲಕ್ಷ ಚದುರ ಕಿಲೋ ಮೀಟರ್ ವ್ಯಾಪಿಸಿದೆ. ಇದರಲ್ಲಿ ಕರ್ನಾಟಕ ಶೇಕಡಾ ೪೩.೮; ಆಂಧ್ರ ಪ್ರದೇಶ ೨೯.೪ ; ಮಹಾರಾಷ್ಟ್ರ ೨೬.೮– ಹೀಗೆ ಎಂದರೆ ಕೃಷ್ಣಾ ನದಿ ಕಣಿವೆಯ ಒಟ್ಟು ವಿಸ್ತೀರ್ಣದಲ್ಲಿ ಹೆಚ್ಚು ಕಡಮೆ ಅರ್ಧಭಾಗವೂ ಕರ್ನಾಟಕಕ್ಕೆ ಸೇರಿಹೋಗಿದೆ.

ಒಂದು ನದಿ ಆಗಬೇಕಾದರೆ ಹಲವು ಉಪನದಿಗಳು ಸೇರಿದರೇ ಸಾಧ್ಯ. ಇಲ್ಲದಿದ್ದರೆ ಅದು ನದಿ ಆಗುವುದಿಲ್ಲ. ಈ ಉಪನದಿಗಳಿಗೂ ಹಲವು ಉಪನದಿಗಳು ಸೇರಿಕೊಳ್ಳುತ್ತವೆ.

ಹೀಗಾಗಿ ಕೃಷ್ಣಾ ನದಿಗೆ ತುಂಗಾಭದ್ರಾ, ಭೀಮಾ, ಘಟಪ್ರಭಾ, ಮಲಪ್ರಭಾ, ವೇದಾವತಿ ಮುಖ್ಯ ಉಪನದಿಗಳಾಗಿವೆ. ಈ ಉಪನದಿಗಳಿಗೂ ಹಲವು ಉಪನದಿಗಳು ಇವೆ ಎಂದು ಹಿಂದೆ ಹೇಳಿದ್ದೇವಷ್ಟೆ ಈಗ ಅವುಗಳ ಹೆಸರುಗಳನ್ನು ತಿಳಿದುಕೊಳ್ಳೋಣವೆ ?

೧) ವೇದಗಂಗಾ, ೨) ಧೂದ್‌ಗಂಗಾ, ೩) ಪಂಚಗಂಗಾ, ೪) ಅಗ್ರಾಣಿ, ೫) ಡಾನ್, ೬) ಹಿರೇ ಹಳ್ಳ, ೭) ಮಾರ್ಕಂಡೇಯ, ೮) ತಾಮ್ರಪರ್ಣಿ (ತಮಿಳು ನಾಡಿನಲ್ಲಿಯೂ ಒಂದು ತಾಮ್ರಪರ್ಣಿ ಇದೆ), ೯) ಹಿರಣ್ಯಕೇಶಿ, ೧೦) ದೊಡ್ಡಹಳ್ಳ, ೧೧) ಬೋರ್ ನಾಲಾ, ೧೨) ಬೋರ್ ನದಿ, ೧೩) ಅಮರ್ಜಾ, ೧೪) ಕಾಗ್ನ, ೧೫) ಬೆನ್ನಿಹೊರ, ೧೬) ಸುವರ್ಣ ಮುಖಿ, ೧೭) ಚಿನ್ನಹಗರಿ, ೧೮) ಪೆದ್ದವಂಕ (ವೇದಾವತಿ), ೧೯) ಪೆದ್ದವಂಕ (ತುಂಗಭದ್ರಾ), ೨೦) ಗಾರ್ಜಿ ವಂಕ, ೨೧) ಗೊಂಡೆ ಹಳ್ಳ, ೨೨) ದೊರಿಯ ಹಳ್ಳ, ೨೩) ಕತ್ರಹಳ್ಳ, ೨೪) ಸಾರನಾಲಾ, ೨೫) ಕೊಯ್ನಾ, ೨೬) ಮೌಸಿ- ಇತ್ಯಾದಿ ಇತ್ಯಾದಿ.

ಈ ಎಲ್ಲ ಉಪನದಿಗಳಲ್ಲಿ ತುಂಗಭದ್ರೆಯೇ ದೊಡ್ಡದು. ಇನ್ನೂ ಸ್ವಲ್ಪ ವಿಸ್ತರಿಸಿ ಹೇಳಬೇಕೆಂದರೆ ಕೃಷ್ಣಾ-ಕಾವೇರಿಯ ಎಲ್ಲ ಉಪನದಿಗಳಲ್ಲಿ ತುಂಗಭದ್ರೆಗೇ ಮೊದಲ ಸ್ಥಾನ. ತುಂಗಾ-ಭದ್ರಾ ಈ ಎರಡೂ ನದಿಗಳು ಒಂದುಗೂಡಿ ತುಂಗಭದ್ರೆಯಾಗಿ, ಆಂಧ್ರ ಪ್ರದೇಶದ ಕರ್ನೂಲ್ ಬಳಿ ಕೃಷ್ಣಾ ನದಿಯೊಂದಿಗೆ ಸೇರಿಬಿಡುತ್ತದೆ. ಇದರ ಉದ್ದ ೬೪೫ ಕಿಲೋ ಮೀಟರುಗಳು. ಇದಕ್ಕಿಂತ ದಕ್ಷಿಣ ಭಾರತದ ಮುಖ್ಯ ನದಿ ಕಾವೇರಿ ೧೫೦ ಕಿಲೋಮೀಟರ್ ಮಾತ್ರ ಜಾಸ್ತಿ ಇದೆ.

'ಗಂಗಾಸ್ನಾನ ತುಂಗಾಪಾನ' ಎನ್ನುವುದು ಒಂದು ಹಳೆಯ ಮಾತು. ಎಂದರೆ ಸ್ನಾನಕ್ಕೆ ಗಂಗೆ ಪ್ರಶಸ್ತವಂತೆ, ಕುಡಿಯಲು ತುಂಗೆಯ ನೀರು ಬಹಳ ರುಚಿಯಂತೆ. ಇದೂ ಒಂದಾನೊಂದು ಕಾಲದ ಮಾತೇ. ಪರಿಸರ ಎನ್ನುವುದು ಸಂಪೂರ್ಣ ಹಾಳಾಗಿರುವ ಇಂದಿನ ದಿನಗಳಲ್ಲಿ ಹೆಣಗಳು ತೇಲುವ ಕಾಶಿಯ ಗಂಗೆಯಲ್ಲಿ ಸ್ನಾನ ಮಾಡಿದರೆ ದೇಹ ಶುದ್ಧಿ ಆದೀತೆ? ಈ ಮಾತು ಬಿಡಿ. ನಂಬಿಕೆ ಇರುವವರು ಜಗಳಕ್ಕೆ ಬಂದಾರು. ತ್ರಿಶೂಲ

ಈಟಿ ಭರ್ಜಿ ಮಂತಾದ ಪುರಾತನ ಆಯುಧಗಳನ್ನು ಕೈಗೆತ್ತಿಕೊಂಡು ಕುರಿಗಳಂತೆ ಕಿರುಚಿಕೊಂಡಾರು.

ತುಂಗಭದ್ರೆಗೆ ಮತ್ತೂ ಒಂದು ವಿಶೇಷ ಇದೆ. ಹೌದು, ಒಂದು ಸಾಮ್ರಾಜ್ಯ ಈ ನದಿಯ ದಂಡೆಯಲ್ಲಿಯೇ ತಲೆ ಎತ್ತಿತ್ತು. ಅದೇ ವಿಜಯನಗರ ಸಾಮ್ರಾಜ್ಯ. ಕಾವೇರಿ ನದಿಯ ದಂಡೆಯಲ್ಲಿ ಮೈಸೂರು ಅರಸ ವಂಶ ತಲೆ ಎತ್ತಿದಂತೆ, ತುಂಗಭದ್ರೆಯ ದಂಡೆಯಲ್ಲಿ ವಿಜಯನಗರ. ಆದರೆ ಒಂದು ದುರಂತ. ಮೈಸೂರು ಅರಸವಂಶ ನಮ್ಮ ನಾಡಿಗೆ ಸ್ವಾತಂತ್ರ್ಯ ಬರುವವರೆಗೂ ಮುಂದುವರಿಯಿತು. ಆದರೆ ವಿಜಯನಗರ ಸಾಮ್ರಾಜ್ಯ ಮಧ್ಯದಲ್ಲಿಯೇ ಕಮಟಿ ಹೋಯಿತು.

ಕಾವೇರಿ–ಕೃಷ್ಣಾ ನದಿಗಳ ಹರವಿನಲ್ಲಿ, ಪ್ರಾಚೀನ ಕಾಲದಲ್ಲಿ ಹಲವು ಸಾಮ್ರಾಜ್ಯಗಳು ತಲೆ ಎತ್ತಿದ್ದರೂ ಪ್ರಖ್ಯಾತವಾಗಿದ್ದರೂ ಉದಾಹರಣೆಗೆ ಗಂಗರು, ಚೋಳರು, ಹೊಯ್ಸಳರು– ಇತ್ಯಾದಿ ಇತ್ಯಾದಿ ಈ ನದಿಗಳ ದಂಡೆಯಲ್ಲಿ ನಮಗೆ ಸ್ವಾತಂತ್ರ್ಯ ಸಿಗುವವರೆಗೂ ಇದ್ದುದು ಮೈಸೂರು ಅರಸವಂಶ ಒಂದೇ.

ಒಂದು ವಿಚಾರದಲ್ಲಿ ಮಾತ್ರ ನಾವು ನಮ್ಮ ಹಿರಿಯರಿಗೆ ಕೃತಜ್ಞತೆಗಳನ್ನು ಸಲ್ಲಿಸಲೇಬೇಕಾಗಿದೆ. ಉತ್ತರದಲ್ಲಿ ಮೌರ್ಯರು, ದಕ್ಷಿಣದಲ್ಲಿ ಚೋಳರು, ವಿಜಯನಗರದ ಅರಸರು ಮತ್ತು ಮೈಸೂರು ಅರಸರು ಮಾಡಿದಷ್ಟು ನೀರಾವರಿ ಕೆಲಸಗಳನ್ನು ಭಾರತದಲ್ಲಿ ಬೇರೆ ಯಾವ ಅರಸರೂ ಮಾಡಿಲ್ಲ.

ಸರಿ, ಚರಿತ್ರೆ ಇತಿಹಾಸ– ಇಂಥವನ್ನು ಬಿಟ್ಟು ಈಗ ನಮ್ಮ ನೀರಿನ ಕೃಷ್ಣಾ ನದಿಯ ವಿಚಾರಕ್ಕೆ ಮತ್ತೆ ಬರೋಣ.

ಕೃಷ್ಣಾ ನದಿಗೆ ಹಲವು ಉಪನದಿಗಳು ಇವೆಯಷ್ಟೆ ಅವುಗಳಲ್ಲಿ ತುಂಗಭದ್ರಾ ಮತ್ತು ಭೀಮಾ ಬಹಳ ಮುಖ್ಯವಾದದ್ದು.

ತುಂಗಭದ್ರೆಗೆ ಏನು ವಿಶೇಷ ಎನ್ನುತ್ತೀರೋ? 'ನೀನು ತುಂಗಭದ್ರೆಯ ಪಕ್ಷಪಾತಿ', ಹಾಗೆನ್ನುವ ಆಕ್ಷೇಪಣೆಯೋ? ಹಾಗಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಎರಡು ದೊಡ್ಡ ಅಣೆಕಟ್ಟುಗಳು ತುಂದಭದ್ರೆಗೆ ಆಗಿವೆ. ಒಂದು, ಹೊಸಪೇಟೆ ಬಳಿಯ ತುಂಗಭದ್ರಾ ಅಣೆಕಟ್ಟು ಮತ್ತೊಂದು ಆಲಮಟ್ಟಿ ಅಣೆಕಟ್ಟು. ಅನೇಕ ಪ್ರಧಾನ ನದಿ ಮತ್ತು ಉಪನದಿಗಳಿಗೆ ಅಣೆಕಟ್ಟುಗಳು ಆಗಿದ್ದರೂ ಆಗುತ್ತ ಇದ್ದರೂ ಇವೂ ದೊಡ್ಡ ಅಣೆಕಟ್ಟುಗಳೇ ಆದುದರಿಂದ ಮುಖ್ಯವಾಗಿ ಇಲ್ಲಿ ಇವುಗಳನ್ನು ಪ್ರಸ್ತಾಪಿಸ ಬೇಕಾಯಿತು.

ಮಹಾರಾಷ್ಟ್ರದ ಸತಾರಾ, ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳಿಗೆ ನೀರುಣಿಸಿದ ಕೃಷ್ಣಾ ಕರ್ನಾಟಕಕ್ಕೆ ಪ್ರವೇಶಿಸುತ್ತದೆಯಷ್ಟೆ ಈ ನದಿ ಉತ್ತರ ಕರ್ನಾಟಕದ ಬಿಜಾಪುರ

ರಾಯಚೂರು ಗುಲ್ಬರ್ಗಗಳ ಮೂಲಕ ಹಾಯ್ದು ಆಂಧ್ರ ಪ್ರಾಂತ್ಯಕ್ಕೆ ಪ್ರವೇಶಿಸಿ, ಡೆಲ್ಟಾ ಮಾಡಿಬಿಡುತ್ತದೆ. ಎಂದರೆ ಸಮೃದ್ಧಿ ಪ್ರದೇಶವನ್ನಾಗಿಸುತ್ತದೆ. ಹೌದು, ಈ ನದಿಗಳು ಪಶ್ಚಿಮಘಟ್ಟ ಶ್ರೇಣಿಯಲ್ಲಿ ಜನಿಸಿ ಪೂರ್ವಕ್ಕೆ ಓಡಿ ಆಯಾಯಾ ನಾಡುಗಳಿಗೆ ಸಿರಿಯನ್ನು ಚೆಲ್ಲುತ್ತವೆ- ನಿಜ.

ಹಾಗಂತ ನಾವೇನೂ ನಿರಾಶರಾಗಬೇಕಿಲ್ಲ. ಕೃಷ್ಣೆ ನಮಗೂ ಸಾಕಷ್ಟು ನೀರುಣಿಸುತ್ತಾಳೆ. ನಮ್ಮ ಹೊಟ್ಟೆಯನ್ನು ತುಂಬಿಸುತ್ತಾಳೆ. ಭಯ ಬೀಳಬೇಕಾಗಿಲ್ಲ.

ಕರ್ಣಾಟಕಕ್ಕೆ ಪ್ರವೇಶಿಸುವುದಕ್ಕೆ ಮೊದಲೇ ಕೃಷ್ಣಾ ಮಹಾರಾಷ್ಟ್ರದಲ್ಲಿ ತನ್ನ ಒಡಲೊಳಗೆ ಹಲವು ಉಪನದಿಗಳನ್ನು ಸೇರಿಸಿಕೊಳ್ಳುತ್ತಾಳೆ. ಇಲ್ಲಂತೂ ಘಟಪ್ರಭಾ-ಮಲಪ್ರಭಾ ಇದ್ದೇ ಇವೆ. ಜತೆಗೆ ದೊಡ್ಡ ನದಿ ತುಂಗಭದ್ರಾ, ಆಂಧ್ರದಲ್ಲೂ ಕೆಲವು ಕಿರುನದಿಗಳು. ಎಲ್ಲರನ್ನೂ ಮೈಗೂಡಿಸಿಕೊಂಡ ಕೃಷ್ಣಾ ತುಂಬಿದ ಮುತ್ತೈದೆಯಂತೆ ಶ್ರೀಮಂತಳಾಗುತ್ತಾಳೆ. ಕರ್ಣಾಟಕದ ದೊಡ್ಡ ನದಿ ಆಗುತ್ತಾಳೆ.

ಕೃಷ್ಣಾ ಮತ್ತು ಅದರ ಉಪನದಿಗಳ ವ್ಯಾಪ್ತಿ ಎಷ್ಟು? ನಮ್ಮ ಉದ್ದೇಶ ಇಷ್ಟೇ. ಬರೇ ಅತ್ತೆ-ಸೊಸೆ ಜಗಳ ಆ ಜಗಳ ಈ ಜಗಳ ಇಂಥ ಕಥೆಗಳು ಸೀರಿಯಲ್ಲುಗಳನ್ನೇ ನೀವು ಟಿವಿಯಲ್ಲಿ ನೋಡಿಕೊಂಡಿದ್ದರೆ ಸಾಲದು. ನೀವು ಹಾಗೆ ಕುಳಿತು ಟಿವಿ ನೋಡುತ್ತ ಇರಬೇಕಾದರೆ, ಹೊಟ್ಟೆತುಂಬಾ ಗಡದ್ದು ತಿಂದು ಕುಳಿತುಕೊಳ್ಳಬೇಕಷ್ಟೆ

ಹಾಗೆ ನಿಮ್ಮ ಹೊಟ್ಟೆತುಂಬಿಸುವ ನದಿ ಉಪನದಿಗಳ ವಿಚಾರಗಳನ್ನು ಸಾಕಷ್ಟು ತಿಳಿದುಕೊಳ್ಳಬೇಕಲ್ಲವೇ? ವಿಷಯ ತಿಳಿಯದಿದ್ದರೆ ಬಲ್ಲವರಿಂದ ಕೇಳಿಯಾದರೂ ತಿಳಿದುಕೊಳ್ಳಬೇಕು. ಇದು ಮುಖ್ಯ.

ಈ ಪಟ್ಟಿಯನ್ನು ನಿಮಗೆ ನೀಡುವ ಉದ್ದೇಶ ೭ನೆಯ ಸಂಖ್ಯೆಯಲ್ಲಿರುವ ಪಂಚಗಂಗಾ ಬಿಟ್ಟರೆ ಉಳಿದ ಎಲ್ಲ ಉಪನದಿಗಳು - ಕೆಲವನ್ನು ಉಪನದಿ ಎನ್ನುವುದಕ್ಕಿಂತ ಸಣ್ಣ ಸಣ್ಣ ಹೊಳೆಗಳು ಎನ್ನುವುದೇ ಉತ್ತಮ - ಕರ್ಣಾಟಕದಲ್ಲಿ ಹರಿಯುತ್ತವೆ. ಮುಖ್ಯನದಿಯಾದ ಕೃಷ್ಣಾ ಮಾತ್ರ ಕರ್ಣಾಟಕಕ್ಕಿಂತ ಆಂಧ್ರಪ್ರದೇಶದಲ್ಲಿ ೫೮ ಮೈಲು ಜಾಸ್ತಿ ಹರಿಯುತ್ತದೆ.

ಕ್ರಮ ಸಂಖ್ಯೆ	ನದಿ ಹಾಗೂ ಉಪನದಿ	ಉದ್ದ: ಮೈಲುಗಳ ಲೆಕ್ಕ				
		ಮಹಾರಾಷ್ಟ್ರ	ಕರ್ಣಾಟಕ	ಆಂಧ್ರ	ಸಾಮಾನ್ಯ	ಒಟ್ಟು ಮೊತ್ತ
೧	೨	೩	೪	೫	೬	೭
೧.	ಕೃಷ್ಣಾ	೧೮೬	೩೦೦	೩೫೮	೨೬	೮೭೦
೨.	ಘಟಪ್ರಭಾ	೩೭	೧೩೪	-	೫	೧೭೬
೩.	ಮಲಪ್ರಭಾ (ಸಿಕ್ಕಿಲ್ಲ)	-	-	-	-	-

೧	೨	೩	೪	೫	೬	೭
೪.	ಭೀಮಾ	೩೦೩	೧೮೩	–	೫೨	೫೩೫
೫.	ತುಂಗಭದ್ರಾ	–	೨೩೭	೫೭	೩೬	೩೩೦
೬.	ವೇದಾವತಿ (ಹಗರಿ)	–	೧೮೨	೪೫	೧೬	೨೪೩
೭.	ವೇದಗಂಗಾ	೪೧	೧೨	–	೨	೫೫
೮.	ಧೂದ್‌ಗಂಗಾ	೪೩	೧೨	–	೮	೬೩
೯.	ಪಂಚಗಂಗಾ	೪೪	–	–	೨	೪೬
೧೦.	ಅಗ್ರಾಣಿ	೩೪	೨೬	–	–	೬೦
೧೧.	ಡೋಣಿ	೮	೧೨೨	–	–	೧೩೦
೧೨.	ಹಿರೇಹಳ್ಳ	೨	೨೨	–	–	೨೪
೧೩.	ಮಾರ್ಕಂಡೇಯ	೫	೪೧	–	–	೪೬
೧೪.	ತಾಮ್ರಪರ್ಣಿ	೧೬	೧೬	–	–	೩೨
೧೫.	ದೊಡ್ಡ ಹಳ್ಳ	೩೦	೬	–	–	೩೬
೧೬.	ಹಿರಣ್ಯಕೇಶಿ	೩೯	೧೨	–	೪	೫೫
೧೭.	ಬೋರ್ ನಾಲ	೨೪	೧೮	–	–	೪೨
೧೮.	ಬೋರಿ ನದಿ	೬೬	೧೪	–	–	೮೦
೧೯.	ಅಮರ್ಜಾ	೬	೩೯	–	–	೪೫
೨೦.	ಬೆಣ್ಣೆತೊರೆ	೩೦	೫೫	–	೬	೯೧
೨೧.	ಕಾಗ್ನ	–	೪೪	೪೩	–	೮೭
೨೨.	ಸುವರ್ಣಮುಖಿ	–	೪೫	೬	೩	೫೪
೨೩.	ಚಿನ್ನ ಹಗರಿ	–	–	೮೦	೧೮	೯೮
೨೪.	ಪೆದ್ದವಂಕ (ವೇದಾವತಿ)	–	–	೧೫	೧೪	೨೯
೨೫.	ಪೆದ್ದವಂಕ (ತುಂಗಭದ್ರಾ)	–	೫	೧೨	–	೧೭
೨೬.	ಗಾರ್ಚಿವಂಕ	–	೧೫	೨೦	–	೩೫
೨೭.	ಗೊಂಡೆಹಳ್ಳ	–	೨೧	೩	–	೨೪
೨೮.	ಡೋರಿಹಳ್ಳ	೧೨	೬	–	–	೧೮
೨೯.	ಕಟ್ರ	೫	೭	–	–	೧೨
೩೦.	ಸರನಾಲೆ	–	೨೩	೫	–	೨೮

ಹಾಗೆಯೇ ಭೀಮಾ ಮಹಾರಾಷ್ಟ್ರದಲ್ಲಿ ಜಾಸ್ತಿ. ಕೃಷ್ಣಾ ನದಿಯ ಉಪನದಿಗಳಲ್ಲಿ ಮಹಾರಾಷ್ಟ್ರದಲ್ಲಿ ಇರುವಷ್ಟು ಸಂಖ್ಯೆ ಆಂಧ್ರದಲ್ಲಿ ಇಲ್ಲ, ಕರ್ನಾಟಕದಲ್ಲಿ ಎಲ್ಲವೂ ಇವೆ. ಅನೇಕ ಉಪನದಿಗಳ ಉದ್ದ ಕೇವಲ ೨೦ ಮೈಲುಗಳು ಮಾತ್ರ.

ಒಬ್ಬ ಸೈಂಧವ ; ಮತ್ತೊಬ್ಬ ಕುಳ್ಳ.

ಒಟ್ಟು ಸಾರಾಂಶ ಕರ್ನಾಟಕಕ್ಕೆ ನಿಸರ್ಗ ಏನೂ ಅನ್ಯಾಯ ಮಾಡಿಲ್ಲ, ನಾವು ಮಾತ್ರ ಅಂತರ್ಜಲವನ್ನು ಕುಗ್ಗಿಸಿ ಕಾಡನ್ನು ಕಡಿದು ಬೋಳು ಮಾಡಿ ಪ್ರಕೃತಿಯೊಂದಿಗೆ ಚೆನ್ನಾಟ ಆಡುತ್ತ ಇದ್ದೇವೆ. ಮುಂದೊದಗುವ ಕಷ್ಟ ಪರಂಪರೆಗಳ ಅರಿವಿಲ್ಲದೆಯೇ, ನಮ್ಮ ಮೇಲೆ ನಾವೇ ಗದಾಪ್ರಹಾರ ಮಾಡಿಕೊಳ್ಳುತ್ತಾ ಇದ್ದೇವೆ.

ಒಂದು ನದಿಯ ಪಾತ್ರವನ್ನು ನಾವು ಆಯ್ಕೆ ಮಾಡಿಕೊಂಡಾಗ ಆ ನದಿಯ ಕಣಿವೆ ಪ್ರದೇಶದ ಒಟ್ಟು ವಿಸ್ತೀರ್ಣ, ಅದಕ್ಕೆ ಬಂದು ಸೇರುವ ಉಪನದಿಗಳು, ಅಲ್ಲಿ ದೊರಕುವ ನೀರಿನ ಲಭ್ಯತೆ, ಅಳತೆ-ಪ್ರಮಾಣ ಇತ್ಯಾದಿಗಳನ್ನು ನಾವು ಗುರುತು ಮಾಡುತ್ತೇವಷ್ಟೆ. ಹಾಗೆಯೇ ಆ ಜಲಾನಯನ ಪ್ರದೇಶದ ಇತರೇ ಮೂಲಗಳನ್ನೂ ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಯಾಕೆಂದರೆ ಒಂದು ನದಿ ಮತ್ತು ಉಪನದಿಗಳ ನೀರಿನಿಂದಲೇ ನಮ್ಮ ಸಮಸ್ತ ನೀರಾವರಿ ವ್ಯಾಪ್ತಿ ಹೆಚ್ಚುವುದಿಲ್ಲ. ಪ್ರಾಚೀನ ಕಾಲದ ಕೆರೆ ಕಟ್ಟೆಗಳು, ಬಾವಿ-ಇತ್ಯಾದಿ ಇತರೆ ಜಲಮೂಲಗಳಿಂದ ಆ ಜಲಾನಯನ ಪ್ರದೇಶಕ್ಕೆ ಆಗುವ, ಆಗುತ್ತ ಇರುವಂಥವನ್ನೂ ನಾವು ಲೆಕ್ಕಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ. ಇದು ಬಹಳ ಮುಖ್ಯವಾದ ವಿಚಾರ. ಇದು ೧೯೬೭-೭೦ರ ಲೆಕ್ಕಾಚಾರ.

ವ್ಯವಸಾಯದ ಏರಿಯ '೦೦೦ ಹೆಕ್ಟೇರ್ ಲೆಕ್ಕದಲ್ಲಿ

ಕ್ರಮ ಸಂಖ್ಯೆ	ನೀರಾವರಿಯ ಮೂಲ	ಮಹಾರಾಷ್ಟ್ರ	ಕರ್ನಾಟಕ	ಆಂಧ್ರ ಪ್ರದೇಶ	ಒಟ್ಟು
೧	೨	೩	೪	೫	೬
೧.	ಕಾಲುವೆಗಳು	೧೩೪.೮	೨೫೨.೬	೩೫೨.೬	೭೪೦.೦
೨.	ಕೆರೆಗಳು	೬.೫	೧೬೯.೬	೧೯೬.೧	೩೯೨.೨
೩.	ಕೊಳವೆ ಬಾವಿಗಳು	–	–	೬.೩	೬.೩
೪.	ಬಾವಿಗಳು	೨೯೫.೭	೧೩೫.೭	೧೦೭.೩	೫೩೯.೭
೫.	ಇತರೇ	೫೪.೦	೩೪.೧	೨೦.೯	೧೧೧.೦
	ಒಟ್ಟು	೪೯೧.೦	೫೯೫.೦	೬೮೩.೨	೧೭೬೯.೧

ಈ ಪಟ್ಟಿಯನ್ನು ನೀವು ಗಮನಿಸಿದಾಗ ನದಿ ಉಪನದಿಗಳು ಅಲ್ಲದೆ ಕೃಷ್ಣಾ ನದಿಯ ಜಲಾನಯನ ಪ್ರದೇಶದಲ್ಲಿ ಇತರೇ ಮೂಲದಿಂದ ನೀರನ್ನು ದೊರಕಿಸಿಕೊಂಡು ವ್ಯವಸಾಯ ಮಾಡುತ್ತ ಇರುವ ರಾಜ್ಯಗಳಲ್ಲಿ ಆಂಧ್ರ ಮುಂದಿದೆ. ಅದಕ್ಕೆ ಮೊದಲ ಸ್ಥಾನ. ಎರಡನೆಯದು ಕರ್ಣಾಟಕ, ಮೂರನೆಯ ಸ್ಥಾನಕ್ಕೆ ಮಹಾರಾಷ್ಟ್ರ ತೃಪ್ತಿಪಟ್ಟುಕೊಳ್ಳ ಬೇಕಾಗುತ್ತದೆ.

ಎಲ್ಲ ಮೂಲಗಳಿಂದ ನೀರು ದೊರಕಿಸಿಕೊಳ್ಳುವಲ್ಲಿ ಆಂಧ್ರ ಮುಂದಿದೆ ಸರಿಯೇ. ಬಾವಿಗಳ ಸಂಖ್ಯೆ ಮಾತ್ರ ಮಹಾರಾಷ್ಟ್ರದಲ್ಲಿ ಜಾಸ್ತಿ. ಹೇಳಿಕೊಳ್ಳುವಂಥ ದೊಡ್ಡ ನದಿಗಳು ತಮಿಳುನಾಡಿನಂತೆಯೇ ಮಹಾರಾಷ್ಟ್ರದಲ್ಲಿಯೂ ಇಲ್ಲದಿರುವುದ ರಿಂದ ಆ ರಾಜ್ಯದಲ್ಲಿ ಬಾವಿಗಳ ಸಂಖ್ಯೆ ಅಧಿಕವಾಗಿದೆ. ಕರ್ಣಾಟಕಕ್ಕೆ ಎರಡನೆಯ ಸ್ಥಾನ. ಆಂಧ್ರ ಪ್ರದೇಶಕ್ಕೆ ಮೂರನೆಯ ಸ್ಥಾನ.

ತಮಿಳು ನಾಡಿನಲ್ಲಿ ಕಾವೇರಿಯಾದರೂ ಇದೆ. ಆದರೆ ಮಹಾರಾಷ್ಟ್ರದಲ್ಲಿ ದೊಡ್ಡ ನದಿ ಯಾವುದೂ ಇಲ್ಲ.

ಕೃಷ್ಣಾ ಮತ್ತು ಅದರ ಎಲ್ಲ ಉಪನದಿಗಳ ಕಾರ್ಯಕ್ಷೇತ್ರವನ್ನು ಸಾಕಾರ ಗೊಳಿಸುವುದಕ್ಕೆ ಕರ್ಣಾಟಕದಲ್ಲಿ ಕೃಷ್ಣಾ ಜಲಭಾಗ್ಯ ನಿಗಮ ಸ್ಥಾಪಿಸಲ್ಪಟ್ಟಿದೆ. ಈ ನಿಗಮ ೧೯೯೪ರಲ್ಲಿ ಪ್ರಾರಂಭವಾಗಿದೆ. ಕೃಷ್ಣೆಯ ಮತ್ತು ಅದರ ಎಲ್ಲ ಉಪನದಿಗಳ ಕೆಲಸ ಕಾರ್ಯಗಳನ್ನು ನಿಯಂತ್ರಿಸುವುದೇ ಈ ನಿಗಮದ ಮುಖ್ಯ ಕರ್ತವ್ಯವಾಗಿದೆ.

ಕೃಷ್ಣಾ ಜಲಾಶಯ ವ್ಯಾಪ್ತಿಯಲ್ಲಿ ಮೂರು ರಾಜ್ಯಗಳಲ್ಲಿ ಯಾವ ಯಾವ ಜಿಲ್ಲೆಗಳು ಒಳಗೊಳ್ಳುತ್ತವೆ ಎನ್ನುವ ಒಂದು ಸ್ಥೂಲ ಚಿತ್ರಣವನ್ನು ನೀಡೋಣವೆ?

ಮಹಾರಾಷ್ಟ್ರ : ಪೂನಾ, ಸೊಲ್ಲಾಪುರ, ಸಾಂಗ್ಲಿ, ಕೊಲ್ಲಾಪುರ, ಅಹಮ್ಮದ್ ನಗರ, ರತ್ನಗಿರಿ, ಉಸ್ಮಾನಾಬಾದ್ ಮತ್ತು ಭೀಡ್.

ಕರ್ಣಾಟಕ : ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಹಾಸನ, ಬಳ್ಳಾರಿ, ಬಿಜಾಪುರ, ಬೆಳಗಾಂ, ಧಾರವಾಡ, ಉತ್ತರ ಕನ್ನಡ, ಗುಲ್ಬರ್ಗ, ರಾಯಚೂರು ಮತ್ತು ಬೀದರ್.

ಆಂಧ್ರಪ್ರದೇಶ : ಮಹಬೂಬ್‌ನಗರ, ನಲಗೊಂಡ, ಹೈದರಾಬಾದ್, ವಾರಂಗಲ್, ಕಮ್ಮಂ, ಮೇಡಕ್, ಕರೀಂ ನಗರ, ಕರ್ನೂಲು, ಗುಂಟೂರು, ಕೃಷ್ಣಾ ಮತ್ತು ಅನಂತಪುರ.

ನೀರು ಕೃಷ್ಣಾ ನದಿಯಲ್ಲಿ ಲಭ್ಯವಾಗುವುದು ೨೦೬೦ ಟಿ.ಎಂ.ಸಿ. ಎಂದು ಲೆಕ್ಕ ಹಾಕಿದ್ದಾರೆ. ಈ ನೀರಿನಲ್ಲಿ ಕರ್ಣಾಟಕಕ್ಕೆ ೭೩೪ ಟಿ.ಎಂ.ಸಿ. ದೊರಕುತ್ತದೆ.

ಆಂಧ್ರಪ್ರದೇಶ ೮೧೧ ಟಿ.ಎಂ.ಸಿ. ಮತ್ತು ಮಹಾರಾಷ್ಟ್ರ ೫೮೫ ಟಿ.ಎಂ.ಸಿ. ಪಡೆದುಕೊಂಡಿದೆ.

ಜಿಲ್ಲೆಗಳ ಹಂಚಿಕೆ ಮತ್ತು ಕೃಷ್ಣಾ ಜಲಾಶಯ ಪ್ರದೇಶದ ಅನೇಕ ಸಂಗತಿಗಳನ್ನು ಈಗ ನೀವು ತಿಳಿದುಕೊಂಡಿದ್ದೀರಿ– ಅಷ್ಟೇ ಸಾಕೆ? ಮುಖ್ಯವಾದ ವಿಚಾರವನ್ನೇ ಮರೆತಿರಲ್ಲ.

ನಮ್ಮ ನದಿಗಳು ಯಾಕೆ ಜಗತ್ತಿನ ಎಲ್ಲ ನದಿಗಳೂ ಹಾಗೆಯೇ. ಅವು ತುಂಬಿ ಹರಿಯಬೇಕಾದರೆ, ಅವುಗಳಿಂದ ನೀರಾವರಿಯನ್ನೋ ವಿದ್ಯುತ್ತು ಉತ್ಪನ್ನವನ್ನೋ ಯಾವುದನ್ನು ಮಾಡಬೇಕಾದರೂ ಆಕಾಶದತ್ತ ನಾವು ಮುಖಮಾಡಿ ನೋಡಲೇ ಬೇಕು. ನಿಸರ್ಗಕ್ಕೆ ಕೈ ಜೋಡಿಸಬೇಕು.

ಹೌದು, ಮಳೆ ಬಂದರೇ ನಮ್ಮ ಬಾಳು; ಬದುಕು. ಮಳೆ ಬಂದರೇ ನದಿಗಳ ತುಂಬುವಿಕೆ. ನಿಸರ್ಗ ನಮಗೆ ನೀಡಿರುವ ಅನೇಕ ಕೊಡುಗೆಗಳಲ್ಲಿ ನೀರು ಬಹಳ ಮುಖ್ಯವಾದದ್ದು. ಮಳೆ ಬಾರದೆ ನೀರು ಇಲ್ಲ. ಅದೆಷ್ಟೋ ಕೋಟಿ ಖರ್ಚು ಮಾಡಿ ಮೋಡಗಳ ಮೇಲೆ ಉಪ್ಪು ಸವರಿ ಕೃತಕ ಮಳೆ ಸುರಿಸಿದರೂ, ಅಂಥ ಒಂದು ಪ್ರಯತ್ನವನ್ನು ಮಾಡಿದರೂ, ಸಹಜವಾಗಿ ಕಾಲಾಕಾಲಕ್ಕೆ ತಾನೇ ನಿಗದಿ ಪಡಿಸಿಕೊಂಡಂತೆ ಮಳೆಸುರಿಸುವ ಸುರಿತ ಇದೆಯಲ್ಲ, ಆ ಪ್ರಮಾಣವನ್ನೂ ವೈಭವವನ್ನೂ ಕೋಲಾಹಲ ವನ್ನೂ ಕೃತಕ ಮಳೆಯಿಂದ ಕಾಣಲು ಸಾಧ್ಯವೆ? ಬಾನು ತುಂಬಾ ಗುಡುಗಿ ಫಳ್ ಫಳಾರನೆ ಮಿಂಚು ಕೋರೈಸಿ ಎಳೆಎಳೆಯಾಗಿ ಸಿನುಕಲಾಗಿ ಜೋರಾಗಿ ಧಾರೆಧಾರೆಯಾಗಿ ಮೇಲಿಂದ ಕೆಳಗೆ ಧುಮುಕುವ ನೀರಿನ ವೈಭವ, ಆ ಹಿತವಾದ ಮಳೆವಾಸನೆ, ಆಗ ಬೀಸುವ ಗಾಳಿ, ಮೈಚಳಿ ಚಳಿ– ಆಹಾ ಆ ಸೊಬಗೇ ಸೊಬಗು. ನಿಸರ್ಗದಿಂದ ನಮಗೆ ದೊರಕಿರುವ ಬೆಲೆಕಟ್ಟಲಾಗದ ಸೊಬಗು.

ಸಾಮಾನ್ಯವಾಗಿ ಭಾರತದಲ್ಲಿ ಮೇ ಅಂತ್ಯದೊಳಗೆ ಬೇಸಿಗೆ ಮುಗಿದಿರುತ್ತದೆ. ಪಡುವಣ ಮತ್ತು ಮೂಡಣ ಕಡಲುಗಳಲ್ಲಿ ಶೀತ ವಾತಾವರಣ ಉಂಟಾಗುತ್ತದೆ. ಇದು ಮಳೆಗೆ ಸೂಚನೆ. ನೈಋತ್ಯ ಮಾರುತವೇ ಕೃಷ್ಣಾ ಜಲಾನಯನದ ವ್ಯಾಪ್ತಿಗೆ ಮಳೆಯ ಆಧಾರ.

ಈಗ ನೀವು ಕೃಷ್ಣಾ ಜಲಾಶಯದ ಕರ್ಣಾಟಕದ ನದೀಪ್ರದೇಶಗಳಲ್ಲಿ ಎಷ್ಟು ಎಷ್ಟು ಮಳೆ ಯಾವ ಯಾವ ತಿಂಗಳುಗಳಲ್ಲಿ ಆಗುತ್ತದೆ. ಎಂದು ತಿಳಿದುಕೊಳ್ಳುತ್ತೀರಾ? ಹಾಗೆ ಮಳೆ ಆದರಲ್ಲವೆ ಕೃಷ್ಣೆಯಲ್ಲೋ ವೇದಾವತಿಯಲ್ಲೋ ತುಂಗಭದ್ರೆಯಲ್ಲೋ ಇಲ್ಲವೇ ಇನ್ನಾವುದೇ ನದಿಯಲ್ಲೋ ನೀರುಹರಿಯಲು ತುಂಬಿಕೊಳ್ಳಲು ಸಾಧ್ಯ? ನೀರು ತುಂಬಿಕೊಳ್ಳದೇ ಹೋದರೆ ನಿಮ್ಮ ಅಣೆಕಟ್ಟುಗಳು ಬರಿದಾಗುತ್ತದೆ ಅಲ್ಲವೆ? ಕಾಲುವೆಗಳೂ ಬತ್ತುತ್ತದೆ ಅಲ್ಲವೆ? ಆಮೇಲೆ ವ್ಯವಸಾಯ ಹೇಗೆ ನಡೆದೀತು?

ವಾರ್ಷಿಕ ಮತ್ತು ಕಾಲಾವಧಿಯಲ್ಲಿ ಬೀಳುವ ಮಳೆ

ಪ್ರದೇಶ	ಮಳೆ (ಮಿಲಿಮೀಟರ್)				
	ಜನ ಫೆಬ್ರ	ಮಾರ್ಚ್ ಮೇ	ಜೂನ್ ಸೆಪ್ಟಂ	ಅಕ್ಟೋ ಡಿಸೆಂ	ವಾರ್ಷಿಕ
೧	೨	೩	೪	೫	೬
ಅಪ್ಪರ್ ಕೃಷ್ಣಾ	೫	೬೫	೧೨೮೬	೧೫೨	೧೫೦೮
ಕೃಷ್ಣಾ ಮಧ್ಯಭಾಗ	೭	೬೨	೩೬೬	೧೩೦	೫೬೫
ಘಟಪ್ರಭಾ	೫	೯೨	೬೭೧	೧೫೩	೯೨೧
ಮಲಪ್ರಭಾ	೪	೯೩	೪೩೧	೧೪೭	೬೭೫
ಅಪ್ಪರ್ ಭೀಮಾ	೮	೩೬	೫೨೭	೧೦೫	೬೭೬
ಲೋಯರ್ಭೀಮಾ	೧೨	೫೧	೪೯೯	೯೯	೬೬೧
ಲೋಯರ್ ಕೃಷ್ಣಾ	೧೨	೬೦	೫೦೮	೧೪೧	೭೨೧
ತುಂಗಭದ್ರಾ	೮	೯೫	೬೨೨	೧೫೯	೮೮೪
ವೇದಾವತಿ	೯	೧೦೩	೨೮೮	೧೬೮	೫೬೮
ಮೌಸಿ	೧೪	೬೫	೫೪೬	೧೨೪	೭೪೯
ಪೆಲ್ಲೇರು	೧೪	೫೫	೬೦೫	೧೩೬	೮೧೦
ಮುನೇರು	೧೯	೭೮	೭೨೩	೧೩೪	೯೫೪

ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬೀಳುವ ಮಳೆ ಕೆಲವು ಕಡೆ ೨೦೦೦ ಅಡಿಗಳಿಂದ ೭೦೦೦ ಅಡಿಗಳ ಎತ್ತರದ ಪ್ರದೇಶಗಳನ್ನು ಒಳಗೊಂಡಿರುತ್ತದೆ. ಪಶ್ಚಿಮ ಘಟ್ಟ ಪ್ರದೇಶ ಕೆಲವು ಕಡೆ ಅತಿ ಎತ್ತರ ಇದ್ದರೆ ಮತ್ತೆ ಕೆಲವು ಕಡೆ ಇಳಿಜಾರಿನಿಂದ ಕೂಡಿರುತ್ತದೆ. ಸಮತಟ್ಟು ಪ್ರದೇಶ ಎಂದರೆ ಬಯಲು ಸಾಮಾನ್ಯ.

ಮಳೆಯ ಮೋಡಿ ಸಾಮಾನ್ಯವಾಗಿ ಒಂದೇ ಬಗೆಯಾಗಿ ಇರುತ್ತದೆ, ನಿಜ. ಆದರೆ ನಿಸರ್ಗದ ವೈಪರೀತ್ಯಗಳಿಂದ ಲಾಸ್ಯಗಳಿಂದ ಒಂದೊಂದು ವರ್ಷ ಈ ಲೆಕ್ಕಾಚಾರ ಏರುಪೇರು ಆಗುವುದು ಉಂಟು. ನದಿಗಳು ಕೆಲವು ವರ್ಷ ರೌದ್ರ ತಾಳುತ್ತವೆ. ಮತ್ತೆ ಕೆಲವು ವರ್ಷಗಳಲ್ಲಿ ಕಾಲುವೆಗಳು ಎಲ್ಲವೂ ಬರಿದು. ಹಸಿದವನ ಮುಖದ ಹಾಗೆ ಬತ್ತಿಹೋಗಿರುತ್ತವೆ.

ಉತ್ತರ ಕರ್ನಾಟಕದ ಹಲವು ಭಾಗಗಳನ್ನು ಹಿಂದೆ ಬರಪೀಡಿತ ಪ್ರದೇಶಗಳನ್ನಾಗಿಯೇ

ಪರಿಗಣಿಸಿದ್ದರು. ಈಗಷ್ಟೆ ಹೊಸ ಹೊಸ ಅಣೆಕಟ್ಟುಗಳಿಂದ ನೀರಾವರಿ ವ್ಯಾಪ್ತಿಯನ್ನು ಹೆಚ್ಚಿಸಿ ಹಸಿರು ಕಂಗೊಳಿಸುವ ಪ್ರಯತ್ನ ಎಡೆಬಿಡದೆ ನಡೆಯುತ್ತ ಇದೆ. ಆದರೂ ಕೃಷ್ಣಾ ವ್ಯಾಪ್ತಿಯ ನಮ್ಮ ಪಾಲಿನ ನೀರನ್ನು ಅಥವಾ ನೀರಾವರಿಯ ಕೆಲಸಗಳನ್ನು ಕರ್ನಾಟಕ ಇನ್ನೂ ಮಾಡಿ ಮುಗಿಸಿಲ್ಲ. ಆಂಧ್ರ ಮುಗಿಸಿ ಬಿಟ್ಟಿದೆ. 'ಬಿ' ಸ್ಕೀಮಿಗೂ ಕೈಚಾಚುತ್ತ ಇದೆಯೆಂದು ಮೊನ್ನೆ ಬೊಬ್ಬೆ ಆಗಿದೆ. ನಮ್ಮ ರಾಜಕೀಯ ನಾಯಕರು ಇವರ ಮೇಲೆ ಅವರು, ಅವರ ಮೇಲೆ ಇವರು ಗೂಬೆ ಕೂರಿಸುತ್ತ ಇದ್ದಾರೆ.

ಹಿಂದೆ ಕರ್ನಾಟಕದ ನದೀಪ್ರದೇಶಗಳ ವ್ಯಾಪ್ತಿಯಲ್ಲಿ ಬೀಳುವ ಮಳೆಯ ಪ್ರಮಾಣದ ವಿವರಗಳನ್ನು ನೀಡಿದ್ದೇವಷ್ಟೆ. ಈಗ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಮೂರೂ ರಾಜ್ಯಗಳಲ್ಲಿ ಬೀಳುವ ಮಳೆಯ ಪ್ರಮಾಣದ ಕಡೆಗೆ ಬೆಳಕು ಹಾಯಿಸೋಣ.

ಇದು ಚದುರ ಮೈಲುಗಳ ಲೆಕ್ಕಾಚಾರವಾಗಿದೆ.

ಶೇಕಡಾ ವಿವರ	ಕರ್ನಾಟಕ	ಮಹಾರಾಷ್ಟ್ರ	ಆಂಧ್ರಪ್ರದೇಶ
೧	೨	೩	೪
ವಾರ್ಷಿಕ			
ಶೇಕಡಾ ೨೦ಕ್ಕಿಂತ ಹೆಚ್ಚು	೪೦.೦೪೫	೨೫,೭೭೭	೨೯,೪೪೧
ಶೇಕಡಾ ೨೫ಕ್ಕಿಂತ ಹೆಚ್ಚು	೩೩.೫೦೪	೨೦,೯೮೬	೧೨,೧೭೧
ಶೇಕಡಾ ೩೦ಕ್ಕಿಂತ ಹೆಚ್ಚು	೧೨,೯೦೩	೧೧,೩೦೯	೯೪೭
ಜೂನ್-ಸೆಪ್ಟೆಂಬರ್			
ಶೇಕಡಾ ೨೦ಕ್ಕಿಂತ ಹೆಚ್ಚು	೪೩,೦೫೭	೨೬,೦೧೨	೨೯,೪೪೧
ಶೇಕಡಾ ೩೦ಕ್ಕಿಂತ ಹೆಚ್ಚು	೨೯,೬೩೫	೨೦,೩೮೩	೧೨,೩೬೭
ಶೇಕಡಾ ೪೦ಕ್ಕಿಂತ ಹೆಚ್ಚು	೫೫೬೫	೧೬೦೬	೧೩೪೦
ಅಕ್ಟೋಬರ್-ಡಿಸೆಂಬರ್			
ಶೇಕಡಾ ೫೦ಕ್ಕಿಂತ ಹೆಚ್ಚು	೪೧,೫೨೮	೨೬,೮೦೦	೨೯,೪೪೧
ಶೇಕಡಾ ೬೦ಕ್ಕಿಂತ ಹೆಚ್ಚು	೩೦,೬೯೬	೨೬,೦೦೯	೨೭,೮೫೧
ಶೇಕಡಾ ೮೦ಕ್ಕಿಂತ ಹೆಚ್ಚು	೧೨೪೮	೫೭೦೮	ಇಲ್ಲ
ಶೇಕಡಾ ೧೦೦ಕ್ಕಿಂತ ಹೆಚ್ಚು	ಇಲ್ಲ	೭೨೩	ಇಲ್ಲ

ಕರ್ನಾಟಕದಲ್ಲಿ ಕೃಷ್ಣಾ ನದಿ ಮತ್ತು ಅದರ ಜಲಾನಯನ ಕ್ಷೇತ್ರವೇ ದೊಡ್ಡದು. ಇದೇ ಮೊದಲನೆಯದು. ಎರಡನೆಯದು ಕಾವೇರಿ. ಕರ್ನಾಟಕದ ಭೌಗೋಳಿಕ ಕ್ಷೇತ್ರದಲ್ಲಿ ಈ

ನೀರಿನ ಪಾತ್ರ ಶೇಕಡಾ ೬೦ರಷ್ಟನ್ನು ವ್ಯಾಪಿಸಿಕೊಂಡಿದೆ ಎಂದು ಹಿಂದೆಯೇ ಹೇಳಿದ್ದೇವಷ್ಟೆ ಇವುಗಳಿಂದ ಹರಿದು ಹೋಗುವ ವಾರ್ಷಿಕ ಜಲಪ್ರಮಾಣ ಸರಾಸರಿ ೯೭೦ ಟಿ.ಎಂ.ಸಿ. ಎಂದರೆ ಹತ್ತು ಕೋಟಿ ಕ್ಯುಬೆಕ್ಸ್ ಅಡಿಗಳ ನೀರು ಅಥವಾ ಸಹಸ್ರ ದಶಲಕ್ಷ ಘನ ಅಡಿಗಳ ನೀರು.

ಎರಡನೆಯದು ತಮಿಳರ ಬೊಬ್ಬೆಯ ಕಾವೇರಿ ಅಲ್ಲವೆ ? ಇದರ ಭೌಗೋಳಿಕ ಕ್ಷೇತ್ರ ಕೇವಲ ಶೇಕಡಾ ೨೦%. ಕೃಷ್ಣಾ ಇದಕ್ಕಿಂತ ಮೂರು ಪಾಲು ದೊಡ್ಡದು. ಕಾವೇರಿಯ ಜಲಪ್ರಮಾಣ ೩೮೮ ಟಿ.ಎಂ.ಸಿ. ಎಂದು ಲೆಕ್ಕಹಾಕಿದ್ದಾರೆ. ಇನ್ನು ಕರ್ಣಾಟಕದಲ್ಲಿ ಉಳಿದಿರುವುದು ಗೋದಾವರಿ, ಪಾಲಾರ್. ಪೆಣ್ಣಾರ್ ಹೀಗೆ. ಇವುಗಳು ಎಲ್ಲವನ್ನೂ ಒಟ್ಟುಗೂಡಿಸಿದರೂ ಶೇಕಡಾ ೭ರಷ್ಟು ಆಗುತ್ತದೆ. ಈ ಎಲ್ಲ ನದಿಗಳ ಒಟ್ಟು ಮೊತ್ತ ಎಂದರೆ ಜಲಾನಯನ ಕ್ಷೇತ್ರ ಕರ್ಣಾಟಕದಲ್ಲಿ ಶೇಕಡಾ ೮೭ ಆಗುತ್ತದೆ. ೯೭೦+೩೮೮+೭= ಒಟ್ಟು೧೩೬೫ ಟಿ.ಎಂ.ಸಿ. ನೀರು.

ಈಗ ಕರ್ಣಾಟಕದಲ್ಲಿ ಒಟ್ಟು ಜಲಾನಯನ ಕ್ಷೇತ್ರದ ವಿವರಗಳನ್ನು ಒದಗಿಸೋಣ.

೩/೨೦೦೦ ಎಲ್ಲವೂ ಹೆಕ್ಟೇರ್ ಲೆಕ್ಕ.

ಜಲಾನಯನ ಕ್ಷೇತ್ರ	ಅಂತಿಮ ಸಾಮರ್ಥ್ಯ	ಸಾಧಿಸಿರುವ ಸಾಮರ್ಥ್ಯ
ಕೃಷ್ಣಾ	೧೮.೪೯ ಲಕ್ಷ	೯.೭೩ ಲಕ್ಷ
ಕಾವೇರಿ	೫.೨೭ ಲಕ್ಷ	೨.೯೫ ಲಕ್ಷ
ಗೋದಾವರಿ	೦.೪೨ ಲಕ್ಷ	೦.೨೪ ಲಕ್ಷ
ಇತರೇ ನದಿಗಳು	೦.೧೨ ಲಕ್ಷ	–
ಒಟ್ಟು	೨೪,೩೦ ಲಕ್ಷ	೧೨.೮೮ ಲಕ್ಷ

ಈಗ ಕೃಷ್ಣಾ ಜಲಾನಯನ ವ್ಯಾಪ್ತಿಯ ಕೃಷ್ಣಾ ಮತ್ತು ಅದರ ಉಪನದಿಗಳಿಗೆ ಎಬ್ಬಿಸಿರುವ ಅಣೆಕಟ್ಟುಗಳ ಎತ್ತರ, ಉದ್ದ, ನೀರಿನ ಸಾಮರ್ಥ್ಯ, ಯಾವ ಊರಿಗೆ ಈ ಅಣೆಕಟ್ಟುಗಳು ಸಮೀಪವಾಗಿದೆ, ಯಾವ ವರ್ಷದಲ್ಲಿ ಈ ಅಣೆಕಟ್ಟುಗಳ ಕೆಲಸ ಮುಗಿದಿದೆ ಇತ್ಯಾದಿ- ಒಂದು ಪಟ್ಟಿ ಕೊಡೋಣವೆ? ನೀವು ಈ ಮಾಹಿತಿಗಳನ್ನು ಅವಶ್ಯ ತಿಳಿದುಕೊಳ್ಳಬೇಕು. ಯಾಕೆಂದರೆ ಕೃಷ್ಣಾ ಮತ್ತು ಅದರ ಉಪನದಿಗಳ ಒಂದು ಪಕ್ಷಿನೋಟ ಇಲ್ಲವೇ ಒಂದು ಹಾರು ಹಾರಿದ ಅನುಭವವೂ ಉಂಟಾಗುತ್ತದೆ. ಎಲ್ಲ ನದಿ ಉಪನದಿಗಳಲ್ಲಿಯೂ ಹರಹರಾ ಶಿವಶಿವಾ ಎಂದು ಮುಳುಗಿ ಮಿಂದ ಹಾಗೆಯೂ ಆಗುತ್ತದೆ.

ಕೃಷ್ಣಾ ಮತ್ತು ಅದರ ಉಪನದಿಗೆ ಎಬ್ಬಿಸಿರುವ ಅಣೆಕಟ್ಟು ರಿಸರ್‌ವಾಯರ್ ಹಾಗೂ ಒಡ್ಡುಗಳ ವಿವರ

ಕ್ರಮ ಸಂಖ್ಯೆ	ಅಣೆಕಟ್ಟು	ಮುಗಿದ ವರ್ಷ	ನದಿಯ ಹೆಸರು	ಸಮೀಪದ ಊರು ನಗರ	ಅಣೆಕಟ್ಟಿನ ಎತ್ತರ	ಉದ್ದ (ಮೀಟರ್)	ಒಟ್ಟು ಸಾಮರ್ಥ್ಯ ೧೦M³
೧	೨	೩	೪	೫	೬	೭	೮
೧.	ಭದ್ರಾ	೧೯೬೫	ಭದ್ರಾ	ಶಿವಮೊಗ್ಗ	೭೬.೮೧	೧೭೦೮.೦೦	೨೦,೨೫,೦೦೦
೨.	ಅಂಬ್ಲಿಗೋಳ ಟ್ಯಾಂಕ್	೧೯೬೪	ಸಾಲೂರ್ ಹಳ್ಳ	ಶಿಕಾರಿಪುರ	೨೦.೭೭	೮೮೧.೦೦	೧೨,೩೦೦
೩.	ದೇವರ ಬಿಳಿಗೆರೆ ಟ್ಯಾಂಕ್	೧೯೮೫	ಸುವರ್ಣಮುಖಿ	ದಾವಣಗೆರೆ	೧೭.೪	೧೨೦೪.೦೦	೨೬೧೯
೪.	ಗಾಯತ್ರಿ ರಿಸರ್ವಾಯರ್	೧೯೬೩	ಸುವರ್ಣಮುಖಿ	ಹಿರಿಯೂರು	೧೭.೦೭	೧೦೨೧.೫೩	೨೭,೭೦೦
೫.	ಜಂಭದ ಹಳ್ಳಿ ಅಣೆ	೧೯೬೮	ಜಂಭದ ಹಳ್ಳಿ	ಚಿಕ್ಕಮಗಳೂರು	೩೧.೭	೮೩೮.೧೦	೯೬೮೫
೬.	ವಾಣೀವಿಲಾಸ ಸಾಗರ	೧೯೦೭	ವೇದಾವತಿ	ಹಿರಿಯೂರು	೪೩.೨೮	೪೦೫.೪೦	೮,೫೦,೩೦೦
೭.	ತುಂಗಾ						

	ಅಣೆಕಟ್ಟು	೧೯೫೪	ತುಂಗಾ	ಶಿವಮೊಗ್ಗ	೧೮.೧೩	೨೬೫.೭೪	೩೭,೮೯೦
೧	೨	೩	೪	೫	೬	೭	೮
೮.	ಎಚ್.ಬಿ.ಹಳ್ಳಿ ಪಿಕ್‌ಅಪ್	೧೯೭೮	ಚಿಕ್ಕಹಗರಿ	ಹೊಸಪೇಟೆ	೧೭.೬೧೭	೧೭೫೯.೦೦	–
೯.	ಹಿರೇಹಳ್ಳ ಅಣೆ	ಕೆಲಸ ನಡೆಯುತ್ತ ಇದೆ	ಹಿರೇಹಳ್ಳ	ಕೊಪ್ಪಳ	೧೭.೬೧೭	೧೭೫೯	–
೧೦.	ಕನಕನಾಲಾ	೧೯೭೫	ಕನಕನಾಲಾ	ರಾಯಚೂರು	೨೦.೧೨	೭೮೧.೪೦	–
೧೧.	ಮಸಿನಾಲಾ	ಕೆಲಸ ನಡೆಯುತ್ತ ಇದೆ	ಮಸಿನಾಲಾ	ರಾಯಚೂರು	೨೩.೧೬	೮೧೪.೦೦	–
೧೨.	ನರಿಹಳ್ಳಿ ಅಣೆ	೧೯೫೩	ತುಂಗಭದ್ರಾ	ಹೊಸಪೇಟೆ	೪೯.೩೭	೨,೪೪೦.೨೨	–
೧೩.	ತುಂಗಭದ್ರಾ ಡ್ಯಾಂ	೧೯೫೩	ತುಂಗಭದ್ರಾ	ಹೊಸಪೇಟೆ	೪೯.೩೭	೨,೪೪೦.೨೨	–
೧೪.	ಘಟಪ್ರಭಾ	೧೯೭೭	ಘಟಪ್ರಭಾ	ಬೆಳಗಾಂ	೬೨.೪೮	೧೦,೧೮೩.೦೦	೧೪,೪೪೪.೩೨೦
೧೫.	ಹಿಪ್ಪರಗಿ	ಕೆಲಸ					

	ಬ್ಯಾರೇಜ್	ನಡೆದಿದೆ	ಕೃಷ್ಣಾ	ಜಮಖಂಡಿ	೨೬.೦೦	೫,೭೬೩.೦೦	೧,೬೯೮.೦೦
೧	೨	೩	೪	೫	೬	೭	೮
೧೬.	ಮಲಪ್ರಭಾ ಡ್ಯಾಂ	೧೯೭೨	ಮಲಪ್ರಭಾ	ಸವದತ್ತಿ	೪೩.೧೩	೧೫೪.೫೨	೧೦,೬೮,೦೦೦
೧೭.	ಮಾರ್ಕಂಡೇಯ ಡ್ಯಾಂ	ಕೆಲಸ ನಡೆದಿದೆ	ಮಾರ್ಕಂಡೇಯ	ಬೆಳಗಾಂ	೪೭.೦೦	೪೭೫.೦೦	೧,೧೩,೨೮೦
೧೮.	ಅಮರ್ಜಾ ಡ್ಯಾಂ	೧೯೯೮	ಅಮರ್ಜಾ	ಗುಲ್ಬರ್ಗ	೩೧.೮೫	೯೬.೦೦	೪೪,೧೦೦
೧೯.	ಬೆಣ್ಣೆತೊರ ಡ್ಯಾಂ	ಕೆಲಸ ನಡೆದಿದೆ	ಬೆಣ್ಣೆತೊರ	ಗುಲ್ಬರ್ಗ	೩೧.೩೯	೨೩೪.೦೦	೧,೪೯,೯೮೦
೨೦.	ಭೀಮಾ ಲಿಫ್ಟ್ ಡ್ಯಾಂ	ಕೆಲಸ ನಡೆದಿದೆ	ಭೀಮಾ	ಗುಲ್ಬರ್ಗ	೧೮.೪	೨೫೦.೦೦	೭೦,೭೨೦
೨೧.	ಚಂದ್ರಂಪಳ್ಳಿ ಡ್ಯಾಂ	೧೯೭೫	ಸರ್‌ನಾಲಾ	ಚಿಂಚೋಳಿ	೩೪.೯೭	೯೨೬.೫೪	೩೪,೧೯೦
೨೨.	ಚುರ್ಕಿನಾಲ ಡ್ಯಾಂ	೧೯೯೭	ಚುರ್ಕಿನಾಲಾ	ಬೀದರ್	೧೮.೦೦	೨೩೪೦.೦೦	೨೬,೫೬೧
೨೩.	ಕಂಡೋರಿ ನಾಲಾ ಡ್ಯಾಂ	ಕೆಲಸ ನಡೆದಿದೆ	ಕಂಡೋರಿ ನಾಲಾ	ಗುಲ್ಬರ್ಗ	೨೪.೨೭	೧೮೧೩.೫	೫೩,೪೫೦
೨೪.	ಹಟ್ಟಿಕುನ್ನಿ ಡ್ಯಾಂ	೧೯೭೩	ಹಟ್ಟಿಕುನ್ನಿ	ಯಾದಗಿರಿ	೨೨.೨೭	೧೮೧೩.೫	೫೩,೪೫೦
೨೫.	ಕಾರಂಜಾ ಡ್ಯಾಂ	೧೯೮೯	ಕಾರಂಜಾ	ಬೀದರ್	೨೦.೧೧	೩೪೮೦.೦	೨೧,೭೬೭೦
೨೬.	ಲೋವರ್ ಮುಲ್ಲಾಮಾರಿ	–	ಮುಲ್ಲಾಮಾರಿ	ಗುಲ್ಬರ್ಗ	೨೪.೪೬	೧೫೪೬.೦೦	೪೯,೧೩೦

	ಡ್ಯಾಂ						
೧	೨	೩	೪	೫	೬	೭	೮
೨೭.	ಸೌದಾಗರ್ ಡ್ಯಾಂ	೧೯೮೭	ಸೌದಾಗರ್‌ನಾಲಾ	ಯಾದಗಿರಿ	೨೭.೦೩	೬೦೦.೦೦	೮,೧೨೦
೨೮.	ಅಪ್ಪರ್ ಮುಲ್ಲಾವಾರಿ ಡ್ಯಾಂ	೧೯೮೪	ಮುಲ್ಲಾಮಾರಿ	ಗುಲ್ಬರ್ಗ	೨೮.೪೦	೮೧೦.೦೦	೨೧,೨೨೦
೨೯.	ನಾರಾಯಣಪುರ ಡ್ಯಾಂ	೧೯೮೨	ಕೃಷ್ಣಾ	ಲಿಂಗಸುಗೂರು	೨೯.೭೨	೧೦೬೩೭.೫	೧೦,೬೬,೦೦೦
೩೦.	ಕೋಹಳ್ಳಿ ಟ್ಯಾಂಕ್	೧೯೭೫	ಹಿರೇನಾಲಾ	ಅಥಣಿ	೧೩.೭೦	೬೦೮.೭೮	೨,೬೬೦
೩೧.	ಆರೇಶಂಕರ್	೧೯೫೭	ಆರೇಶಂಕರ್ ನಾಲಾ	ಬಿಜಾಪುರ	೧೪.೩೨	೧೧೮೯.೦೦	೮೫೮
೩೨.	ಚಿತ್ತವಾಡಗಿ ಟ್ಯಾಂಕ್	೧೯೭೧	ಚಿತ್ತವಾಡಗಿ ನಾಲಾ	ಬಾಗಲಕೋಟೆ	೧೨.೦೦	೪೮೧	೫೭,೩೫೨
೩೩.	ಕಾಲಾಸ್ಕೋಪ್ ಟ್ಯಾಂಕ್	೧೯೬೦	ಕಾಲಾಸ್ಕೋಪ್ ನಾಲಾ	ಬಾಗಲಕೋಟೆ	೧೫.೮೦	೨೭೭.೦೦	೬೮,೨೦೩
೩೪.	ನಾಗಠ್ಠನ್ ಟ್ಯಾಂಕ್	೧೯೬೧	ನಾಗಠ್ಠನ್‌ನಾಲಾ	ಬಿಜಾಪುರ	೧೦.೬೩	೧೧೨೫.೦೦	೨೭,೭೦೫

ಈ ಪಟ್ಟಿಯನ್ನು ನೀವು ಪರಿಶೀಲಿಸಿದಾಗ ಒಂದು ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳುತ್ತೀರಿ. ಹಿರಿಯೂರಿನ ವಾಣೀವಿಲಾಸ ಸಾಗರ ಒಂದೇ ೧೯೦೭ರಲ್ಲಿ ಎಂದರೆ ಮೈಸೂರು ಅರಸರ ಕಾಲದಲ್ಲಿ ನಿರ್ಮಾಣವಾಗಿದೆ. ಉಳಿದವು ಎಲ್ಲವೂ ಸ್ವಾತಂತ್ರ್ಯೋತ್ತರ ಕಾಲದಲ್ಲಿ ರೂಪುಗೊಂಡಿವೆ. ಹಾಗೆಯೇ ಆಗಿನ ಕಾಲದಲ್ಲಿ ಕೃಷ್ಣರಾಜಸಾಗರ ನಿರ್ಮಾಣಗೊಂಡಾಗ ಅದರ ಎತ್ತರ ೧೩೪ ಅಡಿಗಳು ಇತ್ತು. ಎಂದರೆ ಈಗಿನ ಲೆಕ್ಕಾಚಾರ ೪೨.೬೭ ಮೀಟರುಗಳು. ಒಂದು ಮೀಟರ್ ಎಂದರೆ ೩.೨೮೧ ಅಡಿಗಳಾಗುತ್ತವೆ. ಈಗ ಎತ್ತರ, ಅಗಲದ ಕೆಲಸಗಳು ಅಚ್ಚರಿ ಮೂಡುವಂತೆ ಬೆಳವಣಿಗೆಯಾಗಿದೆ. ಭದ್ರಾ ೭೭ ಮೀಟರ್, ತುಂಗಭದ್ರಾ ೫೦ ಮೀಟರ್, ಘಟಪ್ರಭಾ ೬೨ ಮೀಟರ್ – ಹೀಗೆ ಉದ್ದವೂ ಅಷ್ಟೆಯೇ. ಕೆ.ಆರ್.ಸಾಗರದ ಉದ್ದ ೨೬೨೧.೦೦ ಮೀಟರ್. ಈಗ ಘಟಪ್ರಭಾ, ಕೃಷ್ಣಾ, ಕಾರಂಜಾ – ಮುಂತಾದವುಗಳು ಬೆರಗುಗೊಳ್ಳುವಂತೆ ಉದ್ದವಾಗಿವೆ ; ಹನುಮಂತನ ಬಾಲ ಆಗಿವೆ.

ನಾರಾಯಣಪುರ ನೀರಾವರಿ ಪ್ರಾಜೆಕ್ಟ್ ಕರ್ಣಾಟಕದ ಅತಿ ಹೆಚ್ಚಿನ ಉದ್ದದ ಕೆಲಸವಾಗಿದೆ; ಯಾರೂ ಮೆಚ್ಚುವಂಥದೂ ಆಗಿದೆ. ನಾರಾಯಣಪುರ ಮತ್ತು ಆಲಮಟ್ಟಿ ಅಣೆಕಟ್ಟುಗಳು ಉದ್ದೇಶಕ್ಕೆ, ಅನುಗುಣವಾಗಿ ಕೆಲಸ ಮುಗಿದರೆ, 'ಬರಪೀಡಿತ ಪ್ರದೇಶಗಳು' ಎನ್ನುವ ಹಿಂದಿನ ಕಾಲದ ಮಾತನ್ನು ಸುಳ್ಳಾಗಿಸಿ, ಆ ಪ್ರಾಂತ್ಯ ಪೂರಾ ನಳನಳಿಸುವ ಹಾಗಾಗುತ್ತದೆ. ಒಂದು ಮುಖ್ಯ ವಿಚಾರ. ೧೯೬೪ರಿಂದ ಇತ್ತೀಚೆಗೆ ಕೃಷ್ಣಾ ಮತ್ತು ಅದರ ಉಪನದಿಗಳಿಂದ ನೀರಾವರಿಯ ಕೆಲಸ ಕಾರ್ಯಗಳು ತ್ವರೆಯಿಂದ ನಡೆಯುತ್ತ ಇವೆ, ನಿಜ. ಆದರೂ ನಿರೀಕ್ಷಿಸಿದಷ್ಟು ಕೆಲಸ ಆಗಿಲ್ಲ.

ಇನ್ನೊಂದು ಸ್ಮರಣೀಯ ವಿಚಾರವನ್ನು ನಾವು ಹೇಳಬೇಕಾಗಿದೆ. ಕಾವೇರಿಗೆ ವಿಶ್ವೇಶ್ವರಯ್ಯನವರು ಹೇಗೆ ಸಿಕ್ಕಿದರೋ ಹಾಗೆ ಕೃಷ್ಣಾಕ್ಕೆ ಬಾಳೆಕುಂದ್ರಿ. ವಿಶ್ವೇಶ್ವರಯ್ಯನವರ ನಂತರ ಅಥವಾ ಸ್ವಾತಂತ್ರ್ಯೋತ್ತರ ನಂತರ ಕರ್ಣಾಟಕ ಕಂಡ ಸಮರ್ಥ ಇಂಜಿನಿಯರ್.

ಮಲಪ್ರಭಾ, ಹಿಡ್ಕಲ್, ನಾರಾಯಣಪುರ– ಹೀಗೆ ಅನೇಕ ಅಣೆಕಟ್ಟುಗಳು ಇವರು ಮುಖ್ಯ ಇಂಜಿನಿಯರ್ ಆಗಿದ್ದಾಗ ಮುಗಿದಿವೆ. ಶ್ರದ್ಧೆಯಿಂದ ದಕ್ಷತೆಯಿಂದ ಬಾಳೆಕುಂದ್ರಿ ಉತ್ತರ ಕರ್ಣಾಟಕದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ನಿಗದಿತ ಅವಧಿಗಳಲ್ಲಿಯೇ ಇವರು ಮಾಡಿದ ಕೆಲಸಗಳಿಗಾಗಿ, ಸೇವೆಗಾಗಿ, ಮಲಪ್ರಭಾ ಎಡದಂಡೆಗೆ 'ಬಾಳೆಕುಂದ್ರಿ ನಾಲೆ' ಎಂದೇ ಹೆಸರಿಟ್ಟಿದ್ದಾರೆ. ಬೆಂಗಳೂರಿನ ಒಂದು ವೃತ್ತಕ್ಕೆ 'ಬಾಳೆಕುಂದ್ರಿ ವೃತ್ತ' ಎಂದೂ ನಾಮಕರಣ ಆಗಿದೆ.

ಕೃಷ್ಣರಾಜಸಾಗರ ನಿರ್ಮಾಣಗೊಂಡದ್ದು ೧೯೩೧ರಲ್ಲಿ. ಮುಕ್ಕಾಲು ಶತಮಾನ ದಾಟಿ ಹೋಗಿದೆ. ಎಲ್ಲ ಕ್ಷೇತ್ರಗಳಂತೆ ನೀರಾವರಿ ಕ್ಷೇತ್ರದಲ್ಲಿಯೂ ಈಗ ತಾಂತ್ರಿಕತೆ

ಅದ್ಭುತವಾಗಿ ಬೆಳೆದಿದೆ. ಹೊಸ ಹೊಸ ಆವಿಷ್ಕಾರಗಳು ನಡೆಯುತ್ತ ಇವೆ. ಹೊಸತು ಹೊಸತಾಗಿ ನೀರನ್ನು ತಡೆಹಿಡಿಯಲು ರಿಸರ್ವಾಯರ್, ಅಣೆಕಟ್ಟು - ಮುಂತಾದವುಗಳಲ್ಲಿ ಮಾನವ ಯಶಸ್ವಿಯಾಗಿದ್ದಾನೆ; ಆಗುತ್ತ ಇದ್ದಾನೆ. ಎಲ್ಲ ಕ್ಷೇತ್ರಗಳಂತೆ ನೀರಾವರಿ ಕ್ಷೇತ್ರವೂ ಹೊಸ ಹೊಸ ಸಂಶೋಧನೆಗಳಿಂದ ದಾಪುಗಾಲು ಹಾಕುತ್ತಾ ಇದೆ.

ಇವೆಲ್ಲವೂ ಸರಿಯೇ. ಆದರೆ ಈ ಜಲಾಶಯಗಳು ಎಲ್ಲವೂ ತುಂಬಿಕೊಳ್ಳಲು ನೀರು ಎಲ್ಲಿದೆ?

ಕೃಷಿಭೂಮಿಗೆ ಅಗತ್ಯ ನೀರು ಬೇಕು ಸರಿಯೇ. ಅದರೊಟ್ಟಿಗೇ ಮಣ್ಣಿನ ಸಾರ, ಬೆಳೆಯ ನೀರಿನ ಬೇಡಿಕೆ - ಹೀಗೆ ಇತರೇ ಅನೇಕ ಅಂಶಗಳನ್ನು ಆಧಾರವಾಗಿಟ್ಟು ನೀರನ್ನು ಬಳಸಬೇಕು. ನೀರಾವರಿ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಕೀಟನಾಶಕ ಔಷಧಿ ಗಳು, ರಾಸಾಯನಿಕಕ್ಕೆ ಸಂಬಂಧಪಟ್ಟವು, ಗೊಬ್ಬರ - ಇತ್ಯಾದಿಗಳು ಭೂಮಿಗೆ ಹೆಚ್ಚು ಹಾನಿಯನ್ನೇ ಉಂಟುಮಾಡಿವೆ. ಹಿಂದೆ ರಾಸಾಯನಿಕ ಎನ್ನುವುದು ಇರಲೇ ಇಲ್ಲ. ಆದರೆ ನಮ್ಮ ಹಿರಿಯರು ಸಮೃದ್ಧ ಬೆಳೆ ತೆಗೆಯುತ್ತ ಇದ್ದರು. ಈಗ ಇಳುವರಿ ಮೊದಲಿಗಿಂತ ತ್ವರಿತವಾಗಿ ದುಪ್ಪಟ್ಟಾಗಿ ಬೆಳೆ ತೆಗೆಯುತ್ತೇವೆ ವ್ಯವಸಾಯ ಮಾಡುತ್ತೇವೆ ಎಂದು ಹೇಳಿ, ನಾವು ತಿನ್ನುವ ಆಹಾರಕ್ಕೆ ಬೇರೆ ಯಾರೂ ಶತ್ರುಗಳಿಲ್ಲದೆ ನಾವೇ ವಿಷ ಬೆರಸುತ್ತ ಇದ್ದೇವೆ.

ನೀರಾವರಿಗೆ ವ್ಯವಸಾಯಕ್ಕೆ ನೀರು ಎಷ್ಟು ಮುಖ್ಯವೋ ಮಣ್ಣೂ ಸಹ ಅಷ್ಟೇ ಮುಖ್ಯ. ಮಣ್ಣು ಎಂದರೆ ಭೂಮಿ ತನ್ನ ಸತ್ವವನ್ನು ಕಳೆದುಕೊಂಡರೆ ಮೇಲಿಂದ ಎಷ್ಟು ನೀರು ಸುರಿದರೂ ಪ್ರಯೋಜನ ಆಗುವುದಿಲ್ಲ.

ಉತ್ತರ ಕರ್ನಾಟಕ ಕಪ್ಪು ಮಣ್ಣನ್ನೂ ದಕ್ಷಿಣ ಕರ್ನಾಟಕ ಕೆಂಪು ಮಣ್ಣನ್ನೂ ತನ್ನ ಮೇಲೆ ಹೊದಿಕೆ ಹೊದ್ದುಕೊಂಡಿದೆ.

*****

೩. ಬಚಾವತ್ ಆಯೋಗ

ಒಂದು ನದಿ ಅದು ಯಾವುದೇ ನದಿಯಾಗಿರಬಹುದು, ಮೇಲುಭಾಗದಿಂದ ಕೆಳಭಾಗಕ್ಕೆ ಹರಿದು ಬರುವಾಗ, ಮೇಲಿನವರು ಹಿಡಿದಿಟ್ಟುಕೊಳ್ಳುತ್ತಾರೆ ಎಂದು ಕೆಳಗಿನ ರಾಜ್ಯದವರು ದೂರು ಹೇಳುವುದು ಸಾಮಾನ್ಯ. ಕೆಲವು ರಾಜ್ಯಗಳು ಹಾಗೆಯೂ ಮಾಡಿರಬಹುದು; ಈಗಲೂ ಮಾಡುತ್ತ ಇರಬಹುದು.

ಈ ಪ್ರಶ್ನೆ ಜಗತ್ತಿನಾದ್ಯಂತ ಇದ್ದೇ ಇದೆ. ಭಾರತದಲ್ಲಿ ಮಾತ್ರ ಈ ಪ್ರಶ್ನೆ ಎನ್ನುವ ಹಾಗಿಲ್ಲ. ಮುಂದುವರಿದ ರಾಷ್ಟ್ರವಾದ ಅಮೆರಿಕಾದಲ್ಲಿಯೂ ಈ ಪ್ರಶ್ನೆಗಳು ಇವೆ.

ಅಮೆರಿಕಾದಲ್ಲಿ ಅರ್ಕಾನ್ಸಸ್ ಎನ್ನುವುದು ಒಂದು ನದಿ. ಈ ನದಿಯ ಮೇಲು ಭಾಗದ ರಾಜ್ಯ ಕೊಲೊರಾಡೋ. ಕೆಳಭಾಗದ್ದು ಕಾನ್ಸಸ್.

ಕೊಲೊರಾಡೋದಲ್ಲಿ ಅರ್ಕಾನ್ಸಸ್ ನದಿಗೆ ಜಾನ್ ಮಾರ್ಟಿನ್ ಎನ್ನುವ ಜಲಾಶಯವನ್ನು ನಿರ್ಮಿಸಿದ್ದಾರೆ. ಅದರಿಂದ ಶೇಕಡಾ ೪೦ರಷ್ಟು ನೀರನ್ನು ಆ ನದಿಯ ಕೆಳರಾಜ್ಯವಾದ ಕಾನ್ಸಸ್ಸಿಗೆ ಹರಿಸಬೇಕು ಎನ್ನುವುದು ಒಪ್ಪಂದ. ಈ ಒಪ್ಪಂದವನ್ನು ಕೊಲೊರಾಡೋ ಉಲ್ಲಂಘಿಸುತ್ತ ಇದೆ ಎನ್ನುವುದು ಕಾನ್ಸಸ್ಸಿನ ದೂರು. ಈ ದೂರು ನ್ಯಾಯಾಲಯಗಳ ಮೆಟ್ಟಿಲನ್ನೂ ಹತ್ತಿದೆ.

ಎಂದರೆ ನದಿ ಎಲ್ಲೆಲ್ಲಿರುತ್ತದೋ ಅಲ್ಲೆಲ್ಲ ಈ ವ್ಯಾಜ್ಯಗಳು ಇದ್ದೇ ಇವೆ; ಮುಂದೆಯೂ ನಡೆಯುತ್ತವೆ. ಮಳೆ ಬಂದು ಜಲಾಶಯಗಳಲ್ಲಿ ನೀರು ತುಂಬಿಕೊಂಡರೆ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಇಲ್ಲವೋ ಹಾಹಾಕಾರ. ಆಗ ನ್ಯಾಯಾಲಯಗಳ ಬಾಗಿಲುಗಳನ್ನು ಬಡಿಯುವಿಕೆ. ಅದು ಸರಿ, ನ್ಯಾಯಾಲಯಗಳು ಆ ಈ ರಾಜ್ಯಗಳ ದೂರುಗಳಿಗೆ ತೀರ್ಪು ನೀಡುವುದಕ್ಕಿಂತ 'ಕಳೆದ ವರ್ಷದಂತೆಯೇ ಈ ವರ್ಷವೂ ಮಳೆ ಸುರಿಸು, ನಮ್ಮ ಜಲಾಶಯಗಳಲ್ಲಿ ನೀರು ತುಂಬುತ್ತದೆ.' ಎಂದು ಮಳೆಗೇ ತೀರ್ಪು ನೀಡಿದರೆ ಹೇಗೆ? ಕೇಳುತ್ತದೋ ನೋಡಬೇಕು.

ಇನ್ನು ಕೃಷ್ಣಾ ಈ ವಿವಾದಗಳಿಂದ ತಪ್ಪಿಸಿಕೊಳ್ಳುವುದು ಹೇಗೆ ಸಾಧ್ಯ? ದುರ್ದೈವವೆಂದರೆ ಕೃಷ್ಣಾ-ಕಾವೇರಿ ಈ ಎರಡೂ ನದಿಗಳಿಗೂ ನಾವು ಮೇಲಿನ ರಾಜ್ಯ ಆಗಿದ್ದೇವೆ.

ಕೃಷ್ಣಾನದಿ ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರ ಈ ಮೂರು ರಾಜ್ಯಗಳಲ್ಲಿಯೂ ಪ್ರವಹಿಸುತ್ತದೆ. ಎಂದಮೇಲೆ ಪ್ರಶ್ನೆ ಉದ್ಭವವಾಯಿತು.

ಕರ್ನಾಟಕ ನಿಜವಾಗಿಯೂ ದುರದೃಷ್ಟದ ನಾಡೇ. ಕರ್ನಾಟಕ ಚಿಂದಿ ಚಿಂದಿಯಾದಷ್ಟು ಭಾರತದಲ್ಲಿ ಬೇರೆ ಯಾವ ರಾಜ್ಯವೂ ಆಗಿರಲಿಲ್ಲ. ಮುಂಬಯಿ ಪ್ರಾಂತ್ಯಕ್ಕೆ ಒಂದಿಷ್ಟು ಜಿಲ್ಲೆಗಳು, ಹೈದರಾಬಾದ್ ಮತ್ತು ಮದರಾಸು ಪ್ರಾಂತ್ಯದ ಕೆಲವು ಜಿಲ್ಲೆಗಳು, ಈ ಕಡೆ ಮೈಸೂರು ಸಂಸ್ಥಾನ, ಕೊಡಗೇ ಪ್ರತ್ಯೇಕ– ಹೀಗಿತ್ತು ಕರ್ನಾಟಕ. ಈಗ ಅವುಗಳ ಕಥೆ ಬೇಡ. ಯಾಕೆಂದರೆ ಅದು ಹಳೆಯ ಕಥೆ.

೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ನಿರ್ಮಾಣವಾದ ಮೇಲಷ್ಟೆ ಹರಿದು ಹಂಚಿಹೋಗಿದ್ದ ನಮ್ಮ ನೆಲ ಒಂದಾಯಿತು. ಕರ್ನಾಟಕವಾಯಿತು. ಕೃಷ್ಣಾ ವಿಚಾರವೂ ಮೆಲ್ಲಗೆ ತಲೆ ಎತ್ತಿತು. ಜಲವಿವಾದ ಪ್ರಾರಂಭವಾಯಿತು.

ಕೇಂದ್ರ ಸರಕಾರ ಆಗ ಈ ವಿವಾದಕ್ಕೆ ತೆರೆ ಎಳೆಯಲು ನಿರ್ಧರಿಸಿತು. ಇದೇ ಬಚಾವತ್ ಆಯೋಗದ ನೇಮಕ. ೧೯೬೯ ಏಪ್ರಿಲ್ ೧೦ರಂದು ಕೃಷ್ಣಾ ಜಲವಿವಾದ ನ್ಯಾಯಮಂಡಲಿ ಸ್ಥಾಪನೆಯಾಯಿತು.

ಇದರ ಚೇರ್‌ಮನ್ ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿದ್ದ ಆರ್.ಎಸ್. ಬಚಾವತ್. ಇನ್ನಿಬ್ಬರು ಸದಸ್ಯರು. ಇವರೂ ನ್ಯಾಯಾಧೀಶರೇ. ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ಹೈಕೋರ್ಟ್ ನ್ಯಾಯಾಧೀಶ ಶಂಷೇದ್ ಬಹಾದ್ದೂರ್ ಒಬ್ಬರು; ಮತ್ತೊಬ್ಬರು, ರಾಜಸ್ಥಾನ್ ಹೈಕೋರ್ಟ್‌ನ ನ್ಯಾಯಾಧೀಶ ಡಿ.ಎಮ್. ಭಂಡಾರಿ. ಕಾರ್ಯದರ್ಶಿ ಎಂ.ಪ್ರಸಾದ್.

ಈ ಮಂಡಳಿ ಕೃಷ್ಣಾ ಮತ್ತು ಅದರ ಉಪನದಿಗಳಲ್ಲಿ ಒಟ್ಟು ಲಭ್ಯವಾಗುವ ನೀರು ೨೦೬೦ ಟಿ.ಎಂ.ಸಿ. ನೀರು ಎಂದು ತೀರ್ಮಾನ ಮಾಡಿದೆ. ಅದರಂತೆ ಕರ್ನಾಟಕಕ್ಕೆ ೭೩೪ ಟಿ.ಎಂ.ಸಿ; ಮಹಾರಾಷ್ಟ್ರಕ್ಕೆ ೫೬೫, ಹಾಗೆಯೇ ಆಂಧ್ರಕ್ಕೆ ೮೧೧ ಟಿ.ಎಂ.ಸಿ.– ಎಂದು ತೀರ್ಪು ನೀಡಿದೆ.

ಎಂದರೆ ಒಂದು ಬಗೆಯಾಗಿ ಈ ನದಿಯ ನೀರಿನ ಪ್ರಶ್ನೆಗೆ ಅಥವಾ ಸಮಸ್ಯೆಗೆ ಮುದ್ರೆ ಒತ್ತಿಬಿಟ್ಟಿದೆ. ಇದೇ ಬಚಾವತ್ ಆಯೋಗದ ತೀರ್ಪು.

ಈ ಯೋಜನೆ ಕಾರ್ಯಗತವಾದರೆ ಎರಡು ಹಂತಗಳಲ್ಲಿ ಈ ಬೃಹತ್ ಕೆಲಸಗಳನ್ನು ಮುಗಿಸುವಿಕೆ. ಇದರಿಂದಾಗಿ ಮೊದಲ ಹಂತದಲ್ಲಿ ೧೧೯ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ೪.೨೫ ಲಕ್ಷ ಹೆಕ್ಟೇರ್, ಹಾಗೆಯೇ ಎರಡನೆಯ ಹಂತದಲ್ಲಿ ೧.೯೭ ಲಕ್ಷ ಹೆಕ್ಟೇರ್‌ಗಳಲ್ಲಿ ಅಚ್ಚುಕಟ್ಟಿನ ನಿರ್ಮಾಣ.

ಆದರೆ ಈಗ ಮುಗಿದಿರುವುದು ಮೊದಲನೆಯ ಹಂತ ಮಾತ್ರ. ಅದೂ ಕೆಲವು ಅರ್ಧ ಕೆಲಸ. ಮುಳವಾಡಿ, ರಾಮಾಪುರ ಮತ್ತು ಇಂಡಿ ಏತ ನೀರಾವರಿಗಳ ಕೆಲಸ ಈಗಷ್ಟೆ ಪ್ರಾರಂಭವಾಗಿದೆ.

ಈ ಕೆಲಸಗಳು ೨೦೦೦ನೆಯ ವರ್ಷದೊಳಗೆ ಮುಗಿಯಬೇಕಾಗಿತ್ತು. ಇದು ಒಪ್ಪಂದ. ಆದರೆ ಮುಗಿಯಲಿಲ್ಲ. ಆಂಧ್ರ ಸಂಪೂರ್ಣವಾಗಿ ತನ್ನ ಕೆಲಸವನ್ನು ಮುಗಿಸಿಕೊಂಡಿದೆ. 'ಬಿ' ಸ್ಕೀಮಿಗೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲು ಯೋಜನೆಗಳನ್ನು ರೂಪಿಸಿ ಕಾರ್ಯಾರಂಭವನ್ನೂ ಮಾಡಿಯೇಬಿಟ್ಟಿದೆ. ನಮ್ಮ ಮುಖಂಡರು ಎನಿಸಿಕೊಳ್ಳುವವರು ಯಥಾಪ್ರಕಾರ ಬೊಬ್ಬೆಹಾಕುತ್ತ ಇದ್ದಾರೆ. ಇವರ ಮೇಲೆ ಅವರು, ಅವರ ಮೇಲೆ ಇವರು-ಆರೋಪ ಪ್ರತ್ಯಾರೋಪಗಳ ಸುರಿಮಳೆ. ಶಾಸನ ಸಭೆಯಲ್ಲಿ ಕೂಗಾಟ. ಯಾರ ಗಂಟಲು ಧ್ವನಿವರ್ಧಕವೋ ಯಾರ ಕೂಗು ಆಕಾಶದೆತ್ತರಕ್ಕೂ ಸಿಡಿಯುತ್ತದೋ ಅಂಥವರೇ ನಮ್ಮ ಈ ನಾಡಿನ ರೈತಮಕ್ಕಳ ಉದ್ಧಾರಕರು ಎನ್ನುವಂಥ ಟಿ.ವಿ.ನೋಟ. ಯಥಾಪ್ರಕಾರ ಯಾರೂ ನಿರೀಕ್ಷಿಸಬೇಕಾಗಿಲ್ಲ. ಕಾಯಕವೇ ಕೈಲಾಸವೆಣ್ಣಾ ಎನ್ನುವ ಹಾಗೆ ಸಭಾತ್ಯಾಗ.

ಕಾವೇರಿಯದೂ ಇದೇ ಪ್ರಶ್ನೆ. ಅದು ಇನ್ನೂ ಹಳೆಯ ಪ್ರಶ್ನೆ. ಇನ್ನೂ ಅದರ ಪ್ರಶ್ನೆ ಬಗೆಹರಿದಿಲ್ಲ. ಕಾವೇರಿಯ ನ್ಯಾಯಮಂಡಳಿಯ ವಾದ-ಪ್ರತಿವಾದಗಳು ಇನ್ನೂ ನಡೆದುಕೊಂಡೇ ಇದೆ. ಯಾವಾಗ ಈ ಪ್ರಶ್ನೆಗಳು ಬಗೆಹರಿಯುತ್ತವೆಯೋ ರಾಜ್ಯರಾಜ್ಯಗಳು ದ್ವೇಷವನ್ನು ಅಳಿಸಿ ಹಾಕಿಯಾವೋ ರೈತರು ನೆಮ್ಮದಿಯಾಗಿ ನಿಟ್ಟುಸಿರು ಬಿಟ್ಟಾರೋ ಕಾದು ನೋಡೋಣ.

ಕಾಯುವುದೇ ನಮ್ಮ ಕಾಯಕ.

*****

೪. ಕಾವೇರಿ

ಕಾವೇರಿಯ ನಿಟ್ಟುಸಿರು ನಿಲ್ಲದೇ ಇರುವುದಕ್ಕೆ ಶತಶತಮಾನಗಳ ಇತಿಹಾಸವೇ ಇದೆ. ಕನ್ನಡಿಗರೂ ತಮಿಳರೂ ದೀರ್ಘ ಕಾಲಗಳಿಂದಲೂ ನೀರಿಗಾಗಿ ಕಾವೇರಿಗಾಗಿ ವೈಮನಸ್ಯವನ್ನು ಬೆಳೆಸಿಕೊಂಡೇ ಬಂದಿದ್ದಾರೆ. ಈ ಕಹಿ ಎರಡೂ ರಾಜ್ಯಗಳಲ್ಲಿ ಆಳವಾಗಿ ಬೇರುಬಿಟ್ಟಿದೆ.

ಕೃಷ್ಣಾಕ್ಕೆ ಅಂಥ ಪ್ರಶ್ನೆ ಇಲ್ಲ. ವಿಜಯನಗರದ ಅರಸರ ಕಾಲದಲ್ಲಿ ಅಥವಾ ಇನ್ನೊಂದೆರಡು ಅರಸರ ಕಾಲಗಳಲ್ಲಿ ಕೃಷ್ಣೆಯ ಮತ್ತು ಅದರ ಉಪನದಿಗಳ ನೀರನ್ನು ಬಳಸಿಕೊಂಡರು ಸರಿಯೇ.

ಕರ್ಣಾಟಕ ಹೀಗೆ ಬಳಸಿಕೊಂಡ ಕೃಷ್ಣಾದ ಜುಳು ಜುಳು ಶಬ್ದ ಆಂಧ್ರಕ್ಕೆ ಮುಟ್ಟಲಿಲ್ಲ. ಮೇಲಿನ ನಾಡಾದ ಕರ್ಣಾಟಕದ ಅಥವಾ ವಿಜಯನಗರದ ಅರಸರು, ಅವರ ಕಾಲದಲ್ಲಿ ನೀರಾವರಿ ಕೆಲಸಗಳನ್ನು ತಮ್ಮ ನಾಡಿಗೆ ಎಂದರೆ ಕರ್ಣಾಟಕಕ್ಕೆ ಎಷ್ಟು ಮಾಡಿದರೋ ಅಷ್ಟೇ ನೀರಾವರಿ ಕೆಲಸಗಳನ್ನು ಆಂಧ್ರಪ್ರದೇಶಕ್ಕೂ ಮಾಡಿದ್ದರಿಂದ ಈ ಪ್ರಶ್ನೆ 'ನೀರನ್ನು ಹಿಡಿದಿಟ್ಟುಕೊಳ್ಳುತ್ತಾರೆ' ಭುಗಿಲೇಳಲಿಲ್ಲ.

ಅಷ್ಟಲ್ಲದೆ ನಾವು ಒಮ್ಮೆ ಹೇಳಿದ ಹಾಗೆ ದೊಡ್ಡ ನದಿ ಗೋದಾವರಿಯ ವರದಾನ ಆಂಧ್ರಕ್ಕೆ ಇತ್ತು. ಹೀಗಾಗಿ ನೀರಿನ ಬಳಕೆಗೆ ಹೇಳಿಕೊಳ್ಳುವಷ್ಟು ಕೊರತೆ ಆಂಧ್ರದಲ್ಲಿ ಉಂಟಾಗಲಿಲ್ಲ.

ಆಂಧ್ರಕ್ಕೂ ತಮಿಳುನಾಡಿಗೂ ಇಂಥ ವ್ಯತ್ಯಾಸಗಳು; ಸೌಲಭ್ಯಗಳು.

ಅಷ್ಟಲ್ಲದೆ ಆಂಧ್ರರು ವಿಜಯನಗರದ ಅರಸರನ್ನು ತಮ್ಮವರೆಂದೇ ಪರಿಗಣಿಸಿದ್ದ ರಿಂದ ಪ್ರಶ್ನೆಗಳು ಉಂಟಾಗಲಿಲ್ಲ. ಕೃಷ್ಣದೇವರಾಯನನ್ನಂತೂ ಆಂಧ್ರರು ತಮ್ಮವನೆಂದೇ ಭಾವಿಸಿದ್ದರು.

ನಮ್ಮ ಕನ್ನಡದ ರಮಾರಮಣ ತೆಲುಗು ಮಹಿಳೆ ಒಬ್ಬಳನ್ನೇ ಮದುವೆಯಾಗಿದ್ದ. ಅವನ ಆಸ್ಥಾನದಲ್ಲಿ ಕನ್ನಡದ ಕವಿಗಳಿಗಿಂತ ತೆಲುಗು ಕವಿಗಳೇ ಜಾಸ್ತಿ ಇದ್ದರು. ಈ ಅರಸ 'ಆಮುಕ್ತ ಮಾಲಿಕಾ'ವನ್ನು ತೆಲುಗಿನಲ್ಲಿಯೇ ಬರೆದ. ಕನ್ನಡದಲ್ಲಿ ಬರೆಯಲಿಲ್ಲ.

ಈ ಎಲ್ಲ ಕಾರಣಗಳಿಂದ ತೆಲುಗರಿಗೂ ಕನ್ನಡಿಗರಿಗೂ ನೀರಿನ ವಿಚಾರವಾಗಿ ತಮಿಳು ನಾಡಿನಂತೆ ಹೆಚ್ಚು ಘರ್ಷಣೆಗಳು ಉಂಟಾಗಲಿಲ್ಲ.

ಇದು ಇತಿಹಾಸ.

ಈಗಿನ ಇತಿಹಾಸವೂ ನೈಜಚಿತ್ರಣವೂ ಬೇರೆಯೇ ಇದೆ ಎಂದು ಕೆಲವರು ಬಲ್ಲವರು ಹೇಳುತ್ತಾರೆ. ಕೃಷ್ಣಾ ಕೊಳ್ಳದ ಹೆಚ್ಚು ಕಡಮೆ ಎಲ್ಲ ಭೂಮಿಗಳನ್ನೂ ಆಂಧ್ರದವರೇ ಖರೀದಿ ಮಾಡಿಬಿಟ್ಟಿದ್ದಾರಂತೆ. ನಾಯುಡು-ರೆಡ್ಡಿಗಳ ಸಾಮ್ರಾಜ್ಯ ವಿಜಯನಗರ ಅರಸರ ಕಾಲದ ಸಾಮ್ರಾಜ್ಯಕ್ಕಿಂತಲೂ ದೊಡ್ಡದಾಗಿ ಬಲಿಷ್ಠವಾಗಿದೆಯಂತೆ. ಬೆಂಗಳೂರಿನಲ್ಲಿ ತಮಿಳರ ಪ್ರಾಬಲ ಎಷ್ಟಿದೆಯೋ ಅಷ್ಟೇ ಉತ್ತರ ಕರ್ಣಾಟಕದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ತೆಲುಗ ಪ್ರಾಬಲ್ಯ. ಕನ್ನಡಿಗರು ಅಲ್ಪಸ್ವಲ್ಪ ಭೂಮಿಯವರು ಆಗಿಬಿಟ್ಟಿದ್ದಾರಂತೆ.

ಪರಿಸ್ಥಿತಿ ಹೀಗಿರುವಾಗ ಇನ್ನು ಘರ್ಷಣೆ ಹೇಗೆ ಎಲ್ಲಿ ಬಂತು? ಒಂದು ಸಮಯ ಘರ್ಷಣೆ ಆದರೂ ಅದು ತೆಲುಗರಿಗೆ- ತೆಲುಗರಿಗೆ ಆಗಬೇಕೆ ವಿನಾ ಕನ್ನಡಿಗರಿಗೆ ಅಲ್ಲ ಎನ್ನುವವರೂ ಇದ್ದಾರೆ.

ಇದು ನೈಜ ಸಂಗತಿಯೋ ಕುಹಕದ ಮಾತೋ ನಮಗೆ ತಿಳಿಯದು.

ಕನ್ನಡಿಗರ ತಮಿಳರ ಪ್ರಶ್ನೆಗಳು ಬಗೆಹರಿದಿಲ್ಲವಾದರೂ ಇತಿಹಾಸವನ್ನು ಅವಲೋಕನ ಮಾಡಿದಾಗ ಹಲವು ನೈಜ ಸಂಗತಿಗಳು ನಮ್ಮ ಎದುರು ಗರಿಬಿಚ್ಚುತ್ತವೆ. ಕರ್ಣಾಟಕದ ಕೆಳರಾಜ್ಯ ಆಂಧ್ರಪ್ರದೇಶ. ತಮಿಳುನಾಡು ಸಹ ಕೆಳ ರಾಜ್ಯವೇ. ಆದರೆ ಕಾವೇರಿಗೆ ಇರುವ ಪ್ರಶ್ನೆ ಕೃಷ್ಣಾಕ್ಕೆ ಇಲ್ಲ. ಇದು ಯಾಕೆ? ಇದು ಹೇಗೆ?

ಇದಕ್ಕೆ ಉತ್ತರ ಸುಲಭ. ಆಂಧ್ರದಲ್ಲಿ ಕೃಷ್ಣಾ-ಗೋದಾವರಿ ಎರಡೂ ನದಿಗಳು ಡೆಲ್ಟಾ ಆಗಿ ಆಂಧ್ರದ ಸಂಪತ್ತನ್ನು ಹೆಚ್ಚಿಸಿವೆ. ಎಂದರೆ ನೀರು ಸಮೃದ್ಧಿಯಾಗಿದೆ. ಇದು ಮುಖ್ಯ ಕಾರಣ; ವಿಚಾರ.

ತಮಿಳುನಾಡಿನ ವಿಚಾರ ಹಾಗಲ್ಲ. ಅಲ್ಲಿ ಇರುವುದು ಒಂದೇ ನದಿ. ಅದು ಕಾವೇರಿ. ಕಾವೇರಿಗೆ ಎರಡು ಮೂರು ಉಪನದಿಗಳು. ಭವಾನಿ, ಅಮರಾವತಿ, ನೊಯ್ಯಲ್- ಹೀಗೆ. ಈ ಮೂರೂ ಉಪನದಿಗಳು ಸೇರಿಕೊಂಡರೂ ನಮ್ಮ ತುಂಗಭದ್ರೆಯಷ್ಟು ವ್ಯಾಪ್ತಿ ಆಗುವುದಿಲ್ಲ. ಘಟಪ್ರಭಾ, ಮಲಪ್ರಭಾ, ವೇದಾವತಿ- ಹೀಗೆ ಕೃಷ್ಣಾದ ಉಪನದಿಗಳು ನೀರಿನ ಸಮೃದ್ಧತೆಯಲ್ಲಿ ಮುಂದಿವೆ. ಕರ್ಣಾಟಕದಲ್ಲಿ ಹರಿಯುವ ಕಾವೇರಿಗೆ ಕಪಿಲಾ, ಹಾರಂಗಿ, ಹೇಮಾವತಿ- ಮುಂತಾದ ನದಿ ಗಳಲ್ಲಿಯೂ ನೀರಿನ ಸೌಲಭ್ಯ ಚೆನ್ನಾಗಿದೆ. ಪ್ರಧಾನ ನದಿ ಕಾವೇರಿಯೂ ಕೃಷ್ಣಾನದಿಯಷ್ಟು ದೊಡ್ಡದು ಅಲ್ಲ.

ಕೃಷ್ಣಾ ೧೨೯೦ ಕಿಲೋಮೀಟರ್ ಉದ್ದ ಇದ್ದರೆ ಕಾವೇರಿ ೮೦೨ ಕಿಲೋ ಮೀಟರ್

ಮಾತ್ರ ಇದೆ. ಎಂದರೆ ಕಾವೇರಿಗಿಂತ ಕೃಷ್ಣಾ ೫೦೦ ಕಿಲೋಮೀಟರ್ ಜಾಸ್ತಿ ಉದ್ದ ಇದೆ.

ಕಾವೇರಿ ನದಿಯ ಉದ್ದ ಬರೇ ೮೦೨ ಕಿಲೋಮೀಟರುಗಳಷ್ಟೆ. ಅದನ್ನು ಈಗ ವಿಂಗಡಿಸೋಣ.

ಕರ್ನಾಟಕ	೩೮೧	ಕಿಲೋಮೀಟರ್
ತಮಿಳುನಾಡು	೩೫೭	ಕಿಲೋಮೀಟರ್
ಕರ್ನಾಟಕ-ತಮಿಳು ನಾಡಿನ ಗಡಿ	೬೪	ಕಿಲೋಮೀಟರ್
ಒಟ್ಟು	೮೦೨	ಕಿಲೋ ಮೀಟರ್

ಇನ್ನು ಈ ಎರಡೂ ರಾಜ್ಯಗಳಲ್ಲಿ ವ್ಯವಸಾಯ ಆಗುತ್ತ ಇರುವುದು ಎಷ್ಟು?

೧. ಕರ್ನಾಟಕ ಸುಮಾರು ೧೧.೦೨ ಲಕ್ಷ ಎಕರೆ.

೨. ತಮಿಳು ನಾಡು ಸುಮಾರು ೨೨ ಅಥವಾ ೨೩ ಲಕ್ಷ ಎಕರೆ.

ತಮಿಳುನಾಡಿಗಿಂತ ಕರ್ನಾಟಕದಲ್ಲಿ ಕಾವೇರಿ ೨೪ ಕಿಲೋ ಮೀಟರ್ ಉದ್ದ ಜಾಸ್ತಿ ಇದೆ. ಹಾಗಿದ್ದೂ ಕರ್ನಾಟಕದಲ್ಲಿ ವ್ಯವಸಾಯ ಆಗುತ್ತ ಇರುವುದು ಹನ್ನೊಂದು ಲಕ್ಷ ಎಕರೆ. ತಮಿಳುನಾಡು ದುಪ್ಪಟ್ಟು, ೨೩ ಲಕ್ಷ ಎಕರೆ. ಅನ್ಯಾಯ ಆಗಿರುವುದು ಆಗುತ್ತ ಇರುವುದು ಯಾರಿಗೆ? ಇದು ಪ್ರಶ್ನೆ.

ಇದಕ್ಕೆ ತಮಿಳುನಾಡಿನ ಉತ್ತರ ಹೀಗಿದೆ :

''ನಾವು ಈಗ ವ್ಯವಸಾಯ ಎಂದರೆ ನೀರಾವರಿ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿಲ್ಲ. ಪ್ರಾಚೀನ ಕಾಲದಿಂದಲೂ ಈ ನೀರನ್ನು ನಾವು ಬಳಸುತ್ತ ಇದ್ದೇವೆ. ಹಾಗೆಂದ ಮೇಲೆ ಈ ಅಚ್ಚುಕಟ್ಟು ಪ್ರದೇಶದ ನಮ್ಮ ಹಕ್ಕನ್ನು ಯಾರೂ ಕಸಿಯಲು ಸಾಧ್ಯವಿಲ್ಲ. ಇದು ಹೀಗೆಯೇ ಮುಂದುವರಿಯಬೇಕು.''

ಹೀಗೆಯೇ ಮುಂದುವರಿಯಬೇಕು ಎನ್ನುವಾಗ, 'ಅಲ್ಲಿ ಇಷ್ಟು ವ್ಯವಸಾಯ ಆಗುತ್ತ ಇದೆ, ಇಲ್ಲಿ ಇಷ್ಟು ಆಗುತ್ತ ಇದೆ.' ಎನ್ನುವ ಲೆಕ್ಕಾಚಾರ ನಮಗೆ ಬೇಕಿಲ್ಲ. ಆ ಅಂಕಿ ಸಂಖ್ಯೆಗಳನ್ನು ಬದಿಗಿಡಿ. ನಾವು ಪ್ರಾಚೀನ ಕಾಲದಿಂದ ಏನು ಮಾಡಿಕೊಂಡು ಬಂದಿದ್ದೇವೆಯೋ ಅದೇ ಲೆಕ್ಕಾಚಾರ. ಅದಕ್ಕೆ ಧಕ್ಕೆಯಾಗುವುದನ್ನು ನಾವು ಸಹಿಸುವುದೂ ಇಲ್ಲ, ಒಪ್ಪಿಕೊಳ್ಳುವುದೂ ಇಲ್ಲ.

ಇಲ್ಲಿ ಸತ್ಯಾಂಶವೂ ಇಲ್ಲದೇ ಇಲ್ಲ. ವ್ಯವಸಾಯ ಅಥವಾ ಬೆಳೆ ಎನ್ನುವುದನ್ನು ತೆಗೆದು,

ಪೈರುಗಳನ್ನು ಬೆಳೆದು, ಅದರಿಂದ ದೊರಕುವ ಧಾನ್ಯಗಳಿಂದ ನಾವು ಹೊಟ್ಟೆ ತುಂಬಿಸಿಕೊಳ್ಳಬಹುದು ಎನ್ನುವ ಕಲ್ಪನೆ ಯಾವಾಗ ಮಾನವನ ತಲೆಯಲ್ಲಿ ಮಿಂಚಿತೋ ಆಗಲೇ ಅವನಿಗೆ ನೀರು, ಅದರ ಬಳಕೆ, ತನ್ನ ಆವಶ್ಯಕತೆಗಳಿಗೆ ನೀರನ್ನು ಬಳಸುವ ವಿಧಾನ – ಇಂಥವುಗಳ ಅಗತ್ಯ ಅವನಿಗೆ ಮನದಟ್ಟಾಗತೊಡಗಿತು. ನದಿಗಳ ನೀರಿನ ಮೇಲೆ ಅವನ ಕಣ್ಣುಗಳು ನೀರಿನಂತೆಯೇ ಹರಿದಾಡಲಾರಂಭಿಸಿದವು.

ನೀರನ್ನು ತಡೆಗಟ್ಟಿ ಅದರ ನೀರನ್ನು ತಾನು ಬಳಸಿಕೊಳ್ಳಬೇಕು. ಆದರೆ ಬಳಸಿಕೊಳ್ಳುವುದು ಹೇಗೆ?

ನೈಲ್ ನದಿ ಜಗತ್ತಿನ ಅತಿ ದೊಡ್ಡ ನದಿಯಷ್ಟೆ ಅದು ೬೬೭೦ ಕಿಲೋ ಮೀಟರುಗಳ ಉದ್ದ ಇದೆ. ಮೂರು ಅಥವಾ ನಾಲ್ಕು ಸಾವಿರ ವರುಷಗಳ ಹಿಂದೆಯೇ ನೈಲ್ ನದಿಗೆ ಅಣೆಕಟ್ಟು ಕಟ್ಟುವ ಪ್ರಯತ್ನ ನಡೆಯುತ್ತ ಇತ್ತಂತೆ. ಆದರೆ ಅದು ಸಫಲವಾಗುತ್ತ ಇರಲಿಲ್ಲ. ಒಡೆದು ಹೋಗುತ್ತ ಇತ್ತು. ಅಥವಾ ಕೊಚ್ಚಿ ಹೋಗುತ್ತ ಇತ್ತು.

ನದಿಗಳ ನೀರು ಕಡಮೆ ಇದ್ದಾಗ ಉದ್ದಕ್ಕೂ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಜೋಡಿಸಿ ಅದಕ್ಕೆ ಗಾರೆ-ಸುರ್ಕಿ ಬಳಿಯುವುದು ಇಂಥ ಪ್ರಯತ್ನ. ಇದು ಆಗಿನ ಅಣೆಕಟ್ಟು. ಆಗಿನ ಮಾನವನ ತಲೆಯಲ್ಲಿ ಮಿಂಚಿದ ಮಿಂಚು.

ಆಮೇಲಷ್ಟೆ ಹೀಗೆ ಬಂಡೆಗಲ್ಲುಗಳನ್ನಿಟ್ಟು ನೀರನ್ನು ತಡೆಹಿಡಿಯುವುದು ಸಾಧ್ಯವಿಲ್ಲ ಎನ್ನುವ ಆಲೋಚನೆ ಮಾನವನ ತಲೆಯಲ್ಲಿ ಸುಳಿದಾಡತೊಡಗಿತು. ತಲೆ ಇನ್ನಷ್ಟು ಬಿಸಿಯಾಯಿತು. ಅದೆಷ್ಟೋ ಸಹಸ್ರ ವರುಷಗಳು ಕಳೆದ ಮೇಲೆ ತಲೆ ಚುರುಕಾಯಿತು.

ಹಾಗಾದ ಮೇಲೆ ಹರಿಯುವ ನೀರನ್ನು ತಡೆಗಟ್ಟಿ ನಿಲ್ಲಿಸುವುದು ಹೇಗೆ?

ರಭಸವಾಗಿ ಒಟ್ಟು ಮೊತ್ತವಾಗಿ ಹರಿಯುವ ನೀರನ್ನು ಸೀಳು ಸೀಳು ಮಾಡಬೇಕು. ಯಾವುದನ್ನೂ ಭಾಗ ಮಾಡಿದರೆ ಅದರ ವೇಗವೂ ತೀವ್ರತೆಯೂ ಕಡಮೆಯಾಗುತ್ತದೆ. ನೀರಿನ ರಭಸ ಕುಗ್ಗುತ್ತದೆ. ಆಮೇಲೆ ಹಲವು ಬಾಗಿಲುಗಳನ್ನು ನಿರ್ಮಾಣ ಮಾಡಬೇಕು. ಒಂದೊಂದು ಬಾಗಿಲೊಳಗೂ ನೀರು ನುಗ್ಗುವಂತೆ ಅಳವಡಿಸಬೇಕು. ನೀರೊಳಗೆ ಮಣಲ ಕೆಳಗೆ ಉಕ್ಕಿನ ಕಂಭಗಳನ್ನು ನೆಟ್ಟು ಸೇತುವೆಯ ನಿರ್ಮಾಣ ಈ ರೀತಿ ಆಗಬೇಕು. ಆಗಷ್ಟೆ ನನಗೆ ಸಮಾನರಿಲ್ಲ ಎಂದು ಬೀಗುವ ನೀರನ್ನು ತಡೆಹಿಡಿಯುವುದು ಸಾಧ್ಯ.

ಪ್ರಯೋಗಗಳು ಇತರೇ ಕ್ಷೇತ್ರಗಳಂತೆ ನೀರನ್ನು ತಡೆಹಿಡಿಯುವುದರಲ್ಲಿಯೂ ಸಹಸ್ರ ಸಹಸ್ರ ವರುಷಗಳು ಕಳೆದವು. ಕೊನೆಗೆ ಒಂದು ದಿನ ತನ್ನ ಪ್ರಯೋಗದಲ್ಲಿ ಮಾನವ ಸಫಲನಾದ.

ಅಣೆಕಟ್ಟು ಸಿದ್ಧವಾಗಿ ಹೋಯಿತು.

ಕಳೆದ ಐದು ನೂರು ವರುಷಗಳಿಂದ ಇಂಥ ಇಂಜಿನಿಯರಿಂಗ್ ಸಾಧನೆ ಸಾಧ್ಯವಾಯಿತು ಎಂದು ಆ ಕ್ಷೇತ್ರದ ತಜ್ಞರು ಹೇಳುತ್ತಾರೆ.

ಈಗ ನಿಮಗೆ ಒಂದು ಆಶ್ಚರ್ಯದ ಸುದ್ದಿ.

ಇಂಜಿನಿಯರಿಂಗ್ ಕೌಶಲ ಸಿದ್ಧಿಸುವುದಕ್ಕೆ ಮೊದಲೇ ತಮಿಳರ ಒಬ್ಬ ಅರಸ, ಚೋಳರ ಅರಸ ಕರಿಕಾಲ ಎನ್ನುವವನು, ಬರೇ ಕಲ್ಲಿನಿಂದಲೇ ಒಂದು ಅಣೆಕಟ್ಟನ್ನು ಯಶಸ್ವಿಯಾಗಿ ಕಟ್ಟಿಮುಗಿಸಿದ. ಆದುದರಿಂದ ಇದಕ್ಕೆ ಕಲ್ಲಣೈ ಎಂದು ಹೆಸರಾಯಿತು. ಕಲ್ಲು+ಅಣೆ= ಕಲ್ಲಿನ ಅಣೆ. ಈಗ ಇದನ್ನು ಗ್ರಾಂಡ್ ಅಣೆಕಟ್ಟು ಎಂದೂ ಕರೆಯುತ್ತಾರೆ. ಇದು ತಂಜಾವೂರಿಗೂ ತಿರುಚಿನಾಪಳ್ಳಿಗೂ ಮಧ್ಯೆ ಇದೆ.

ಈ ಕರಿಕಾಲನ ಕಾಲ ಕ್ರಿ.ಶ. ೧೦೬೮ ಎಂದು ಖಚಿತವಾದ ಆಧಾರಗಳಿಂದ ಗುರುತಿಸಿದ್ದಾರೆ. ಎಂದರೆ ಈಗ್ಗೆ ೯೩೭ ವರುಷಗಳ ಹಿಂದೆ. ಮೊದಲನೆಯ ಶತಮಾನದ ಕೊನೆಯ ಭಾಗ ಮತ್ತು ಎರಡನೆಯ ಶತಮಾನದ ಆರಂಭ ಕಾಲದಲ್ಲಿ ಈತ ಇದ್ದುದಕ್ಕೆ ತಮಿಳು ಶಾಸನಗಳಿಂದ ಹಾಗೂ ಕಾವ್ಯಗಳಿಂದ ಆಧಾರ ಸಿಗುತ್ತದೆ.

ಆದರೆ ಒಂದು ಮಾತು ಮಾತ್ರ ಸತ್ಯ. ಭಾರತದಲ್ಲಿ ಒಂದು ನದಿಗೆ ಕಲ್ಲುಗಳಿಂದಲೇ ಅಡ್ಡಹಾಕಿ ಹರಿಯುವ ನೀರನ್ನು ನಿಲ್ಲಿಸಿದವನು ಕರಿಕಾಲನೇ; ತಮಿಳನೇ. ಏಷಿಯಾ ದಲ್ಲಿಯೇ ಈ ಪ್ರಯತ್ನ ಸಫಲವಾದದ್ದು ಕಾವೇರಿಗೆ ಮಾತ್ರ ಎನ್ನುವುದನ್ನು ನಾವೂ ಹೆಮ್ಮೆಪಟ್ಟುಕೊಳ್ಳಬೇಕಾಗಿದೆ. ಇಂಥ ಸಾಧನೆಗಳನ್ನು ಮಾಡಿದ ನಮ್ಮ ಹಿರಿಯರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಬೇಕಾಗಿದೆ. ಹಾಗೆಯೇ ಈ ಹಿರಿಮೆ ತಮಿಳರಿಗೇ ಸಲ್ಲುತ್ತದೆ.

ಅಷ್ಟೇ ಅಲ್ಲ, ಕರಿಕಾಲನ ಕಾಲದಲ್ಲಿ ಈಗಿನ ಇಂಜಿನಿಯರಿಂಗ್ ಕೌಶಲ ಜಗತ್ತಿಗೆ ಪರಿಚಯ ಆಗದಿದ್ದರೂ 'ಸಾವಿರ ವರುಷಗಳ ಹಿಂದಿನ ಸಮರ್ಥ ಇಂಜಿನಿಯರ್' ಎಂದು ಈತನನ್ನು ಯಾವ ಮುಲಾಜೂ ಇಲ್ಲದೇ ಹೇಳಿಬಿಡಬಹುದು. ನೀರಿನ ಆಳ, ಅಗಲಗಳಿಗೆ ತಕ್ಕ ಕಲ್ಲುಗಳನ್ನು ಮಣಲೊಳಗೇ ಹೂಳುವ ಹಾಗೆ, ಅದು ನೆರೆ ಬಂದಾಗ, ನದಿ ಉಕ್ಕಿ ಆರ್ಭಟಿಸಿ ರಂಪ ಮಾಡುವಾಗ ಸಹ ಈ ಕಲ್ಲಿನ ಕಂಭಗಳು ಚೂರೂ ಅಳ್ಳಾಡದಂತೆ ನಿಲ್ಲಿಸುವುದರಲ್ಲಿ ಸಫಲನಾದ ಅರಸ ಕರಿಕಾಲನನ್ನು ಸಮರ್ಥ ಇಂಜಿನಿಯರ್ ಎನ್ನದೆ ಬೇರೇನು ಹೇಳಲು ಸಾಧ್ಯ? ಇಂದಿಗೂ ಈ ಕಲ್ಲಣೈ ಆಧುನಿಕ ತಂತ್ರಜ್ಞಾನಗಳಿಂದ ನಿರ್ಮಾಣವಾಗುವ ಅಣೆಕಟ್ಟುಗಳಿಗೆ ಒಂದಿನಿತೂ ವ್ಯತ್ಯಾಸವಾಗ ದಂತೆ ಗಟ್ಟಿಯಾಗಿ ಭದ್ರವಾಗಿ ನಿಂತುಬಿಟ್ಟಿದೆ.

ಅಂತೂ ಕಾವೇರಿ ಇವನಿಗೆ ಶರಣಾಗಿ ಬಿಟ್ಟಳು.

ಇದೇ ರೀತಿ ತಮಿಳರ ಪ್ರಾಚೀನ ಕಾವ್ಯಗಳಲ್ಲಿಯೂ ಕಾವೇರಿಯ ಪ್ರಸ್ತಾಪ ಬರುತ್ತದೆ.

ಕ್ರಿ. ಶ. ಎರಡನೆಯ ಶತಮಾನದಲ್ಲಿದ್ದ ಇಳಂಗೋ ಎನ್ನುವ ಕವಿಯ 'ಶಿಲಪ್ಪದಿಗಾರಂ' ಎನ್ನುವ ಮಹಾಕಾವ್ಯ ಕಾವೇರಿಯ ವರ್ಣನೆಗಳಿಂದಲೇ ತುಂಬಿ ಹೋಗಿದೆ. ನಮ್ಮ ಕನ್ನಡದ 'ಕಂಠೀರವ ನರಸರಾಜ ವಿಜಯ'ದ ಹಾಗೆ 'ಶಿಲಪ್ಪದಿಗಾರಂ' ಕಾವ್ಯದ ಪ್ರಾರಂಭವೇ 'ಕಡರ್‍ಕ್ಕರೈ ಮೆಲಿಕ್ಕುಂ ಕಾವೇರಿ ಪೇರಿಯಾಟ್ರು...' ಎಂದು ಪ್ರಾರಂಭವಾಗುತ್ತದೆ. ಇದರ ಅರ್ಥ ಕಡಲಿನ ದಂಡೆಯನ್ನು ಅಪ್ಪಳಿಸುವ ಕಾವೇರಿಯ ಆರ್ಭಟ ಎಂದು.

ಕೃಷ್ಣಾಕ್ಕೂ ಕಾವೇರಿಗೂ ವ್ಯತ್ಯಾಸ ಇಲ್ಲಿದೆ. ಮೈಸೂರು ಅರಸರು ತಮಿಳು ನಾಡಿನಿಂದ ಪ್ರೇರಿತರಾಗಿಯೋ ಇಲ್ಲವೇ ತಮ್ಮದೇ ತೀರ್ಮಾನಗಳಿಂದಲೋ ಕಾವೇರಿಯ ನೀರನ್ನು ಬಳಸಿಕೊಳ್ಳಲು ಹಿಂದಿನಿಂದಲೂ ಪ್ರಾರಂಭಿಸಿದ್ದಾರೆ. ಹದಿನೇಳನೆಯ ಶತಮಾನದಲ್ಲಿ ಮೈಸೂರಿನ ಅರಸನಾಗಿದ್ದ ಚಿಕ್ಕದೇವರಾಜ ಕಾವೇರಿಗೆ ಅಡ್ಡಕಟ್ಟೆ ಹಾಕಲು ಯತ್ನಿಸಿದ್ದಾನೆ. ಕೆಲ ಕಾಲದ ಬಳಿಕ ಅದು ಒಡೆದು ಹೋಗಿದೆ.

ವಿಜಯನಗರದ ಅರಸರ ಕಾಲದಲ್ಲಿ ತಲಕಾಡಿನ ಬಳಿ ಮಾಧವಮಂತ್ರಿ ಅಣೆಕಟ್ಟು ಆಗಿದೆ. ಇದೂ ಸಹ ಕಲ್ಲುಕಟ್ಟಡವೇ. ಆಗಿನ ಕಾಲದಲ್ಲಿ ಹರಿಯುವ ನೀರಿಗೆ ಕಲ್ಲುಗಳನ್ನು ಹಾಕದೆ ನಮ್ಮವರಿಗೆ ಬೇರೇನು ಮಾಡಲು ಸಾಧ್ಯವಿತ್ತು?

ಕ್ರಿ.ಶ. ೧೧೪೬ರಿಂದ ಕ್ರಿ. ಶ. ೧೧೬೩ರವರೆಗೆ ಚೋಳನಾಡನ್ನು ಎರಡನೆಯ ರಾಜರಾಜನ್ ಎನ್ನುವ ಅರಸ ಪರಿಪಾಲಿಸುತ್ತ ಇದ್ದ.

ಈತನ ಕಾಲದಲ್ಲಿ ಈ ಕಡೆ ಹೊಯ್ಸಳ ರಾಜ್ಯವನ್ನು ಆಳುತ್ತ ಇದ್ದವನು ಮೊದಲನೆಯ ನರಸಿಂಹ. ಈತ ತಮಿಳು ನಾಡಿಗೆ ನೀರೇ ಹೋಗಬಾರದು ಎಂದು ಕೃತಕ ಗುಡ್ಡಗಳನ್ನು ಕಾವೇರಿಯ ಮಧ್ಯೆ ನಿರ್ಮಿಸಿದನಂತೆ. ಈ ಗುಡ್ಡಗಳನ್ನು ಒಡೆದು ಹಾಕಲು ಚೋಳರೊಂದಿಗೆ ಪಾಂಡ್ಯರೂ ಸೇರಿಕೊಂಡು ಯುದ್ಧಕ್ಕೆ ಇತ್ತ ಬರುತ್ತ ಇದ್ದಾಗ, ಪ್ರವಾಹ ಬಂದು ಗುಡ್ಡಗಳು ಕೊಚ್ಚಿಹೋದುವಂತೆ. ತಮಿಳಿನ ಕೆಲವು ಕಾವ್ಯಗಳಲ್ಲಿ ಇಂಥ ಪ್ರಸ್ತಾಪಗಳು ಬರುತ್ತವೆ. ಎಂದರೆ ಸಹಸ್ರ ವರ್ಷಗಳಿಂದಲೂ ತಮಿಳರಿಗೂ ಕನ್ನಡಿಗರಿಗೂ ವೈಮನಸ್ಯ ಬೆಳೆದಿತ್ತು ಎನ್ನುವುದು ಮಾತ್ರ ಖಚಿತವಾಗಿದೆ.

ಈ ಖಚಿತತೆಗೆ ಇಂಬುಗೊಡುವಂತೆ ಹದಿಮೂರನೆಯ ಶತಮಾನದಲ್ಲಿದ್ದ ನಮ್ಮ ಕೇಶಿರಾಜ ತನ್ನ ವ್ಯಾಕರಣ ಗ್ರಂಥ, 'ಶಬ್ದಮಣಿದರ್ಪಣ'ದಲ್ಲಿ–

"...... ಕಾವೇರಿಯ
ಕಾಲನಾ ತಿಗುಳನೇಂ ಕಡಗೊಂಡನೋ
ಬಡ್ಡಿಗೊಂಡನೋ"

ಎಂದು ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದ್ದಾನೆ. ಎಂದರೆ ನಮ್ಮ ಕಾವೇರಿಯ ಕಾಲುವೆಗಳನ್ನು ತಮಿಳರು ಸಾಲಕ್ಕೆ ತೆಗೆದುಕೊಂಡಿದ್ದಾರೋ ಬಡ್ಡಿಗೆ ತೆಗೆದುಕೊಂಡಿದ್ದಾರೋ ಎನ್ನುತ್ತಾನೆ.

ಹೀಗೆ ಸಾವಿರಾರು ವರುಷಗಳಿಂದಲೂ ತಮಿಳರಿಗೂ ಕನ್ನಡಿಗರಿಗೂ ಕಾವೇರಿಯ ವಿಚಾರದಲ್ಲಿ ಕಹಿ ಇರುವುದರಿಂದಲೇ ಹತ್ತೊಂಬತ್ತನೆಯ ಶತಮಾನದಲ್ಲಿ ಮೈಸೂರು ಅರಸರು ಕಾವೇರಿಯ ನೀರಿನ ಬಳಕೆಗೆ ಪ್ರಯತ್ನಿಸಿದಾಗ ತಮಿಳರು ಎಚ್ಚೆತ್ತರು. ೧೮೯೨ ಮತ್ತು ೧೯೨೪ರ ಒಪ್ಪಂದಗಳು ಆದುವು.

ಟಿಪ್ಪುಸುಲ್ತಾನನೂ ಹಿಂದಿನ ಕಾಲದ ಕಾಲುವೆಗಳ ದುರಸ್ತಿ ಕೆಲಸ, ನೀರಾವರಿ, ಒಂದು ಸೇತುವೆಯ ನಿರ್ಮಾಣ ಇತ್ಯಾದಿಗಳನ್ನು ಮಾಡಿಸಿದ್ದಾನೆ.

ಈ ಒಪ್ಪಂದಗಳು ಆದದ್ದೂ ಸ್ವಾರಸ್ಯಕರ. ಕ್ರಿ. ಶ. ೧೭೯೯ರಲ್ಲಿ ಟಿಪ್ಪುಸುಲ್ತಾನನ ಪತನದ ನಂತರ, ಆತನ ಬಗ್ಗೆ ಕಿಡಿಕಾರುತ್ತಿದ್ದ ಆಂಗ್ಲರು, ಆಂಗ್ಲ ಸರಕಾರ, ಈಗ ಮೈಸೂರಿನ ಮೇಲೆ ಪೂರ್ಣವಾಗಿ ತನ್ನ ಪ್ರಭುತ್ವವನ್ನು ಸ್ಥಾಪಿಸಿಬಿಟ್ಟಿತು. ಆಗ ಭಾಷಾವಾರು ಪ್ರಾಂತ್ಯಗಳು ಇಲ್ಲದ್ದರಿಂದ ಮದರಾಸು ಪ್ರಾವಿನ್ಸ್ ಎಂದು ಹೆಸರಾಗಿತ್ತು. ಎಂದರೆ ಮದರಾಸು ರಾಜ್ಯ.

ಮದರಾಸಿಗೆ ಆಗ ದಕ್ಷಿಣ ಭಾರತದ ಎಂದರೆ ತಮಿಳುನಾಡು ಪೂರಾ, ಆಂಧ್ರ ಪ್ರದೇಶ, ಮುಕ್ಕಾಲು ಭಾಗ ಕೇರಳ, ಕರ್ಣಾಟಕದ ಕೆಲವು ಪ್ರದೇಶಗಳು- ಇವಿಷ್ಟೂ ಸೇರಿಕೊಂಡಿದ್ದುವು. ಎಂದರೆ ಮದರಾಸು ಅಥವಾ ತಮಿಳುನಾಡು ತುಂಬಾ ಬಲಿಷ್ಠವಾಗಿತ್ತು. ತಮಿಳರು ತುಂಬಾ ಬಲಿಷ್ಠರಾಗಿದ್ದರು. ಮೈಸೂರು ಸಂಸ್ಥಾನ ಹೆಸರಿಗೆ ಅರಸರು ಇದ್ದರೂ ಒಬ್ಬ ಕಮಿಷನರರ ಆಳ್ವಿಕೆಗೆ ಅದು ಸೇರಿಹೋಗಿತ್ತು. ಆಗ ಆದ ಒಪ್ಪಂದವೇ ೧೯೨೪ರ ಒಪ್ಪಂದ. ತಮಿಳರೇ ತಮ್ಮ ಪ್ರಭಾವ ಇದ್ದ ಕಾಲದಲ್ಲಿ ರೂಢಿಸಿಕೊಂಡ ಏಕಪಕ್ಷೀಯವಾದ ಒಪ್ಪಂದ.

ಈ ಒಪ್ಪಂದದ ಸಾರಾಂಶ ಮೈಸೂರು ಸಂಸ್ಥಾನದಲ್ಲಿ ಯಾವುದೇ ಒಂದು ಹೊಸ ಅಣೆಕಟ್ಟನ್ನು ನಿರ್ಮಿಸಬೇಕಾದರೂ ಮದರಾಸಿನಿಂದ ಅನುಮತಿ ಪಡೆಯಬೇಕು. ತಮಿಳುನಾಡಿಗೆ ಈ ನಿರ್ಬಂಧ ಇಲ್ಲ. ಮದರಾಸಿನ ಅನುಮತಿ ಇಲ್ಲದೆ ಮೈಸೂರು ಸಂಸ್ಥಾನ ಏನೂ ಮಾಡುವ ಹಾಗಿಲ್ಲ.

ಈಗ ಮುಂಬಯಿಂದ ಮೈಸೂರಿಗೆ ಮೊದಲು ಚೀಫ್ ಇಂಜಿನಿಯರಾಗಿ, ಆ ಬಳಿಕ ದಿವಾನರಾದ ಸರ್. ಎಂ.ವಿಶ್ವೇಶ್ವರಯ್ಯನವರು ಕನ್ನಂಬಾಡಿ ಎಂದರೆ ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟಲು ಮುಂದಾದರು. ಆಗ ಮದರಾಸಿನಿಂದ ಹೆಜ್ಜೆ ಹೆಜ್ಜೆಗೂ ತೀವ್ರ ಪ್ರತಿಭಟನೆಯಾಯಿತು. ಆದರೆ ಸಮರ್ಥ ಇಂಜಿನಿಯರೂ ಮೇಧಾವಿಯೂ ಆದ ವಿಶ್ವೇಶ್ವರಯ್ಯನವರು ತಮ್ಮ ಸಾಮರ್ಥ್ಯದಿಂದ ಎದೆಗಾರಿಕೆಯಿಂದ ಈ ಕಾರ್ಯವನ್ನು ಪೂರ್ಣಗೊಳಿಸಿದರು. ಕೃಷ್ಣರಾಜಸಾಗರ ನಿರ್ಮಾಣಕ್ಕೆ ವಿಶ್ವೇಶ್ವರಯ್ಯನವರು ಹೇಗೆ ದೃಢವಾಗಿದ್ದರೋ ಹಾಗೆಯೇ ಅವರಿಗೆ ಬೆಂಬಲವಾಗಿ ಜನಾನುರಾಗಿಯಾಗಿದ್ದ ರಾಜರ್ಷಿ

ನಾಲ್ಮಡಿ ಕೃಷ್ಣರಾಜ ಒಡೆಯರೂ ಮುಖ್ಯ ಕಾರಣರಾಗಿದ್ದರು. ನಾಲ್ಮಡಿಯವರ ದೃಢತೆಯೇ ಕೆ.ಆರ್. ಸಾಗರಕ್ಕೆ ಅಡಿಪಾಯ ಆಯಿತು.

ಆ ಕಾಲದಲ್ಲಿ ಕೃಷ್ಣರಾಜಸಾಗರ ನಿರ್ಮಾಣಕ್ಕೆ ಮದರಾಸಿನವರ ತೀವ್ರ ಪ್ರತಿಭಟನೆಯಿಂದಾಗಿ ಇದನ್ನು ಕಟ್ಟಿ ಮುಗಿಸಲು ೨೧ ವರ್ಷಗಳು ತೆಗೆದುಕೊಂಡಿತು. ಇದಕ್ಕಿಂತ ದೊಡ್ಡದಾದ ಮದರಾಸು ಪ್ರಾಂತ್ಯದ ಮೆಟ್ಟೂರು ನಿರ್ಮಾಣಕ್ಕೆ ಕೇವಲ ಆರು ವರ್ಷಗಳು. ಕೃಷ್ಣರಾಜಸಾಗರ ೧೯೧೧ರಲ್ಲಿ ಪ್ರಾರಂಭವಾಯಿತು. ೧೯೩೨ರಲ್ಲಿ ಮುಗಿಯಿತು. ಮೆಟ್ಟೂರಿನ ಕೆಲಸ ೧೯೨೮ರಲ್ಲಿ ಪ್ರಾರಂಭವಾಯಿತು. ೧೯೩೪ಕ್ಕೆ ಮುಗಿಯಿತು.

ಕೆ.ಆರ್. ಸಾಗರ ನಿರ್ಮಾಣಕ್ಕೆ ಆಗಿನ ಕಾಲದ ಪರಿಸ್ಥಿತಿ ಎಷ್ಟು ಗಂಭೀರವಾಗಿತ್ತು ಎನ್ನುವುದನ್ನು ನೀವೇ ಊಹಿಸಿಕೊಳ್ಳಬಹುದು. ಭಾರತದ ಯಾವ ನದಿಗೂ ಅಣೆಕಟ್ಟಿನ ನಿರ್ಮಾಣಕ್ಕೂ ಇಂಥ ಪ್ರತಿರೋಧ ಬಂದಿಲ್ಲ; ಬಂದಿರಲಿಲ್ಲ.

ಒಂದು ಕಾಲದಲ್ಲಿ ಒಂದು ನೀರನ್ನು ಅಲ್ಲಿಯ ಜನ ಅನುಭವಿಸಿದ ಮಾತ್ರಕ್ಕೆ ಅದು ಅವರಿಗೇ ಸ್ವಾಮ್ಯ ಆಗಿಬಿಡುವುದಿಲ್ಲ. ನೀರು ಎಲ್ಲರಿಗೂ ಸೇರಿದ್ದು. ಕೆಳಭಾಗದವರಿಗೆ ಎಷ್ಟು ಹಕ್ಕಿದೆಯೋ ಮೇಲಿನ ಭಾಗದವರಿಗೂ ಅಷ್ಟೇ ಹಕ್ಕಿದೆ ಎನ್ನುವುದು ಸಾಮಾನ್ಯರಿಗೂ ತಿಳಿದ ಜ್ಞಾನ. ತಮಿಳರು ಇದನ್ನು ಒಪ್ಪದಿದ್ದರೆ ಏನಂತೆ? ಆಗಿನ ಕಾಲದಲ್ಲಿ ಆಂಗ್ಲ ಅಧಿಕಾರಿಗಳಲ್ಲಿ ಆಂಗ್ಲ ಮಹನೀಯರುಗಳಲ್ಲಿ ಕೆಲವರು ಇದನ್ನು ಒಪ್ಪಲಿಲ್ಲ ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ನೀಡೋಣವೆ?

ಕಬ್ಬನ್ ೧೮೩೪ರಲ್ಲಿ ಮೈಸೂರು ಪ್ರಾಂತ್ಯದ ಚೀಫ್ ಕಮಿಷನರಾಗಿ ನೇಮಕಗೊಂಡ. ಈತನ ಪೂರ್ಣ ಹೆಸರು ಲೆಫ್ಟಿನೆಂಟ್ ಕರ್ನಲ್ ಸರ್ ಮಾರ್ಕ್ ಕಬ್ಬನ್. ಸೇನೆಗೆ ಅಧಿಕಾರಿಯಾಗಿ ತಿರುವನಂತಪುರಕ್ಕೆ ಬಂದವ. ಬೆಂಗಳೂರಿನ ಕಬ್ಬನ್ ಪಾರ್ಕ್ ಈತನ ಹೆಸರನ್ನು ಹೊತ್ತಿದೆ. ಕನ್ನಡವೇ ಆಡಳಿತ ಭಾಷೆ ಆಗಬೇಕು ಎಂದವ ಈ ಆಂಗ್ಲೇಯ. ಮೈಸೂರು ಸಂಸ್ಥಾನದ ಪ್ರಗತಿಗಾಗಿ ಸಾಕಷ್ಟು ದುಡಿದ ಬ್ರಹ್ಮಚಾರಿ. ಕನ್ನಡಿಗರನ್ನೂ ಕನ್ನಡನಾಡನ್ನೂ ತುಂಬಾ ಪ್ರೀತಿಸಿದವ. ಈತ ಹೇಳುವುದನ್ನು ಕೇಳಿ :

''ಮದರಾಸಿನ ತೋಳಗಳಿಂದ ಮೈಸೂರನ್ನು ರಕ್ಷಿಸಬೇಕು.''

ಎಲಿಯಟ್ ಎನ್ನುವ ಒಬ್ಬ ಕಾಫಿಪ್ಲಾಂಟರ್. ಚಿಕ್ಕಮಗಳೂರು ಬೆಟ್ಟಸಾಲಿನಲ್ಲಿ ಇದ್ದವ. ಮೈಸೂರು ಸಂಸ್ಥಾನದ ಮೇಲಣ ಇವನ ಪ್ರೀತಿಗಾಗಿ ನಾಲ್ಮಡಿಯವರು, ಈತನನ್ನೂ ತಮ್ಮ 'ಪ್ರಜಾಪ್ರತಿನಿಧಿ ಸಭೆ' ಯಲ್ಲಿ ಒಬ್ಬ ಸದಸ್ಯನನ್ನಾಗಿ ನೇಮಕ ಮಾಡಿದ್ದರು.

ಈತ ರೈನ್ ನದಿ ಸೂತ್ರವನ್ನು ಬಲವಾಗಿ ವಿರೋಧಿಸಿದ. ಯೂರೋಪಿನಲ್ಲಿ ಹರಿಯುವ ರೈನ್ – RHINE- ನದಿಗೆ, ಅದರ ಹಂಚಿಕೆಗೆ, ಅಲ್ಲಿನ ರಾಷ್ಟ್ರಗಳು ಒಂದು ಕಾನೂನನ್ನು ರೂಪಿಸಿದ್ದವು. ಆದರೆ ೧೮೯೨ರ ಕಾವೇರಿ ಒಪ್ಪಂದಕ್ಕೆ ಆಂಗ್ಲರು ಈ ಸೂತ್ರವನ್ನೇ ಅನುಸರಿಸಿದರು.

ಆಗಿನ ಕಾಲದ ಅಂತರರಾಷ್ಟ್ರೀಯ ಖ್ಯಾತಿಯ ನೀರಾವರಿಯ ತಜ್ಞ ಎಂದು ಹೆಸರುಗಳಿಸಿದ್ದ ಬರ್ಬರ್ ಎನ್ನುವವನು ಕಾವೇರಿ ಒಪ್ಪಂದವನ್ನು ಕಟುವಾಗಿ ಟೀಕಿಸಿ ದ್ದಾನೆ. ''ವಿವಾದವನ್ನು ಕಾನೂನು ಪ್ರಕಾರ ಇತ್ಯರ್ಥಪಡಿಸದೆ, ಸಾರ್ವಭೌಮತ್ವ ಹೊಂದಿದ್ದ ಆಂಗ್ಲ ಸರಕಾರದ ಅಧಿಕಾರಯುತ ನಿರ್ಧಾರದಂತೆಯೇ ಚಲಾಯಿಸಲಾಗಿದೆ'' ಎಂದಿದ್ದಾನೆ.

೧೮೮೯ರಲ್ಲಿ ಮೈಸೂರು ಪ್ರಾಂತ್ಯದ ದಿವಾನರಾಗಿದ್ದ ಅದರಲ್ಲೂ ತಮಿಳರೇ ಆಗಿದ್ದ ದಿವಾನ್ ಶೇಷಾದ್ರಿ ಅಯ್ಯರ್ ರೆಸಿಡೆಂಟರಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದು ಬಹಳ ಮುಖ್ಯವಾದದ್ದು. ಆ ಕಾಗದದಲ್ಲಿ ಅವರು ''ಮೈಸೂರು ಸಂಸ್ಥಾನದ ಹೊಸ ನೀರಾವರಿ ನಿರ್ಮಾಣದ ಕೆಲಸಗಳು ಮೈಸೂರು ನೆಲದ ಮೇಲೆ ಬೀಳುವ ಮಳೆನೀರನ್ನು ವ್ಯರ್ಥಗೊಳಿಸದಂತೆ ಸಂಗ್ರಹಿಸಿ ಇಟ್ಟುಕೊಳ್ಳುವ ಉದ್ದೇಶವನ್ನು ಹೊಂದಿದೆ. ನಮ್ಮ ನೆಲದ ಮೇಲೆ ಬೀಳುವ ನೀರಿನ ಮೇಲೆ, ನಮಗೇ ಹೆಚ್ಚಿನ ಅಧಿಕಾರ ಇದೆ. ಕಾವೇರಿ ನಮ್ಮ ಗಡಿಯಿಂದ ಹೊರಗೆ ಉಗಮ ಆಗುವ ನದಿ ಅಲ್ಲ. ತಂಜಾವೂರಿನ ರೈತರು ಮೊದಲಿನಿಂದಲೂ ಬಳಸಿಕೊಳ್ಳುತ್ತ ಇದ್ದಾರೆ ಎಂದ ಮಾತ್ರಕ್ಕೆ ಕಾವೇರಿ ತಂಜಾವೂರಿಗೆ ಸೇರಿದ್ದೂ ಅಲ್ಲ...'' ಎಂದು ಬಲವಾಗಿ ಪ್ರತಿಪಾದಿಸಿದ್ದಾರೆ.

ಈ ದಿವಾನ್ ಶೇಷಾದ್ರಿ ಅಯ್ಯರ್ ಕಾಲದಲ್ಲಿಯೇ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಪ್ರಾರಂಭವಾಯಿತು. ಇದೂ ಸಹ ಏಷ್ಯಾದಲ್ಲಿಯೇ ಮೊದಲ ಪ್ರಯತ್ನ.

ಮೈಸೂರಿನ ಅರಸರಲ್ಲಿ ಹೆಚ್ಚಿನವರು ಜನರಿಗೆ ಸಮೀಪವಾಗಿ ಜನಹಿತ ಕಾರ್ಯಗಳನ್ನು ಕೈಗೊಂಡಂತೆ ಈ ಸಂಸ್ಥಾನಕ್ಕೆ ಹೊರಗಿನಿಂದ ಬಂದ ಅನೇಕ ದಿವಾನರೂ ಶ್ರದ್ಧೆಯಿಂದ ದುಡಿದಿದ್ದಾರೆ. ಈ ನೆಲವನ್ನು ತಮ್ಮದೆಂದೇ ಭಾವಿಸಿದ್ದಾರೆ. ದಿವಾನ್ ರಂಗಾಚಾರ್ಲು, ದಿವಾನ್ ಶೇಷಾದ್ರಿ ಅಯ್ಯರ್– ಈ ಥರ. ವಿಶ್ವೇಶ್ವರಯ್ಯನವರ ಮಾತು ಬಿಡಿ. ಅವರು ನಮ್ಮವರೇ.

ಕೃಷ್ಣೆಗೆ ಈ ಭಾಗ್ಯ ಇಲ್ಲ. ವಿಜಯನಗರದ ಪತನದೊಂದಿಗೆ ಅದರ ಕಥೆಯೂ ಮುಗಿದುಹೋಯಿತು. ಮೈಸೂರಿನಲ್ಲಿ ಜನಪ್ರಿಯರಾದ ಅರಸರೂ ಇದ್ದರು. ಜನಪ್ರಿಯರಾದ ದಿವಾನರೂ ಇದ್ದರು.

ದಕ್ಷಿಣ ಕರ್ನಾಟಕ ಮುಂದುವರಿದು, ಉತ್ತರ ಕರ್ನಾಟಕ ಹಿಂದುಳಿಯಲು ಇವೆಲ್ಲವೂ ಮುಖ್ಯ ಕಾರಣಗಳಾಗಿವೆ.

ಒಂದು ಸಲ ಗಾಂಧೀಜಿಯವರೂ ಕೃಷ್ಣರಾಜಸಾಗರಕ್ಕೆ ಭೇಟಿ ನೀಡಿ ''ಅದ್ಭುತ, ಅದ್ಭುತ'' ಎಂದು ವಿಶ್ವೇಶ್ವರಯ್ಯನವರ ಬೆನ್ನುತಟ್ಟಿ ಹೋಗಿದ್ದಾರೆ.

ಇಂಥ ಪರಿಪಾಟಲುಗಳು ಎಲ್ಲವೂ ಕೃಷ್ಣೆಗೆ ಇದೆಯೆ? ಆಗಿದೆಯೆ? ಉಹೂಂ, ಆಕೆ ಯಾವ ಕಟ್ಟುಪಾಡುಗಳಿಗೂ ಈಡಾಗದೆ ಮೌನವಾಗಿ ಹರಿದಿದ್ದಾಳೆ; ಈಗಲೂ ಹಾಗೆಯೇ ಹರಿಯುತ್ತ ಇದ್ದಾಳೆ.

ವಾರ್ಷಿಕವಾಗಿ ಕರ್ನಾಟಕದಲ್ಲಿ ೧೫,೭೧೫ ಮಿಲಿಮೀಟರ್ ಮಳೆ ಆದರೂ, ತಮಿಳು ನಾಡಿನಲ್ಲಿ ೧೧,೪೭೨ ಮಿಲಿ ಮೀಟರ್ ಮಳೆ ಬಿದ್ದರೂ, ನೀರಿನ ಸಂಪತ್ತು ನೀರಿನ ಲಭ್ಯತೆ ತಮಿಳುನಾಡಿಗಿಂತ ಕರ್ನಾಟಕಕ್ಕೆ ನಿಸರ್ಗ ಹೆಚ್ಚು ಒದಗಿಸಿಕೊಟ್ಟಿದ್ದರೂ, ನದಿಗಳು ತಮಿಳುನಾಡಿಗಿಂತ ಕರ್ನಾಟಕದಲ್ಲಿ ಹೆಚ್ಚು ಇದ್ದರೂ ಸಹ, ಕರ್ನಾಟಕ ನೀರಾವರಿಯಲ್ಲಿ ಹೇಗೆ ಹಿಂದೆ ಬಿದ್ದಿದೆ, ತಮಿಳುನಾಡು ಮುಂದಿದೆ ಸ್ವಲ್ಪ ಇಲ್ಲಿ ಗಮನಿಸಿ.

ಇದು ೧೯೮೯-೯೦ರ ಲೆಕ್ಕಾಚಾರ. ಈಗ ಇದರಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಆಗಿರಬಹುದು.

ತಮಿಳುನಾಡು ಶೇಕಡಾ	೪೬.೯೫
ಕರ್ನಾಟಕ ಶೇಕಡಾ	೨೨.೪೪
ಭಾರತ ಶೇಕಡಾ	೪೦.೫೯

ಇಡೀ ಭಾರತವನ್ನು ತೆಗೆದುಕೊಂಡರೆ ಶೇಕಡಾ ೪೦.೫೯ ಮಾತ್ರ ಆಗುತ್ತದೆ. ತಮಿಳುನಾಡು ಜಗಳವಾಡಿಕೊಂಡೇ ಹೇಗೆ ಮುಂದಿದೆ ಎನ್ನುವುದು ಈಗ ನಿಮಗೆ ತಿಳಿಯುತ್ತ ಇದೆ ಅಲ್ಲವೆ?

ಕರ್ನಾಟಕದಂತೆಯೇ ನೀರಾವರಿಯಲ್ಲಿ ಗುಜರಾತ್, ಬಿಹಾರ, ಮಧ್ಯಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ- ಮುಂತಾದ ರಾಜ್ಯಗಳು ಕುಂಟಪ್ಪನ ಕುಂಟು ಕುದುರೆಯಾಗಿ ಹಿಂದೆ ಹಿಂದೆ ಬಿದ್ದಿವೆ; ಹಿಂದಿನ ಬೆಂಚಿನಲ್ಲಿ ಕುಳಿತಿವೆ. ಪಂಜಾಬ್, ಹರಿಯಾಣ, ತಮಿಳುನಾಡು- ದಾಪುಗಾಲು ಹಾಕಿವೆ. ಓಡು ಓಡು ಓಡು ಬಹಳ ದೂರ ಮುಂದೆ ಮುಂದೆ ಓಡಿಬಿಟ್ಟಿವೆ.

ಕಾವೇರಿ ಡೆಲ್ಟಾದಿಂದ ಕರ್ನಾಟಕಕ್ಕಿಂತ ತಮಿಳುನಾಡಿಗೇ ಹೆಚ್ಚು ಪ್ರಯೋಜನವಾಗಿದ್ದರೂ ಈ ನದಿ ಒಂದೇ ಅಲ್ಲದೆ ಇತರೇ ಮೂಲಗಳಿಂದಲೂ ತಮಿಳುನಾಡು ಹೇಗೆ ನೀರನ್ನು ದೊರಕಿಸಿಕೊಂಡು ನೀರಾವರಿಯಲ್ಲಿ ಮುಂದೆ ಸಾಗಿದೆ ಎನ್ನುವಾಗ ತಮಿಳರನ್ನು

ನಾವು ಪ್ರಶಂಸಿಸಲೇಬೇಕಾಗಿದೆ. ಈ ಪಟ್ಟಿಯನ್ನು ಈಗ ನೀವು ಅವಲೋಕನ ಮಾಡಬಹುದು.

ಕರ್ನಾಟಕ

ಜಿಲ್ಲೆ	ಶೇಕಡಾ ವಿವರ	ಕಾಲುವೆಗಳು	ಕೆರೆಗಳು	ಬಾವಿ	ಇತರೇ	ಒಟ್ಟು
ಕೊಡಗು	೬೩.೫	೨೩	೧೫	-	೧೩	೫೧
ಹಾಸನ	೭೩.೫	೫೯	೨೫೪	೧೮	೭೦	೪೦೧
ಚಿಕ್ಕಮಗಳೂರು	೮.೪	೭	೧೬	೧	೧	೨೫
ಮೈಸೂರು	೧೦೦.೦	೪೭೨	೧೪೮	೯೩	೧೪	೭೨೭
ಮಂಡ್ಯ	೧೦೦.೦	೬೧೪	೧೩೪	೫೪	೧೮	೮೨೦
ತುಮಕೂರು	೩೫.೪	೪	೧೩೭	೧೧೧	೨೩	೨೭೫
ಬೆಂಗಳೂರು	೬೭.೩	೧೯	೨೩೩	೧೬೭	೧೯	೪೩೮
	ಒಟ್ಟು	೧೧೯೮	೯೩೭	೪೪೪	೧೫೮	೨೭೩೭

ತಮಿಳುನಾಡು

ಜಿಲ್ಲೆ	ಶೇಕಡಾ ವಿವರ	ಕಾಲುವೆಗಳು	ಕೆರೆಗಳು	ಬಾವಿ	ಇತರೇ	ಒಟ್ಟು
ನೀಲಗಿರಿ	೭೬.೫				೫	೫
ಕೊಯಮತ್ತೂರು	೭೬.೭	೭೪೭	೩೪	೧೧೧೪	೧೭	೧೯೧೨
ಮಧುರೆ	೩೨.೧	೨೧೪	೧೬೭	೨೭೮	೮	೬೬೭
ಸೇಲಂ	೬೬.೪	೧೪೨	೯೮	೫೮೧	೩೯	೮೬೦
ಧರ್ಮಪುರಿ	೩೪.೨	೪೫	೬೦	೯೫	೧	೨೦೧
ತಿರುಚಿನಾಪಳ್ಳಿ	೬೩.೧	೫೨೮	೫೦೧	೪೦೪	೨೩	೧೪೫೮
ತಂಜಾವೂರು	೭೧.೦	೩೪೩೬	೨೨೩	೬೦	೩	೩೭೨೨
ದಕ್ಷಿಣ ಆರ್ಕಾಟ್	೭.೯	೬೨	೯೩	೫೩	೯	೨೧೭
	ಒಟ್ಟು	೫೧೭೪	೧೧೭೬	೨೫೮೫	೧೦೫	೯೦೪೦

ಜಿಲ್ಲಾವಾರು ಈ ಅಂಕಿ ಅಂಶಗಳು ಕಾವೇರಿ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ

ಮಾತ್ರ ಎರಡೂ ರಾಜ್ಯಗಳಲ್ಲಿ ಎಂದರೆ ತಮಿಳುನಾಡು-ಕರ್ನಾಟಕ ಬರುವಂಥವು. ಈ ಅಂಶವನ್ನು ನೀವು ಗಮನದಲ್ಲಿ ಇಟ್ಟುಕೊಳ್ಳಬೇಕು. ಸಮಗ್ರವಾಗಿ ಎಂದರೆ ಕರ್ನಾಟಕ-ತಮಿಳುನಾಡು ಪೂರಾ ಅಲ್ಲ.

ಇದರಲ್ಲಿ ಮುಖ್ಯವಾದ ವಿಚಾರ ಎಂದರೆ ತಮಿಳುನಾಡಿನಲ್ಲಿ ಕಾವೇರಿಯನ್ನು ಬಿಟ್ಟರೆ ಬೇರೆ ಸಣ್ಣಪುಟ್ಟ ನದಿಗಳೇ ಇರುವುದರಿಂದ ಇಡೀ ತಂಜಾವೂರು ಜಿಲ್ಲೆ ಕಾಲುವೆಗಳಿಂದಲೇ ತುಂಬಿಹೋಗಿದೆ. ಒಂದೇ ಜಿಲ್ಲೆಯಲ್ಲಿ ಎಂದರೆ ತಂಜಾವೂರು ಜಿಲ್ಲೆಯಲ್ಲಿ ಮೂರೂವರೆ ಸಾವಿರ ಕಾಲುವೆಗಳು ಕೈಚಾಚಿ ಕಾವೇರಿಯ ಬೆರಳುಗಳಾಗಿ ಹೋಗಿವೆ. ಸರಿಸುಮಾರು ಸಹಸ್ರ ವರುಷಗಳಿಂದಲೂ ಅದಕ್ಕಿಂತ ಹಿಂದಿನಿಂದಲೂ ಸಹ ಈ ನದಿಯ ಉಪಯೋಗವನ್ನು ತಮಿಳುನಾಡು ಪಡೆದು ಕೊಳ್ಳುತ್ತ ಇರುವುದರಿಂದ ಇಡೀ ಜಿಲ್ಲೆಯನ್ನು ಕಾಲುವೆಗಳನ್ನಾಗಿ ತೋಡಿಬಿಟ್ಟಿದ್ದಾರೆ. ತಮಿಳರು ಪ್ರಾಚೀನ ಎಂದು ಹೇಳುವುದು ಇದನ್ನೇ. ಹೇಳುವುದು ಮಾತ್ರ ಅಲ್ಲ, ಆಧಾರಗಳೂ ಇದಕ್ಕೆ ಸಿಗುತ್ತವೆ.

ನಮ್ಮಲ್ಲಿ ಹರಿಯುವ ಕಾವೇರಿ ಮಂಡ್ಯ-ಮೈಸೂರು ಎರಡನ್ನು ಸೇರಿಸಿಕೊಂಡರೂ ಸಾವಿರ ಸಂಖ್ಯೆ ಆಗುತ್ತದೆ ಅಷ್ಟೇ.

ನದಿ ಇದ್ದರೂ ಕೆರೆಕಟ್ಟೆಗಳ ಬಾವಿ ಇತ್ಯಾದಿಗಳ ಸಂಖ್ಯೆ, ಕಾವೇರಿ ಜಲಾನಯನ ಪ್ರದೇಶದಲ್ಲಿ, ಹೆಚ್ಚು ಕಡಮೆ ನಾಲ್ಕು ಸಾವಿರ ಆಗುತ್ತದೆ. ಅದೇ ಕರ್ನಾಟಕದಲ್ಲಿ ಸಾವಿರದ ಐನೂರು ಮಾತ್ರ. ಕೊಯಮತ್ತೂರು ಜಿಲ್ಲೆ ಒಂದರಲ್ಲಿಯೇ ಸಾವಿರ ಬಾವಿಗಳನ್ನು ತೋಡಿ, ಅದರ ನೀರಿನಿಂದ ವ್ಯವಸಾಯ ಮಾಡುತ್ತ ಇದ್ದಾರೆ. ಇದು ಪ್ರಶಂಸಾರ್ಹವಾದ ಸಂಗತಿಯೇ ಸರಿ.

ಕಾವೇರಿ ನದಿಯ ನೀರಿನ ಬಗ್ಗೆ ಎರಡೂ ರಾಜ್ಯಗಳಲ್ಲಿ ದೊರಕುವ ಅಥವಾ ಸಂಗ್ರಹವಾಗುವ ನೀರಿನ ಪ್ರಮಾಣ ಯಾವ ರೀತಿ ಇದೆ ಈಗ ಪರಿಶೀಲಿಸೋಣ.

ಒಟ್ಟು ಕಾವೇರಿ ಕಣಿವೆ ಪ್ರದೇಶಗಳಲ್ಲಿ ನೀರು ಸಂಗ್ರಹವಾಗುವ ನೀರು ೭೮೦ ಟಿ.ಎಂ.ಸಿ. ಇವುಗಳನ್ನು ಈಗ ವಿಂಗಡಿಸೋಣವೆ?

ಕರ್ನಾಟಕ :	೪೨೫ ಟಿ.ಎಂ.ಸಿ. ಶೇಕಡಾ ೫೩.೮
ತಮಿಳುನಾಡು :	೨೫೨ ಟಿ.ಎಂ.ಸಿ. ಶೇಕಡಾ ೩೧.೯
ಕೇರಳ :	೧೧೩. ಟಿ.ಎಂ.ಸಿ. ಶೇಕಡಾ ೧೪.೩

ಕಾವೇರಿ ನದಿಯಲ್ಲಿನ ನೀರಿನ ಸಂಗ್ರಹಣೆ ಕರ್ನಾಟಕದಲ್ಲಿಯೇ ಜಾಸ್ತಿ.

ಈಗ ನಿಮಗೆ ಕಾವೇರಿ ಜಲಾನಯನ ಪ್ರದೇಶದ ವಿಸ್ತೀರ್ಣ ತಿಳಿಸೋಣವೇ?

ಕರ್ನಾಟಕ :	೩೪,೨೭೩ ಚದುರ ಕಿಲೋಮೀಟರುಗಳು
ತಮಿಳುನಾಡು :	೪೪,೦೧೬ ಚದುರ ಕಿಲೋಮೀಟರುಗಳು
ಕೇರಳ :	೨,೮೬೬ ಚದುರ ಕಿಲೋಮೀಟರುಗಳು
ಒಟ್ಟು :	೮೧,೧೫೫ ಚದುರ ಕಿಲೋಮೀಟರುಗಳು

ಇವುಗಳ ವಿಂಗಡಣೆ : ನಮಗಿಂತ ತಮಿಳುನಾಡು ಜಾಸ್ತಿ ಹೊಂದಿದೆ. ಹಾಗಿದ್ದೂ ಕರ್ನಾಟಕ ನಮಗೆ ಅನ್ಯಾಯ ಮಾಡುತ್ತ ಇದೆ ಎಂದು ಅದು ಹೇಳುತ್ತ ಇದೆ.

ಕರ್ನಾಟಕ :	೪೨.೨
ತಮಿಳುನಾಡು :	೫೪.೩
ಕೇರಳ :	೩.೫

೮೦೨ ಕಿಲೋಮೀಟರುಗಳು ಹರಿಯುವ ಕಾವೇರಿ ತನ್ನ ತವರಿನಲ್ಲಿ ಎಂದರೆ ಕೊಡಗಿನಲ್ಲಿ ಕೇವಲ ೮೦ ಕಿಲೋಮೀಟರ್ ಮಾತ್ರ ಹರಿಯುತ್ತದೆ.

'ಕರ್ನಾಟಕ ನೀರು ಹಿಡಿದಿಟ್ಟುಕೊಳ್ಳುತ್ತ ಇದೆ. ನೀರು ಬಿಡುತ್ತ ಇಲ್ಲ, ನಮ್ಮ ಬೆಳೆಗಳು ಕುರುವೈ, ಸಾಂಬಾ-ಒಣಗಿ ಹಾಳಾಗುತ್ತ ಇದೆ'- ಎನ್ನುವ ಒಂದು ಪ್ಲೇಟನ್ನು ತಮಿಳುನಾಡು ಸದಾ ಹಾಕಿಕೊಂಡೇ ಇರುತ್ತದೆ; ಮಗುಚಿಕೊಂಡೇ ಇರುತ್ತದೆ. ಒಂದೇ ರಾಗ. ಒಂದೇ ಪಲ್ಲವಿ. ವಾತಾಪಿ ಗಣಪತಿಂ ಭಜೇ.

೧೯೨೪ರ ಒಪ್ಪಂದ ಆದ ಮೇಲೆ, ಎಂದರೆ ನಮ್ಮ ನಾಡು ಸ್ವಾತಂತ್ರ್ಯ ಗಳಿಸಿದ ಮೇಲೆ, ಈ ಎರಡೂ ರಾಜ್ಯಗಳ ಯೋಜನೆಗಳು- Project – ಯಾವ ರೀತಿ ಸಾಗಿವೆ, ಅವುಗಳ ಕೆಲಸ ಹೇಗೆ ಮುಗಿದಿವೆ, ಒಂದು ಪಟ್ಟಿ ಕೊಡೋಣ. ಕರ್ನಾಟಕ ತಮಿಳುನಾಡಿಗೆ ಅನ್ಯಾಯ ಮಾಡಿಲ್ಲ, ಮಾಡುತ್ತ ಇಲ್ಲ, ಎನ್ನುವ ವಾಸ್ತವಾಂಶ ಎಲ್ಲರಿಗೂ ತಿಳಿಯಲಿ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಕರ್ನಾಟಕ ಮತ್ತು ತಮಿಳುನಾಡು – ಈ ಎರಡೂ ರಾಜ್ಯಗಳಲ್ಲಿಯೂ ಭಾರೀ ನೀರಾವರಿ ಮತ್ತು ಮಧ್ಯಮ ನೀರಾವರಿ ಪ್ರಾಜೆಕ್ಟ್‌ಗಳ ವಿವರಗಳು ಹೀಗಿವೆ:

ಕ್ರಮಸಂಖ್ಯೆ	ಪ್ರಾಜೆಕ್ಟ್ ವಿವರ	ನದಿ ಹಾಗೂ ಉಪನದಿ	ಕೆಲಸದ ವಿವರ	ಸ್ಟೋರೇಜ್ ಒಟ್ಟು	ಸಾಮರ್ಥ್ಯ (M.M.)
೧	೨	೩	೪	೫	೬
ಕರ್ನಾಟಕ					
೧.	ಉಡುತೊರೆ	ಉಡುತೊರೆಹಳ್ಳ	ಕೆಲಸ ನಡೆಯುತ್ತ ಇದೆ	೧೮.೯೭	೧೫.೧೫
೨.	ಬೈರಮಂಗಲ	ಸ್ವರ್ಣಮುಖಿ	ಮುಗಿದಿದೆ	೨೨.೧೪	೨೧.೯೫
೩.	ಅರ್ಕಾವತಿ	ಅರ್ಕಾವತಿ	ಕೆಲಸ ನಡೆಯುತ್ತ ಇದೆ	೪೪.೯೪	೪೦.೪೯
೪.	ಮಂಚನ ಬೆಲೆ	ಅರ್ಕಾವತಿ	ಕೆಲಸ ನಡೆಯುತ್ತ ಇದೆ	೩೪.೬೦	೩೦.೦೪
೫.	ಇಗ್ಗಲೂರು ಬ್ಯಾರೇಜ್	ಶಿಂಷಾ	ಕೆಲಸ ನಡೆಯುತ್ತ ಇದೆ	೫.೧೫	೩.೦೩
೬.	ಕಣ್ವ	ಕಣ್ವ	ಮುಗಿದಿದೆ	೨೨.೮೮	೨೨.೭೭
೭.	ಮಂಗಳ	ಮಂಗಳ	ಮುಗಿದಿದೆ	೮.೨೧	೬.೮೦
೮.	ಮಾರ್ಕೋನಹಳ್ಳಿ	ಶಿಂಷಾ	ಮುಗಿದಿದೆ	೬೭.೯೬	೬೪.೦೦
೯.	ಗುಂಡಲ್	ಗುಂಡಲ್	ಮುಗಿದಿದೆ	೨೭.೪೪	೨೩.೨೨
೧೦.	ಹೆಬ್ಬಳ್ಳ	ಹೆಬ್ಬಳ್ಳ	ಮುಗಿದಿದೆ	೧೧.೯೮	೧೦.೭೯
೧೧.	ಚಿಕ್ಕಹೊಳೆ	ಚಿಕ್ಕಹೊಳೆ	ಮುಗಿದಿದೆ	೧೦.೬೪	೧೦.೫೩

೧	೨	೩	೪	೫	೬
೧೨.	ಸುವರ್ಣಾವತಿ	ಸುವರ್ಣಾವತಿ	ಮುಗಿದಿದೆ	೩೫.೬೫	೩೫.೬೦
೧೩.	ನಲ್ಲೂರು	ಗುಂಡಲ್	ಮುಗಿದಿದೆ	೬.೫೪	೫.೮೯
೧೪.	ನುಗು	ನುಗು	ಮುಗಿದಿದೆ	೧೫೪.೦೦	೧೩೮.೫೫
೧೫.	ತಾರಕ	ತಾರಕ	ಮುಗಿದಿದೆ	೧೧೧.೫೭	೯೦.೫೫
೧೬.	ಕಬಿನಿ	ಕಬಿನಿ	ಕೆಲಸ ನಡೆಯುತ್ತ ಇದೆ	೫೫೨.೭೪	೪೫೦.೦೬
೧೭.	ಕೃಷ್ಣರಾಜ ಸಾಗರ	ಕಾವೇರಿ	ಮುಗಿದಿದೆ	೧೪೦೦.೩೫	೧೨೭೫.೬೯
೧೮.	ಹೇಮಾವತಿ	ಹೇಮಾವತಿ	ಕೆಲಸ ನಡೆಯುತ್ತ ಇದೆ	೧೦೫೨.೬೨	೧೦೧೨.೬೦
೧೯.	ವೋಟೆ ಹೊಳೆ	ವೋಟೆ ಹೊಳೆ	ಕೆಲಸ ನಡೆಯುತ್ತ ಇದೆ	೪೨.೭೬	೩೮.೬೮
೨೦.	ಯಗಚಿ	ಯಗಚಿ	ಕೆಲಸ ನಡೆಯುತ್ತ ಇದೆ	೧೦೧.೯೭	೯೨.೫೭
೨೧.	ಹಾರಂಗಿ	ಹಾರಂಗಿ	ಕೆಲಸ ನಡೆಯುತ್ತ ಇದೆ	೨೪೦.೬೯	೨೨೮.೬೦
೨೨.	ಚಿಕ್ಕ ಹೊಳೆ	ಚಿಕ್ಕ ಹೊಳೆ	ಕೆಲಸ ನಡೆಯುತ್ತ ಇದೆ	೫.೧೦	೪.೭೨
ತಮಿಳುನಾಡು					
೧.	ಅಪ್ಪರ್ ಕಾವೇರಿ	ಅಪ್ಪರ್ ಕಾವೇರಿ	ಮುಗಿದಿದೆ	೨೨೬೫.೦೦	–
೨.	ಪೊನ್ನಣಿಯಾರ್	ಪೊನ್ನಣಿಯಾರ್	ಮುಗಿದಿದೆ	೩.೪೦	–

೧	೨	೩	೪	೫	೬
೩.	ಪರಪ್ಪಲಾರ್	ಪರಪ್ಪಲಾರ್	ಮುಗಿದಿದೆ	೫.೬೦	–
೪.	ವಟ್ಟಮಲ್ಲೈಕ್ಕಾರಿ ಓಡೈ	ವಟ್ಟಮಲ್ಲೈಕಾರಿ ಓಡೈ	ಮುಗಿದಿದೆ	೭.೫೯	–
೫.	ಅಪ್ಪರ್ (ಈರೋಡು ಜಿಲ್ಲೆ)	ಅಪ್ಪರ್	ಮುಗಿದಿದೆ	೧೬.೩೧	೧೪.೯೨
೬.	ವರಧಾಮ ನದಿ	ವರಧಾಮನದಿ	ಮುಗಿದಿದೆ	೩.೦೬	–
೭.	ಪಾಲಾರ್	ಪಾಲಾರ್	ಮುಗಿದಿದೆ	–	೪೩.೧೯
೮.	ಅಮರಾವತಿ	ಅಮರಾವತಿ	ಮುಗಿದಿದೆ	೧೧೪.೬೧	೧೧೨.೩೭
೯.	ಕೊಡಗನಾರ್	ಅಮರಾವತಿ	ಮುಗಿದಿದೆ	–	೧೨.೩೦
೧೦	ವರಟ್ಟು ಪಳ್ಳಂ	ವರಟ್ಟು ಪಳ್ಳಂ	ಮುಗಿದಿದೆ	೩.೯೪	–
೧೧.	ಗುಂಡೇರಿ ಪಳ್ಳಂ	ಗುಂಡೇರಿ ಪಳ್ಳಂ	ಮುಗಿದಿದೆ	೩.೦೬	–
೧೨.	ಲೋವರ್ ಭವಾನಿ	ಭವಾನಿ	ಮುಗಿದಿದೆ	೯೨೮.೮೦	೯೦೭.೮೦
೧೩.	ಪಿಲ್ಲೂರ್	ಭವಾನಿ	ಮುಗಿದಿದೆ	೪೪.೯೦	೩೪.೯೭
೧೪.	ಶಿರುವಾಣಿ	ನೊಯ್ಯಲ್	ಮುಗಿದಿದೆ	೧೮.೪೧	–

೧	೨	೩	೪	೫	೬
೧೫.	ಒರತ್ತು ಪಾಳ್ಯಂ	ನೊಯ್ಯಲ್	ಕೆಲಸ ನಡೆಯುತ್ತ ಇದೆ	–	೧೭.೪೫
೧೬.	ಅಮಂಚಿ ಮತ್ತು ಎಮರಾಲ್ಡ್	ಭವಾನಿ	ಮುಗಿದಿದೆ	೧೫೬.೨೦	೧೫೨.೮೦
೧೭.	ಎಮರಾಲ್ಡ್ ಮತ್ತು ಮೂಕ್ಕುರುತ್ತಿ	ಭವಾನಿ	ಮುಗಿದಿದೆ	೫೦.೯೮	೫೦.೯೭
೧೮.	ಪೈಕಾರ	ಭವಾನಿ	ಮುಗಿದಿದೆ	೫೬.೮೦	೫೫.೨೨
೧೯.	ತೋಪ್ಪಿಯಾರ್	ತೋಪ್ಪಿಯಾರ್	ಮುಗಿದಿದೆ	೮.೪೫೬	–
೨೦.	ನಾಗವತಿ	ನಾಗವತಿ	ಮುಗಿದಿದೆ	೪.೬೫	–
೨೧.	ಕೇಸರಿಗುಳ್ಳ ಹಳ್ಳ	ಕೇಸರಿಗುಳ್ಳ ಹಳ್ಳ	ಮುಗಿದಿದೆ	೩.೮೦	–
೨೨.	ಚಿಣ್ಣಾರ್	ಚಿಣ್ಣಾರ್	ಮುಗಿದಿದೆ	೧೪.೧೫	೧೩.೯೮
೨೩.	ಸಿದ್ದಮಲ್ಲಿ ಓಡೈ	ಸಿದ್ದಮಲ್ಲಿ ಓಡೈ	ಮುಗಿದಿದೆ	೬.೪೨೨	–
೨೪.	ಲೋವರ್ ಮೆಟ್ಟೂರು ಹೈಡ್ರೋ ಎಲೆಕ್ಟ್ರಿಕ್ ಪ್ರಾಜಕ್ಟ್ i ii iii iv	ಕಾವೇರಿ	–	–	–
೨೫.	ಮೆಟ್ಟೂರು	ಕಾವೇರಿ	ಮುಗಿದಿದೆ	೨೭೦೮.೭೯	೨೬೪೬.೭೭

ಈ ಪಟ್ಟಿಯ ಮೇಲೆ ನೀವು ಕಣ್ಣಾಡಿಸಿದಾಗ ಎದ್ದುಕಾಣುವ ಹಾಗೆ ಒಂದು ಅಂಶ ಸ್ಪಷ್ಟವಾಗಿ ಗೋಚರವಾಗುತ್ತದೆ. ಕರ್ನಾಟಕ ಕೃಷ್ಣರಾಜಸಾಗರ ನಿರ್ಮಾಣ ಆದ ಮೇಲೆ ಕಾವೇರಿ ಮತ್ತು ಆದರ ಉಪನದಿಗಳ ಅನೇಕ ನೀರಾವರಿ ಕೆಲಸಗಳನ್ನು ಕೈಗೆತ್ತಿಕೊಂಡು ಈ ಕೆಲಸಗಳನ್ನು ಮುಂದುವರಿಸಿದೆ. ಈ ಕೆಲಸಗಳಲ್ಲಿ ಕೆಲವು ಮುಗಿದಿವೆ; ಕೆಲವು ಮುಗಿದಿಲ್ಲ. ಕ್ರಮಸಂಖ್ಯೆಯ ಮೇಲೆ ಕಣ್ಣಾಡಿಸಿ. ೨೨ರಲ್ಲಿ ೧೦ ಅಪೂರ್ಣ. ಎಂದರೆ ಈಗಲೂ ಕೆಲಸ ನಡೆದುಕೊಂಡಿವೆ. ಚಿಕ್ಕದು ದೊಡ್ಡದು ಎಲ್ಲ ಸೇರಿ ೧೨ ಮಾತ್ರ ಪೂರ್ಣಗೊಂಡಿವೆ. ಆದರೆ ತಮಿಳುನಾಡಿನ ಪಟ್ಟಿಯನ್ನು ನೋಡಿ. ೨೫ರಲ್ಲಿ ೨೪ರ ಕೆಲಸವೂ ಮುಗಿದಿದೆ. ಎಂದರೆ ನೀರಾವರಿ ಕೆಲಸಗಳಲ್ಲಿ ತಮಿಳು ನಾಡು ಎಷ್ಟು ಜಾಗೃತವಾಗಿದೆ ಎನ್ನುವುದನ್ನು ಈ ಪಟ್ಟಿ ನಿಮಗೆ ಎತ್ತಿ ತೋರಿಸುತ್ತದೆ.

ಮತ್ತೊಂದು ಸ್ವಾರಸ್ಯ : ತಮಿಳುನಾಡಿನ ಪಟ್ಟಿಯಲ್ಲಿ ಕ್ರಮಸಂಖ್ಯೆ ೧೦ನ್ನು ನೋಡಿ. ಅದು ಒಂದು ಸಣ್ಣ ಯೋಜನೆ. ಅದರ ಸಾಮರ್ಥ್ಯ ೩.೯೪ ಸ್ಟೋರೇಜ್ ಮಾತ್ರ. ಹೆಸರು ವರಟ್ಟು ಪಳ್ಳಂ. ವರಟ್ಟು ಎಂದರೆ ತಮಿಳಿನಲ್ಲಿ ನೀರಿಲ್ಲದ ಎಂದು ಅರ್ಥ. ಆದರೆ ತಮಿಳರು ಈ ನೀರಿಲ್ಲದ ಹಳ್ಳವನ್ನೂ ಬಿಟ್ಟಿಲ್ಲ. ಇಂಥ ಸಾಹಸಗಳಿಗಾಗಿ ಅವರನ್ನು ನಾವು ಅಭಿನಂದಿಸಲೇಬೇಕು.

*****

೫. ನ್ಯಾಯಮಂಡಳಿಯ ಮಂದೆ ಕಾವೇರಿ

೧೯೨೪ರ ಕಥೆ ಮುಗಿದಿದೆ. ಇದು ಐವತ್ತು ವರುಷಗಳ ಒಂದು ಒಪ್ಪಂದವಷ್ಟೆ ೧೯೭೪ಕ್ಕೆ ಇದರ ಕಾಲಾವಧಿಯೂ ಆಗಿಹೋಗಿದೆ. ಈ ಒಪ್ಪಂದ ಎನ್ನುವುದು ಸತ್ತು ಸ್ಮಶಾನವನ್ನೂ ಸೇರಿಬಿಟ್ಟಿದೆ. ಈ ಒಪ್ಪಂದ ಆಗುವಾಗ ಬ್ರಿಟಿಷ್ ಸರಕಾರ ಇತ್ತು, ನಮ್ಮ ನಾಡು ದಾಸ್ಯ ಸಂಕೋಲೆಯೊಳಗೆ ಸೇರಿಹೋಗಿತ್ತು. ಹಾಗಾಗಿ ಈಗಿನ ಭಾಷಾವಾರು ಪ್ರಾಂತ್ಯಗಳು, ಶಾಸನ ಸಭೆಗಳು, ಪಾರ್ಲಿಮೆಂಟ್, ಸುಪ್ರೀಂ ಕೋರ್ಟ್, ಸಂವಿಧಾನ – ಹೀಗೆ ಯಾವುದೂ ಇರಲಿಲ್ಲ.

ಇನ್ನೂ ಒಂದು ವಿಶೇಷವೆಂದರೆ ಈ ಒಪ್ಪಂದದ ಕಾಲದಲ್ಲಿ ಕೇರಳ, ಕೊಡಗು, ಪಾಂಡಿಚೆರಿ– ಇಂಥ ಯಾವ ಪ್ರಾಂತ್ಯಗಳೂ ಸೇರಿರಲಿಲ್ಲ. ಕೇಂದ್ರ ಸರಕಾರವೇ ಇರಲಿಲ್ಲ. ಕಾವೇರಿಯ ಉಪನದಿಗಳು ಈ ಪ್ರಾಂತ್ಯಗಳಲ್ಲಿ ಪ್ರಾಂತ್ಯಗಳ ಸರಹದ್ದಿನಲ್ಲಿ ಉಗಮ ಆಗುತ್ತವಷ್ಟೆ ಆದುದರಿಂದ ಇವೆಲ್ಲವೂ ಸೇರಲೇಬೇಕು. ಸೇರಿದರೇ ಕಾವೇರಿಯ ಪೂರ್ಣ ಚಿತ್ರಣ ನಮಗೆ ಸಿಗುತ್ತದೆ.

ಹೀಗೆ ಎಂದೋ ಮುಗಿದುಹೋದ ಹಾಗೂ ಸ್ಮಶಾನ ಸೇರಿಕೊಂಡಿರುವ ಏಕಪಕ್ಷೀಯವಾದ ತಮಿಳುನಾಡಿಗೆ ಸಾಧಕವಾದ ಈ ಒಪ್ಪಂದವೇ ಈಗಲೂ ಮುಂದು ವರಿಯಬೇಕು ಎಂದೇ ಯಾವ ಮುಲಾಜೂ ಇಲ್ಲದೆ ಅದು ಹೇಳುತ್ತ ಇದೆ. ನಿಮಗೆ ಇದು ಆಶ್ಚರ್ಯದ ಸಂಗತಿಯಾಗಿದೆ ಅಲ್ಲವೆ?

ಸರಿ, ಈಗ ೧೯೨೪ರ ಒಪ್ಪಂದ ಹಳೆಯ ಕಥೆ ಆಗಿಬಿಟ್ಟಿತು. ೧೯೪೭ರ ಅನಂತರ ವಾದರೂ ಕಾವೇರಿಯ ವಿಚಾರದಲ್ಲಿ ನಮಗೆ ನ್ಯಾಯ ದೊರಕಿದೆಯೆ? ಈ ಬಗ್ಗೆ ಸ್ವಲ್ಪ ಪರಿಶೀಲಿಸೋಣ.

ಅಂತರರಾಜ್ಯ ಜಲಸಂಬಂಧದ ವಿಷಯ – ಭಾರತ ಸಂವಿಧಾನದ ೨೬೨ನೇ ಕಾಲಂ – ಸರ್ವೋಚ್ಚ ನ್ಯಾಯಾಲಯದ ವ್ಯಾಪ್ತಿಗೆ ಮೀರಿದ್ದು ಎಂದು ಹೇಳಿದೆ. ಇಂಥ ವಿವಾದಗಳನ್ನು ನ್ಯಾಯಮಂಡಳಿಗಳಿಗೇ ಒಪ್ಪಿಸಬೇಕು ಎಂದು ಸಹ ಅದು ಸ್ಪಷ್ಟವಾಗಿ ತಿಳಿಸಿದೆ.

೧೯೮೩ರಲ್ಲಿ ತಮಿಳುನಾಡಿನ ರೈತರು ಅಂತರರಾಜ್ಯ ಜಲವಿವಾದ ಕಾಯ್ದೆಯ ೩ನೆಯ ಪರಿಚ್ಛೇದದಲ್ಲಿ ಹೇಳಿರುವಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಕಾವೇರಿ ಜಲವಿವಾದದ ಇತ್ಯರ್ಥಕ್ಕೆ ನ್ಯಾಯಮಂಡಳಿ ರಚಿಸಬೇಕು ಎಂದು ಬೇಡಿಕೆಯನ್ನಿತ್ತರು. ಆಗ ಸುಪ್ರೀಂಕೋರ್ಟ್ ೧೯೯೦ರ ಮೇ ೪ರಂದು ನೀಡಿದ ತೀರ್ಪಿಗೆ ಅನುಗುಣವಾಗಿ, ಕೇಂದ್ರ ಸರಕಾರ ೧೯೯೦ ಜೂನ್ ಎರಡನೆಯ ತಾರೀಖು ಕಾವೇರಿ ನ್ಯಾಯಮಂಡಳಿಯನ್ನು ಹುಟ್ಟುಹಾಕಿತು.

ಮತ್ತೆ ತಮಿಳುನಾಡಿನಿಂದ ಅದೇ ವರ್ಷದಲ್ಲಿ ಇನ್ನೊಂದು ಅರ್ಜಿ. ಕಾವೇರಿ ಡೆಲ್ಟಾ ಒಣಗುತ್ತ ಇದೆ. ನಮ್ಮ ಬೆಳೆ ರಕ್ಷಿಸಲು ೨೦ ಟಿ.ಎಂ.ಸಿ. ನೀರು ನಮಗೆ ತುರ್ತು ಈಗಿಂದೀಗಲೇ ಬೇಕು.

ಇದಕ್ಕೆ ಕರ್ನಾಟಕದ ವಾದ ಹೀಗೆ:

ಅಂತರರಾಜ್ಯ ಜಲವಿವಾದದ ಕಾಯ್ದೆ ಪ್ರಕಾರ ನ್ಯಾಯಮಂಡಳಿಗೆ ತಾತ್ಕಾಲಿಕವಾಗಿ ಪರಿಹಾರ ನೀಡಲು ಸಾಧ್ಯವಿಲ್ಲ.

ಈಗ ತಮಿಳುನಾಡಿನೊಂದಿಗೆ ಪುದುಚೇರಿಯೂ ಸೇರಿಕೊಂಡಿತು. ಮತ್ತೆ ೧೯೯೧ರಲ್ಲಿ ರಿಟ್ ಅರ್ಜಿ. ಈ ವಿಶೇಷ ಅನುಮತಿ ರಿಟ್‌ಗಳ ಮೇಲೆ ದಿನಾಂಕ ೨೬.೪.೧೯೯೧ರಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ಆಧರಿಸಿ ಮತ್ತೆ ನ್ಯಾಯಮಂಡಳಿಯ ಮುಂದೆ ವಿಚಾರಣೆ.

ಇದರ ಫಲವಾಗಿ ೧೯೯೧ರ ಜೂನ್ ೨೧ರಂದು ಮಧ್ಯಂತರ ತೀರ್ಪು. ತೀರ್ಪಿನ ವಿವರ ಹೀಗಿದೆ :

೧. ಈ ವರ್ಷದ ಜೂನ್‌ನಿಂದ ಮೇ ವರೆಗೆ, ಮೆಟ್ಟೂರು ಜಲಾಶಯಕ್ಕೆ ೨೦೫ ಟಿ.ಎಂ.ಸಿ. ನೀರನ್ನು ಕರ್ನಾಟಕ ತನ್ನ ಜಲಾಶಯಗಳಿಂದ ಬಿಡಬೇಕು.

೨. ನಾಲ್ಕು ವಾರಗಳಲ್ಲಿ, ನಾಲ್ಕು ಕಂತುಗಳಲ್ಲಿ, ನೀರನ್ನು ಹರಿಸಬೇಕು.

೩. ...ಪಡಿಸಿದಂತೆ ಯಾವುದಾದರೂ ವಾರದಲ್ಲಿ ನೀರು ಬಿಡದೇ ಹೋದರೆ, ಮುಂದಿನ ವಾರ ಅದನ್ನು ಸೇರಿಸಿಕೊಳ್ಳಬೇಕು.

೪. ೧೧.೨ ಲಕ್ಷ ಎಕರೆಗಳಿಗಿಂತ ತನ್ನ ನೀರಾವರಿ ಪ್ರದೇಶವನ್ನು ಕರ್ನಾಟಕ ಹೆಚ್ಚಿಸಬಾರದು.

೫. ತಮಿಳುನಾಡು ಸರಕಾರ ಪುದುಚೇರಿಗೆ ೬ ಟಿ.ಎಂ.ಸಿ. ನೀರನ್ನು ಹರಿಸಬೇಕು.

೬. ನ್ಯಾಯಮಂಡಳಿಯ ಅಂತಿಮ ತೀರ್ಪಿನವರೆಗೆ ಈ ಆದೇಶ ಜಾರಿಯಲ್ಲಿ ಇರುತ್ತದೆ.

೧೧.೨ ಲಕ್ಷ ಎಕರೆಗೆ ಮೇಲೆ ಕರ್ನಾಟಕ ನೀರಾವರಿ ಮಾಡಬಾರದು ಎಂದು ನ್ಯಾಯ ಮಂಡಲಿ ತೀರ್ಪು ನೀಡುವಾಗ, ತಮಿಳುನಾಡು ಮಾಡಬಹುದೆ? ಆ ಬಗ್ಗೆ ಚಕಾರವಿಲ್ಲ.

೨೦೫ ಟಿ.ಎಂ.ಸಿ. ನೀರು ಬಿಡುವುದೇನೋ ಸರಿಯೇ. ಆ ವರ್ಷ ಮಳೆಯೇ ಆಗದಿದ್ದರೆ ಏನು ಮಾಡಬೇಕು? ಜಲಾಶಯಗಳಲ್ಲಿ ನೀರೇ ಇರದಿದ್ದರೆ ಹೇಗೆ ಬಿಡಬೇಕು? ಇದಕ್ಕೆ ಯಾರಿಂದಲೂ ಉತ್ತರ ಇಲ್ಲ.

೨೦೦೨ರಲ್ಲಿ ಹೀಗೆಯೇ ಆಯಿತು. ಆ ವರ್ಷ ಸುತರಾಂ ಮಳೆ ಇಲ್ಲ. ಕರ್ನಾಟಕದ ಜಲಾಶಯಗಳು ಎಲ್ಲವೂ ಬರಿದು.

ಮತ್ತೆ ತಮಿಳುನಾಡು ಸುಪ್ರೀಂಕೋರ್ಟಿನ ಮೆಟ್ಟಿಲು ಹತ್ತುವಿಕೆ. ಕರ್ನಾಟಕದಲ್ಲಿ ಭಾರೀ ಗಲಾಟೆ. ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ ಭಾರೀ ರಸ್ತೆ ಪ್ರತಿಭಟನೆ; ಬಂದ್. ಒಬ್ಬ ರೈತ ಬೇರೆ ನೀರಿಗೆ ಹಾರಿ ಆತ್ಮಾಹುತಿ ಮಾಡಿಕೊಳ್ಳುವಿಕೆ.

ಈಗ ಎರಡು ಮೂರು ಸಲ ಸುಪ್ರೀಂಕೋರ್ಟಿನಲ್ಲಿ ವಾದ ಪ್ರತಿವಾದಗಳು ನಡೆದು, ಕೊನೆಗೆ ತೀರ್ಪು. ಏನೆಂದು?

ಕಾವೇರಿ ಪ್ರಾಧಿಕಾರದ ಸಭೆ ನಡೆಯಬೇಕಾದ ಮೂರು ದಿನಗಳವರೆಗೆ ಪ್ರತಿ ದಿನ ಕರ್ನಾಟಕ ತಮಿಳುನಾಡಿಗೆ ೪೫೦೦ ಕ್ಯುಸೆಕ್ಸ್ ನೀರು, ಆನಂತರ ಮೇ ಕೊನೆಯವರೆಗೆ ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶದಂತೆ ನೀರನ್ನು ಬಿಡುಗಡೆ ಮಾಡಬೇಕು.

ಹಾಗೆಯೇ ಸುಪ್ರೀಂಕೋರ್ಟ್ ಮಹತ್ವದ ಒಂದು ಆಣತಿಯನ್ನು ನೀಡಿತು. ಅದು ಹೀಗಿದೆ :

(೧) ನಿಗದಿತ ದಿನವೇ ಪ್ರಾಧಿಕಾರದ ಸಭೆ ನಡೆಯಬೇಕು. (೨) ಸಭೆಯನ್ನು ಗಂಭೀರವಾಗಿ ಪರಿಗಣಿಸಬೇಕು. (೩) ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು– ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ–ತಪ್ಪದೆ ಈ ಸಭೆಯಲ್ಲಿ ಭಾಗವಹಿಸಬೇಕು (೪) ಪ್ರಧಾನಿಯ ತೀರ್ಮಾನವೇ ಅಂತಿಮ.

'ನನಗೆ ಪ್ರಾಧಿಕಾರದ ಮೇಲೆ ನಂಬಿಕೆ ಇಲ್ಲ, ಹಾಗೆ ಹೀಗೆ' ಎಂದು ಆಗಾಗ್ಗೆ ತಮಿಳುನಾಡು ಮುಖ್ಯಮಂತ್ರಿ ಹೇಳುತ್ತಿದ್ದ ಮಾತುಗಳಿಗೆ ಕಡಿವಾಣ.

ಈಗ ಮತ್ತೆ ಕೆಲವು ವರುಷಗಳ ಹಿಂದಕ್ಕೇ ಹೋಗೋಣವೇ ?

೧೯೯೨ರಲ್ಲಿ ತಮಿಳುನಾಡು ಸುಪ್ರೀಂಕೋರ್ಟಿಗೆ ಒಂದು ಮನವಿಯನ್ನು ಸಲ್ಲಿಸಿತು. ಕರ್ಣಾಟಕದ ಹೊಸ ಯೋಜನೆಗಳಿಗೆ ತಡೆಹಾಕಬೇಕು ಎಂದು. ನ್ಯಾಯಾಲಯ ಅದನ್ನು ತಿರಸ್ಕರಿಸಿಬಿಟ್ಟಿತು. ಮತ್ತೆ ೧೯೭೪ರಲ್ಲಿ ಕರ್ಣಾಟಕ ಕೃಷ್ಣಾ ನದಿಯ ಜಲವಿವಾದದ ಸಲುವಾಗಿ, ನ್ಯಾಯಮಂಡಲಿಯ ತೀರ್ಪಿನ ವಿರುದ್ಧವಾಗಿ ಒಂದು ಮನವಿಯನ್ನು ಸಲ್ಲಿಸಿತು. ಆಗ ಸುಪ್ರೀಂಕೋರ್ಟ್, ಇದು ತನ್ನ ಅಧಿಕಾರ ವ್ಯಾಪ್ತಿಗೆ ಮೀರಿದ ವಿಷಯ, ಈ ಮನವಿಯನ್ನು ಹಿಂದಕ್ಕೆ ಪಡೆಯಬೇಕು ಎಂದು ಸೂಚನೆ ನೀಡಿತು.

ಹೀಗೆ ಏಕೆ ?

೧೯೯೦-೯೧ರಲ್ಲಿ ಎಲ್ಲವೂ ತಿರುಗು ಮುರುಗು; ಬದಲಾವಣೆ. ಏನಾದರೂ ಸಂವಿಧಾನದಲ್ಲಿಯೇ ಮಾರ್ಪಾಡು ಆಗಿದೆಯೋ ಎಂದರೆ ಹಾಗೇನೂ ಆಗಿಲ್ಲ. ೧೯೫೬ರ ಅಂತರರಾಜ್ಯ ಜಲವಿವಾದ ಕಾಯ್ದೆಗೆ ಏನಾದರೂ ತಿದ್ದುಪಡಿ ಆಗಿದೆಯೋ ಎಂದರೆ ಅಂಥದ್ದೇನೂ ಆಗಿಲ್ಲ.

ನ್ಯಾಯಾಲಯಗಳ ತೀರ್ಪುಗಳಲ್ಲಿಯೇ ಹೀಗೆ ವ್ಯತ್ಯಾಸಗಳು. ಇದು ನಿಗೂಢ. ಇದು ರಹಸ್ಯ. ಇದನ್ನು ಪ್ರಶ್ನಿಸುವ ಹಕ್ಕು ನಮಗಿಲ್ಲ.

ಅಂತರರಾಜ್ಯ ಜಲವಿವಾದಗಳು ತಲೆತಿನ್ನುವ ಪ್ರಶ್ನೆಗಳು. ತಮಿಳುನಾಡು ಕರ್ಣಾಟಕ ಆಂಧ್ರ ರಾಜ್ಯಗಳಿಗೆ ಮಾತ್ರ ಈ ತಲೆನೋವು ಎನ್ನುವ ಹಾಗಿಲ್ಲ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎರಡು ಮೂರು ರಾಜ್ಯಗಳಲ್ಲಿ ಹರಿಯುವ ನೀರಿಗೆ ಎಷ್ಟೋ ಅಣೆಕಟ್ಟುಗಳು ಆಗಿವೆ. ಜಲವಿವಾದ ಬರಬಾರದು ಎಂದು ಅನೇಕ ರಾಜ್ಯಗಳಲ್ಲಿ ಮಂಡಲಿಗಳ ರಚನೆಯೂ ಆಗಿದೆ.

ಭಾಕ್ರಾ ನಾಂಗಲ್ ಅಣೆಕಟ್ಟು, ಪಂಜಾಬ್- ಹರಿಯಾಣ- ರಾಜಸ್ಥಾನ ಈ ಮೂರು ರಾಜ್ಯಗಳ ವ್ಯಾಪ್ತಿಯಲ್ಲಿ ಬರುತ್ತದೆ. ಬಿಯಾಸ್ ನದಿಯ ವಿಚಾರವೂ ಹಾಗೆಯೇ. ಚೆಂಬಲಿನದೂ ಅದೇ ಕತೆ. ಬಚಾವತ್ ತೀರ್ಪನ್ನು ಆಂಧ್ರ ಪ್ರದೇಶ ಉಲ್ಲಂಘಿಸುತ್ತ ಇದೆ, ಗೋದಾವರಿ, ಕೃಷ್ಣಾ ನೀರಿನ ಪಾಲನ್ನು ದುರುಪಯೋಗ ಪಡಿಸಿಕೊಳ್ಳುತ್ತ ಇದೆ ಎಂದು ನಮ್ಮಲ್ಲಿ ಕೂಗೆದ್ದಿತು. ಈ ಹಿಂದೆ ಗೋವಾದ ಅಂಚಿನ ಮಹದಾಯಿಯ ಪ್ರಶ್ನೆಯೂ ಧುತ್ತನೆ ಇಣುಕಿತು.

ಸಾರಾಂಶ : ನೀರು ಕಡಮೆಯಾದಾಗ ಜಲಾಶಯಗಳು ಬತ್ತಿದಾಗ ಹಾಗೆ ಹೀಗೆ ಆಚೆ ಈಚೆ ರಾಜ್ಯ ರಾಜ್ಯಗಳಲ್ಲಿ ಒಪ್ಪಂದಗಳ ಉಲ್ಲಂಘನೆ ಆಗುತ್ತಲೇ ಬಂದಿದೆ. ಮಳೆ ಸಮೃದ್ಧಿಯಾಗಿ ಸುರಿದರೆ ಪ್ರಶ್ನೆಗಳೇ ಇರುವುದಿಲ್ಲ. ಎಲ್ಲವೂ ತುಂಬಿಕೊಳ್ಳುತ್ತವೆ. ಆದರೆ

ಮಳೆಯನ್ನು ಸಮೃದ್ಧಿಯಾಗಿ ಸುರಿಸುವವರು ಯಾರು? ಯಾವ ನ್ಯಾಯಮಂಡಳಿ? ಯಾವ ಸುಪ್ರೀಂಕೋರ್ಟ್?

★ ★ ★

ಇನ್ನೊಂದು ಬಹಳ ಮುಖ್ಯವಾದ ವಿಚಾರವೂ ಇದೆ. ಯಾವುದೇ ಒಂದು ನದಿಯ ಅಥವಾ ನೀರಿನ ಸಲುವಾಗಿ ಯಾವ ರಾಜ್ಯವೇ ಆಗಲಿ ಒಂದು ಒಪ್ಪಂದ ಅಥವಾ ಒಂದು ತೀರ್ಪು ಎಂದು ಆದಮೇಲೆ, ಯಾವ ಕಾರಣದಿಂದಲೂ ಚಾಚೂ ತಪ್ಪದೆ ಅಂಥ ತೀರ್ಪನ್ನು ರಾಜ್ಯಗಳು ಪಾಲಿಸಬೇಕು. ಈ ಪಾಲನೆಯ ವಿಚಾರದಲ್ಲಿ ಆಂಧ್ರ, ಕರ್ನಾಟಕ, ತಮಿಳುನಾಡು ಹೀಗೆ ಭೇದ ಭಾವವಿಲ್ಲ. ಉಲ್ಲಂಘಿಸಿದರೆ ಏನು ಕಠಿಣ ದಂಡನೆಯೋ ಅಥವಾ ಆ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೋ ಹಾಗೆ, ಅಂಥ ರಾಜ್ಯಗಳ ಮೇಲೆ ಬಲವಾದ ಹಿಡಿತ ಕೇಂದ್ರ ಸರಕಾರದ ಅಧಿಕಾರದಲ್ಲಿ ಇರಲೇಬೇಕು.

ಈಗ ಅನೇಕ ರಾಜ್ಯಗಳು ಈ ಒಪ್ಪಂದ ಅಂಥವು ಇಂಥವುಗಳನ್ನು ಉಲ್ಲಂಘಿಸುತ್ತ ಇವೆ. ಇದಕ್ಕೆಲ್ಲ ರಾಜಕೀಯ ಇಚ್ಛಾಶಕ್ತಿಗಳೇ ಕಾರಣ. ಯಾವ ರಾಜ್ಯದ ಬೆಂಬಲ ಕೇಂದ್ರ ಸರಕಾರದ ಅಸ್ತಿತ್ವಕ್ಕೆ ಅಥವಾ ಉಳಿವಿಗೆ ಕಾರಣವಾಗುತ್ತದೆಯೋ ಅಂಥ ರಾಜ್ಯದ ದಾಕ್ಷಿಣ್ಯ ಕೇಂದ್ರಕ್ಕೆ ಬೇಕಾಗುತ್ತದೆ. ಹೆಸರು ಹೇಳಿ ಆ ರಾಜ್ಯ ಈ ರಾಜ್ಯ ಎನ್ನುವ ಹಾಗಿಲ್ಲ. ನದೀನೀರಿನ ಬಳಕೆ ಇತ್ಯಾದಿಗಳ ಬಗ್ಗೆ, ನೀರಿನ ಕೊರತೆ ಏರ್ಪಟ್ಟಾಗ ಘರ್ಷಣೆಗಳು ನಡೆದುಕೊಂಡೇ ಇರುತ್ತವೆ. ಉಲ್ಲಂಘನೆ ಆಗುತ್ತಲೇ ಇದೆ. ಇದು ಖಂಡಿತ ಆಗಬಾರದು. ಕಾನೂನು ಬಿಗಿಯಾಗಿ ಭದ್ರವಾಗಿ ಇರಬೇಕು. ಆ ರೀತಿ ಕಾನೂನು ಆಗಬೇಕು.

ಈಗ ಹಾಗೆ ಆಗುತ್ತ ಇಲ್ಲ. ಇದಕ್ಕೆ ಮುಖ್ಯ ಕಾರಣ ರಾಜಕೀಯದ ಹುತ್ತಗಳೇ; ಚದುರಂಗದಾಟಗಳೇ.

ನದಿಯಲ್ಲಿ ಸಮೃದ್ಧಿಯಾಗಿ ನೀರು ತುಂಬಿಕೊಂಡಾಗ ಪ್ರಶ್ನೆಗಳೇ ಇರುವುದಿಲ್ಲವಷ್ಟೆ. ಮಳೆ ಇಲ್ಲದೆ ಜಲಾಶಯಗಳು ಬತ್ತಿದಾಗ ಮಾತ್ರ ಪ್ರಶ್ನೆಗಳು ಭೂತ ಆಗಿಬಿಡುತ್ತವೆ. ಆಗ ಕಾನೂನು ಸಹ ದೊಡ್ಡ ಭೂತ ಆಗಬೇಕು; ಭೂತರಾಜ ಆಗಬೇಕು.

ನೀರಿನ ಕೊರತೆ ಉಂಟಾದಾಗ, ಎರಡು ಅಥವಾ ಮೂರು ರಾಜ್ಯಗಳಲ್ಲಿ ನೀರಿನ ಕೊರತೆ ಎಷ್ಟಿದೆ, ರೈತ ಎಷ್ಟು ಬೆಳೆ ಬೆಳೆದಿದ್ದಾನೆ, ಕೊರತೆಯನ್ನು ಬೆಳೆ ಹಾಳಾಗದ ಹಾಗೆ ಮೂರೂ ರಾಜ್ಯಗಳು ಹೇಗೆ ಹಂಚಿಕೊಳ್ಳಬೇಕು– ಹೀಗೆ ಕೇಂದ್ರ ಸರಕಾರ ಚಾಟಿ ಭದ್ರವಾಗಿ ಹಿಡಿದರೆ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಬಹುದು.

ನಮ್ಮಲ್ಲಿ ಸಮರ್ಥ ಇಂಜಿನಿಯರುಗಳು ಇದ್ದಾರೆ, ಮೇಧಾವಿಗಳಾದ ನೀರಾವರಿ ತಜ್ಞರು ಇದ್ದಾರೆ. ಕೃಷಿ ಪರಿಣಿತರು, ನೀರಿನ ಸಮಸ್ಯೆಗಳನ್ನು ಆಳವಾಗಿ ಅಭ್ಯಾಸ

ಮಾಡಿರುವವರು ಇದ್ದೇ ಇದ್ದಾರೆ. ಅನುಭವೀ ರೈತರೂ ಅನೇಕ ಸಮಸ್ಯೆಗಳನ್ನು ಬಗೆಹರಿಸಬಲ್ಲರು. ರಾಜಕಾರಣ ಮೂಗುತೂರಿಸದೇ ಇದ್ದರೆ ಖಂಡಿತ ನಾನಾ ಸಮಸ್ಯೆಗಳು ಬಗೆಹರಿಯುತ್ತವೆ.

ಸಮೃದ್ಧಿ ಒಂದು ಕಾಲ; ಕೊರತೆ ಒಂದು ಕಾಲ. ಇವು ಆಗಾಗ್ಗೆ ಉರುಟಣೆ ಆಡುತ್ತಲೇ ಇರುತ್ತವೆ. ಜಾಣ್ಮೆವಹಿಸಿದರೆ ಇದಮಿತ್ಥಂ ಬಿಗಿಹಿಡಿದರೆ ಅನಾಹುತಗಳನ್ನು ತಪ್ಪಿಸಲು ಸಾಧ್ಯವಿದೆ.

ಸುಖ ಬಂದಾಗ ಹೇಗೆ ಅನುಭವಿಸುತ್ತೇವೆಯೋ ಹಾಗೆಯೇ ಕಷ್ಟ ಬಂದಾಗಲೂ ಸಂಬಂಧಪಟ್ಟವರು ಸಮಸಮ ಹಂಚಿಕೊಳ್ಳಬೇಕು. ನನಗೆ ಕಷ್ಟವೇ ಬೇಡ ನಿನಗೇ ಇರಲಿ ಎಂದರೆ ಹೇಗೆ ?

ನಮ್ಮ ಹಿರಿಯರು ಹೇಳಿದ ಮಾತು ಸಾರ್ಥಕವಾದ ಮಾತು. ಅದು ಅರ್ಥವುಳ್ಳ ಮಾತೂ ಹೌದು.

''ಬಂದದ್ದುಣ್ಣೋ ಮಹಾರಾಯ.''

ಬಚಾವತ್ ತೀರ್ಪನ್ನು ಆಂಧ್ರ ಉಲ್ಲಂಘಿಸಿ ಹಲವು ಯೋಜನೆಗಳನ್ನು ಈಗ ಕೈಗೆತ್ತಿಕೊಂಡಿರುವ ವಿಚಾರ. ಕರ್ಣಾಟಕದಲ್ಲಿ ಈಗ ಅದು ಪ್ರಮುಖ ಸುದ್ದಿಯಾಗಿದೆ.

ಬಚಾವತ್ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿದ್ದವರು. ಅವರ ತೀರ್ಪು ಅಂತಿಮ. ಎರಡೂ ರಾಜ್ಯಗಳೂ ಈ ತೀರ್ಪನ್ನು ಒಪ್ಪಿಕೊಂಡಿವೆ; ಒಪ್ಪಿಕೊಳ್ಳಲೇಬೇಕು.

ಈಗ ಆಂಧ್ರ ಈ ಒಪ್ಪಂದವನ್ನು ಉಲ್ಲಂಘಿಸಿ ಹೊಸ ಯೋಜನೆಯನ್ನು ಪ್ರಾರಂಭಿಸಿದ್ದು ಹೇಗೆ ? ಏಕೆ ?

ಇದಕ್ಕೆ ಉತ್ತರ ಸುಲಭ. ಕೇಂದ್ರದಲ್ಲಿ ಹಿಂದಿನ ಸರಕಾರ ಇದ್ದಾಗ ಒಂದು ಪಕ್ಷದ ಎಂ.ಪಿ.ಗಳು ಅಧಿಕ ಸಂಖ್ಯೆಯಲ್ಲಿ ಇದ್ದರು. ಇವರ ಬೆಂಬಲ ಇಲ್ಲದೆ ಕೇಂದ್ರ ಏನೂ ಮಾಡುವ ಹಾಗಿರಲಿಲ್ಲ. ಹೆಚ್ಚು ಕಡಮೆ ಆದರೆ, ಆ ಪಕ್ಷ ತನ್ನ ಬೆಂಬಲವನ್ನು ಹಿಂದೆಗೆದುಕೊಂಡರೆ, ಕೇಂದ್ರ ಸರಕಾರ ಪಲ್ಟಿ. ಮೂಗು ಮುರಿಯುವಂಥ ಏಟು.

ಸರಿ, ಆ ಪಕ್ಷದ ಮುಖ್ಯಮಂತ್ರಿ ತನ್ನ ಬಲವನ್ನು, ಎಂ.ಪಿ.ಗಳ ಸಂಖ್ಯೆಯನ್ನು, ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಂಡರು. ಅದರ ಫಲಶ್ರುತಿಯೇ ಬಚಾವತ್ ತೀರ್ಪಿನ ಉಲ್ಲಂಘನೆ; ಹೊಸ ಯೋಜನೆಗಳ ಅನುಷ್ಠಾನ.

ಸರಿ, ಮುಂದಿನ ಚುನಾವಣೆಯಲ್ಲಿ ಆ ಪಕ್ಷ ನೆಲಕಚ್ಚಿಬಿಟ್ಟಿತು. ಈ ಪಕ್ಷವನ್ನು

ನಂಬಿಕೊಂಡಿದ್ದ ಕೇಂದ್ರವೂ ತಲೆಕೆಳಗು. ಇನ್ನೊಂದು ಪಕ್ಷ ಈಗ ಅಧಿಕಾರಕ್ಕೆ ಬಂದು ಬಿಟ್ಟಿತಲ್ಲ. ಅದು ಹಳೆಯ ಪಕ್ಷ ಮಾಡಿದ್ದ ಉಲ್ಲಂಘನೆ ಎನ್ನುವ ಹಾದಿಯಲ್ಲಿ ತಾನೂ ಹೆಜ್ಜೆ ಹಾಕತೊಡಗಿತು.

ಅದಕ್ಕೇ ನಾವು ಹಾಗೆ ಹೇಳಿದ್ದು. ಕೇಂದ್ರದಲ್ಲಿ, ರಾಜ್ಯಗಳಲ್ಲಿ ಯಾವುದೇ ಪಕ್ಷಗಳು ಅಧಿಕಾರಕ್ಕೆ ಬರಲಿ, ಅಡ್ಡಿಯಿಲ್ಲ. ಆದರೆ ಸುಪ್ರೀಂಕೋರ್ಟೋ ನ್ಯಾಯ ಮಂಡಳಿಯೋ ಎಂಥದಾದರೂ ತೀರ್ಪು ನೀಡಿದ ಮೇಲೆ ಅದು ಖಾಯಂ ಆಗಿಬಿಡಬೇಕು. ಸಂವಿಧಾನದಲ್ಲಿಯೇ ಅಂಥ ತಿದ್ದುಪಡಿ ಆಗಬೇಕು. ಹಾಗಾದಲ್ಲಿ ಮಾತ್ರ ರಾಜ್ಯ, ಕೇಂದ್ರದಲ್ಲಿ ಯಾವುದೇ ಪಕ್ಷಗಳು ಅಧಿಕಾರಕ್ಕೆ ಬಂದರೂ ನಿಯಮಗಳನ್ನು ಉಲ್ಲಂಘಿಸಲು ಆಗುವುದಿಲ್ಲ. ಉಲ್ಲಂಘನೆ ಎನ್ನುವ ಕಪಿ ಬಾಲಕ್ಕೆ ಬೆಂಕಿಹಚ್ಚಿಕೊಂಡು ಲಂಕಾದಹನ ಮಾಡುವುದು ತಪ್ಪುತ್ತದೆ.

*****

೬. ಪಡುವಣಕ್ಕೆ ಹರಿಯುವ ನದಿಗಳು

ಕೃಷ್ಣಾ ಅದರ ಉಪನದಿಗಳು, ಕಾವೇರಿ ಮತ್ತು ಅದರ ಉಪನದಿಗಳು- ಇವಿಷ್ಟನ್ನು ಒಂದುಗೂಡಿಸಿದರೆ ಕರ್ಣಾಟಕ ಆಗಿಬಿಡುತ್ತದೆ ಅಲ್ಲವೆ? ತುಂಬಿಕೊಳ್ಳುತ್ತದೆ ಅಲ್ಲವೆ?

ಊಹೂಂ, ತುಂಬಿಕೊಳ್ಳುವುದಿಲ್ಲ. ಹಾಗೂ ಕರ್ಣಾಟಕದ ಒಂದಿಷ್ಟು ಭಾಗ ಉಳಿದುಕೊಳ್ಳುತ್ತದೆ. ಪಶ್ಚಿಮಕ್ಕೆ ಪಶ್ಚಿಮ ಘಟ್ಟಶ್ರೇಣಿ ಇದೆಯಷ್ಟೆ. ಈ ತುದಿಯಿಂದ ಆ ತುದಿಯವರೆಗೂ ಈ ಸುಂದರ ಶ್ರೇಣಿ ವ್ಯಾಪಿಸಿಕೊಂಡಿದೆ.

ಈ ಸಾಲುಬೆಟ್ಟಗಳಾಚೆ ಉದ್ದದ ಬೆಣ್ಣೆ ಮಸಾಲಾ ದೋಸೆಗಳಂತೆ ಎರಡು ಜಿಲ್ಲೆಗಳು ಇವೆ. ಅವೇ ದಕ್ಷಿ ಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳು. ದಕ್ಷಿಣಕನ್ನಡ ಈಗ ಎರಡಾಗಿದೆ, ಇರಲಿ.

ಘಟ್ಟಗಳಾಚೆಯೂ ಕೆಲವು ನದಿಗಳು ಉತ್ಪನ್ನ ಆಗುತ್ತವೆ. ಇವು ಅರಬ್ಬೀ ಸಮುದ್ರವನ್ನು ಪ್ರಣಯರಾಜ ಮಾಡಿಕೊಂಡಿವೆ. ಚಿನ್ನಾ ಎಂದು ಹೋಗಿ ಅಪ್ಪಿಕೊಳ್ಳುತ್ತವೆ.

ಈ ಕಿರುನದಿಗಳು ಇಪ್ಪತ್ತು ಇವೆಯಂತೆ. ಕೇರಳದಲ್ಲಿ ನಾಲ್ಕು. ಇವು ಎಲ್ಲವೂ ಪಶ್ಚಿಮ ಸಮುದ್ರ ಹೋಗಿ ಸೇರುವಂಥವು. ಆ ಕಡೆ ಇವು ಘಟ್ಟದಾಚೆಯೇ ಹುಟ್ಟಿ ಸಮುದ್ರ ರಾಜನೊಂದಿಗೆ ಐಕ್ಯವಾಗಿ ಬಿಡುತ್ತವೆ. ಇವುಗಳು ಹರಿಯುವ ದೂರವೂ ಕಡಮೆ. ಇವುಗಳು ಉಗಮದಿಂದ ಸಂಗಮದವರೆಗೆ ನೂರೈವತ್ತು ಇನ್ನೂರು ಇನ್ನೂರೈವತ್ತು ಕಿಲೋ ಮೀಟರುಗಳು ಇಷ್ಟೇ ಇದೆ.

ಆದರೆ ಇವು ಸೊಬಗು ಸೂರೆಗೊಳ್ಳುವಂಥ ನದಿಗಳು. ಪಶ್ಚಿಮ ಘಟ್ಟ ಸಾಲೇ ಒಂದು ಮಾಯಾಜಾಲದ ಜಾಲರಿ ಇದ್ದ ಹಾಗೆ. ಸೊಬಗಿನ ತಾಣ. ತಾಯಿಯ ಮಗಳು ಇನ್ನು ಹೇಗಿರುತ್ತಾಳೆ ? ತಾಯಿಯ ಹಾಗೆಯೇ ಚೆಲುವೆಯಾಗಿದ್ದಾಳೆ. ತಾಯಿಗಿಂತಲೂ ಸುಂದರಿಯಾಗಿದ್ದಾಳೆ.

ಕಾಳಿ, ಭೀಮಾ, ಶರಾವತಿ, ಅಘನಾಶಿನಿ, ವಾರಾಹಿ, ನೇತ್ರಾವತಿ- ಇವು ಪಡುವಣಕ್ಕೆ ಸಾಗುವ ಮುಖ್ಯವಾದ ನದಿಗಳು, ನದಿಗಳಿಗೆ ಬರೇ ಸುಂದರವಾದ ಹೆಣ್ಣುಗಳ ಹೆಸರೇ ಯಾಕೆ? ನಮ್ಮ ನಡುವೆಯೇ ಮಾರಮ್ಮನೂ ಇಲ್ಲವೆ? ದುರ್ಗಿಯ ಗುಡಿ ಇಲ್ಲವೆ? ಹಾಗೆಯೇ ರೌದ್ರಾವತಾರದ ಕಾಳಿಯ ಹೆಸರೂ ಇರಲಿ ಎಂದು ನಮ್ಮ ಹಿರಿಯರು

ಒಂದು ನದಿಗೆ ಕಾಳಿ ಎಂದು ಹೆಸರಿಟ್ಟರೋ? ಇಲ್ಲವೇ ಈ ನದಿಯೇ ಕಾಳಿಯ ಹಾಗೆ ಚಂಡಿಯಾಗಿದೆಯೋ? ಹೇಳುವ ಮಾತು ಕೇಳುವುದಿಲ್ಲವೋ? ಬೆಳ್ನೊರೆಗೆ ಬದಲು ಕಪ್ಪು ನೊರೆಗಳನ್ನು ಕಾರುತ್ತದೋ?

ಹಿಂದೆ ಒಂದಾನೊಂದು ಕಾಲದಲ್ಲಿ ಒಬ್ಬ ಋಷಿ ಇದ್ದನಂತೆ. ಅವನ ಹೆಸರು ಮರೆತುಹೋಗಿದೆ. ಅವನ ಹೆಂಡತಿ ಮಹಾಕಾಳಿ. ಯಾವುದನ್ನು ಹೇಳಿದರೂ ತದ್ವಿರುದ್ಧ ನಡೆದುಕೊಳ್ಳುವುದು ಅವಳ ರೂಢಿ. ಅಪ್ಪನ ತಿಥಿ ಬಂದಾಗ ಆ ಋಷಿ ''ತಿಥಿ ಅಪ್ಪನಿಗೆ ಮಾಡಬೇಕು'' ಎಂದರೆ ಆಕೆ ''ಕೂಡದು'' ಎಂದು ಹಟ ಮಾಡುತ್ತ ಇದ್ದಳಂತೆ.

ಋಷಿ ಈಗ ಒಂದು ಉಪಾಯವನ್ನು ಕಂಡುಹಿಡಿದ. ''ನಾಡಿದ್ದು ಅಪ್ಪನ ತಿಥಿ. ನಾನು ಈ ವರ್ಷ ಮಾಡುವುದಿಲ್ಲ'' ಎನ್ನುತ್ತ ಇದ್ದ. ಆಗ ಚಂಡಿ ''ಉಹೂಂ, ಮಾಡಲೇ ಬೇಕು'' ಎಂದು ಹಟಹಿಡಿಯುತ್ತ ಇದ್ದಳು.

ಇದೂ ಸಹ ಒಂದಾನೊಂದು ಕಾಲದಲ್ಲಿ ಎನ್ನುವ ಹಾಗೆ ಪುರಾತನ ಕಥೆಯೇ. ಆದರೆ ಈಗಿನ ಹುಡುಗಿಯರಲ್ಲಿ ಕೆಲವರು ಈ ಚಂಡಿಯ ಹಾಗೆಯೇ ಮೊಂಡು ಸ್ವಭಾವದವರು ಆದ್ದರಿಂದ, ಇಂದಿಗೂ ಈ ಹಳೆಯ ಕಥೆ ಚಲಾವಣೆಗೆ ತಕ್ಕುದಾಗಿದೆ.

ಈ ಕಾಳಿಯೂ ಅದೇ ಥರವೋ?

ಶರಾವತಿಯ ಮನಮೋಹಕ ದೃಶ್ಯ, ಆ ಎತ್ತರ ಎತ್ತರದಿಂದ ಜಿಗಿತ, ನೀರು ಸೀಳು ಸೀಳಾಗಿ ಎಳೆಎಳೆಯಾಗಿ ಮಂಜಿನಂತೆ ವ್ಯಾಪಿಸಿಕೊಳ್ಳುವ ನೀರ ಹೊಗೆ – ಇಂಥ ಸೊಬಗನ್ನು ಭಾರತದಲ್ಲಿ ಯಾವ ನದಿ ಮಾಡಿದೆ?

ಗಂಗೆಯೆ? ಕಾವೇರಿಯೆ? ಕೃಷ್ಣೆಯೆ?

ಉಹೂ, ಪಡುವಣಕ್ಕೆ ಸಾಗುವ ಈ ಶರಾವತಿಯೇ ಹಾಗೆ ಮಾಡಿದೆ. ನಯಾಗರಾ ಬಿಟ್ಟರೆ ಶರಾವತಿಯ ಹಾಗೆ ಸೊಬಗಿನ ತಾಣ ಮತ್ತೊಂದಿಲ್ಲ ಎಂದು ಬಲ್ಲವರು ಹೇಳುತ್ತಾರೆ. ನಾವು ನಯಾಗರಾ ನೋಡಿಲ್ಲ.

ನದಿಗಳು ಧುಮುಕಿ ಜಲಪಾತವಾಗುವುದು ಸರ್ವೇಸಾಮಾನ್ಯ. ಭಾರತದಲ್ಲಿ ಎಷ್ಟೋ ಜಲಪಾತಗಳು ಇವೆ. ಜಗತ್ತಿನಲ್ಲಿಯೂ ಹೇರಳವಾಗಿವೆ. ಆದರೆ ಶರಾವತಿಯ ಸೊಬಗು ಭಾರತದಲ್ಲಿ ಬೇರೆ ಯಾವ ಕಡೆ ಇದೆ? ಅದಕ್ಕೇ ನಮ್ಮ ಕವಿ ಜೋಗದ ಸಿರಿ ಬೆಳಕಿನಲ್ಲಿ ಎಂದು ಹಾಡಿದ್ದಾನೆ.

ಅದು ಸರಿಯೇ. ವಿದ್ಯುತ್ತು ಉತ್ಪನ್ನ ಇತ್ಯಾದಿಗಳನ್ನು ನಾಡಿಗೆ ಈ ನದಿಗಳಿಂದ ನಾವು ಪಡೆದುಕೊಳ್ಳುತ್ತ ಇದ್ದೇವೆ, ನಿಜ. ಆದರೆ ಮುಖ್ಯ ಕಸುಬಾದ ನೀರಾವರಿ ಅಥವಾ ವ್ಯವಸಾಯ ಆಗುವುದಿಲ್ಲ. ಕಾರಣ ಪರ್ವತಪ್ರದೇಶಗಳಿಂದ ಈ ನದಿಗಳು ಉಗಮವಾಗಿ, ಕಡಮೆ ದೂರ ಸಾಗಿ, ಕಡಲನ್ನು ಅಪ್ಪಿಬಿಡುತ್ತವಷ್ಟೆ. ನೀರಾವರಿಗೆ ಭೂಮಿಗಳು ಸಮತಟ್ಟು ಆಗಿರಬೇಕು. ವ್ಯಾಪ್ತಿಯೂ ಸಾಕಷ್ಟು ಇರಬೇಕು. ಈ ಕಿರುನದಿಗಳು ಹಾಯುವ

ಪ್ರದೇಶಗಳಿಂದ ಹಾಗೆ ಮಾಡಲು ಆಗುವುದಿಲ್ಲ. ಆದರೂ ವಾರಾಹಿ ಮುಂತಾದ ನದಿಗಳಿಂದ ಅಲ್ಪಸ್ವಲ್ಪ ನೀರಾವರಿ ಕೆಲಸಗಳು ಆಗುತ್ತ ಇವೆ.

ಆದರೆ ಈ ಎಲ್ಲ ಕಿರುನದಿಗಳಿಂದ ೨೦೦೦ ಟಿ.ಎಂ.ಸಿ. ನೀರು ಲಭ್ಯ ಇದೆಯಂತೆ. ಇದೇನು ಸೋಜಿಗ ಎನ್ನುತ್ತೀರೋ? ಕೃಷ್ಣಾ-ಕಾವೇರಿ ಎರಡೂ ನದಿಗಳನ್ನು ಸೇರಿಸಿದರೂ ಒಟ್ಟು ೧೩೬೫ ಟಿ.ಎಂ.ಸಿ. ನೀರು ಆಗುತ್ತದೆ. ಹಾಗಿರುವಾಗ ಈ ಪುಡಿ ಪುಡಿ ಪುಟಾಣಿ ಕಿರುನದಿಗಳಿಂದ ಇಷ್ಟು ನೀರಿನ ಲಭ್ಯತೆಯೇ? ಇಷ್ಟು ಸಾಮರ್ಥ್ಯ ಈ ನದಿಗಳಿಂದ ಸಾಧ್ಯವೆ? ಮೂಗಿನ ಮೇಲೆ ಬೆರಳಿಡುತ್ತೀರೋ?

ಉಹೂಂ, ಈ ಮಾತು ಸತ್ಯ. ಇದರ ರಹಸ್ಯ ಹೀಗಿದೆ. ಕೃಷ್ಣೆ ಕಾವೇರಿಯರ ಎಲ್ಲ ನೀರನ್ನೂ ನಾವು ಬಳಸಿಕೊಳ್ಳುತ್ತ ಇದ್ದೇವೆ. ಜಗಳಾಡಿಕೊಂಡು, ಕದ್ದೂ ಸಹ. ನಮ್ಮ ನಾಲೆಗಳಿಗೆ ಈ ನೀರನ್ನು ಹರಿಸುತ್ತ ಇದ್ದೇವೆ; ವ್ಯವಸಾಯ ಮಾಡುತ್ತ ಇದ್ದೇವೆ. ಆದರೆ ಈ ೨೦೦೦ ಟಿ.ಎಂ.ಸಿ. ನೀರು ಬಳಕೆಯಿಲ್ಲದೆ, ಬಳಸಲು ಸಾಧ್ಯವಾಗದೆ, ಸಮುದ್ರ ಹೋಗಿ ಸೇರಿಬಿಡುತ್ತ ಇದೆ. ಇದೇ ಗುಟ್ಟು; ರಹಸ್ಯ.

ಇದಕ್ಕೂ ಕೆಲವು ನೀರಾವರಿ ತಜ್ಞರು, ಇಂಜಿನಿಯರುಗಳು- ಈ ನೀರನ್ನು ನಾವು ಸಂಪೂರ್ಣವಾಗಿ ಬಳಸಿಕೊಳ್ಳಬಹುದು ಎನ್ನುತ್ತಾರೆ.

ಅದು ಹೇಗೆ ?

ಈ ನದಿಗಳನ್ನು ಪೂರ್ವಕ್ಕೆ ತಿರುಗಿಸಿಬಿಡುವುದು. ನಿಮ್ಮ ಅಕ್ಕಂದಿರ ಕೂಡ ಹೋಗಿ ಸೇರಿಕೊಳ್ಳಿರಮ್ಮಾ ಎನ್ನುವುದು. ಕೃಷ್ಣೆ ಕಾವೇರಿಯ ಉಪನದಿಗಳಿಗೆ ಈ ಪಡುವಣ ಕಿರುನದಿಗಳ ನೀರನ್ನು ಹರಿಯಬಿಡುವುದು.

ಆಗ ಜಗಳ ಆಡುವ, ಕಳ್ಳತನ ಮಾಡುವ ರಾಜ್ಯಗಳ ಕಾಟ ತಪ್ಪುತ್ತದೆ. ತಮಿಳು ನಾಡಿಗೆ ೨೦೫ ಟಿ.ಎಂ.ಸಿ. ಯಾಕೆ? ೪೦೫ ಟಿ.ಎಂ.ಸಿ. ನೀರನ್ನೂ ಧಾರಾಳವಾಗಿ ಬಿಡಬಹುದು. ಗೋದಾವರಿ ಕೃಷ್ಣೆಯಿಂದ ತಮಗೆ ಬೇಕಾದಷ್ಟು ನೀರನ್ನು ಆಂಧ್ರ ತೆಗೆದುಕೊಳ್ಳಲಿ. ಎಡುತ್ತುಕ್ಕೋಂಗೋಯ್ಯಾ, ಏಮಂಡೀ ಚೆಪ್ಪಂಡೀ ಎನ್ನಬಹುದು. ಅವರು ತೆಗೆದುಕೊಳ್ಳುವಷ್ಟು ನೀರನ್ನೂ ಪಡುವಣದ ಈ ಕಿರುನದಿಗಳು ತುಂಬುತ್ತವಲ್ಲ; ಸರಬರಾಜು ಮಾಡುತ್ತವಲ್ಲ.

ಗಂಗೆಯನ್ನೂ ಕಾವೇರಿಯನ್ನೂ ಜೋಡಿಸುವ, ಜೋಡಿಸುವ ನೆಪದಲ್ಲಿ ಇಡೀ ಭರತಖಂಡದ ಪರಿಸರವನ್ನೆ ನಾಶಮಾಡುವ, ೨೫೦೦ ಕಿಲೋಮೀಟರ್‌ಗಳ ಉದ್ದದ, ಅದೆಷ್ಟೋ ಕೋಟಿ ಕೋಟಿ ರೂಪಾಯಿಗಳನ್ನು ನುಂಗಿನೊಣೆಯುವ, ಗಂಗಾ-ಕಾವೇರಿ ಜೋಡಣೆಗಿಂತ, ಇಂಥ ಸಮೀಪದ ನದಿಗಳ ಜೋಡಣೆಗಳಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಲ್ಲ.

ಆದರೆ ತೊಡಕುಗಳು ಇಲ್ಲಿಯೂ ಹೇರಳವಾಗಿವೆ; ಸಹ್ಯಾದ್ರಿಯಂತೆಯೇ ಇವೆ. ಪಶ್ಚಿಮಘಟ್ಟ ನಮ್ಮ ಜೀವಜಾಲದ ಜೀವವೈವಿಧ್ಯದ ತವರು. ಪಶ್ಚಿಮಘಟ್ಟಗಳಲ್ಲಿ ಇರುವಷ್ಟು ಜೀವವೈವಿಧ್ಯ ಭಾರತದಲ್ಲಿ ಮತ್ತೆಲ್ಲಿಯೂ ಸಿಗುವುದಿಲ್ಲ ಎಂದು ಪರಿಣತರು ಹೇಳುತ್ತಾರೆ, ಆದ್ದರಿಂದ ಇಂಥ ಸುಂದರ ಪರಿಸರವನ್ನು ನಾಶಮಾಡಲು ಯಾರಿಗೂ ಹಕ್ಕಿಲ್ಲ, ಅವಕಾಶ ನೀಡಬಾರದು– ಎನ್ನುವ ತೀವ್ರ ಪ್ರತಿಭಟನೆ.

ಅದೂ ನಿಜವೇ. ವಿಜ್ಞಾನ ಎಷ್ಟೆಲ್ಲ ಮುಂದುವರಿದಿದ್ದರೂ ಒಂದು ಬಣ್ಣಬಣ್ಣದ ಪುಟ್ಟಹಕ್ಕಿಯನ್ನು ನಿರ್ಮಿಸಲು ಅಥವಾ ಸೃಷ್ಟಿಸಲು ಸಾಧ್ಯವಿಲ್ಲದ ನಮಗೆ ನಿಸರ್ಗ ನಮಗೆ ನೀಡಿರುವ ಸಂಪತ್ತನ್ನು ನಾಶ ಮಾಡಲು ಹಕ್ಕು ಎಲ್ಲಿರುತ್ತದೆ ? ಎದೆಗಾರಿಕೆ ಯಾರಿಗೆ ಇದೆ ? ಆದರೆ ಈ ಸುಂದರ ಪರಿಸರಕ್ಕೆ ಹಾನಿಯಾಗದೆಯೇ ಇಂಥ ಕಾರ್ಯ ಸಾಧಿಸಬಹುದು ಎನ್ನುವುದು ಕೆಲವು ತಜ್ಞರ ಹೇಳಿಕೆ. ಅದು ಹೇಗೆ?

ಕರಾವಳಿಯ ಘಟ್ಟಗಳ ಮೇಲೆ ತಕ್ಕ ತಕ್ಕ ಜಾಗಗಳಲ್ಲಿ ಸಣ್ಣ ಸಣ್ಣ ಕೆರೆಗಳ ಉಹೂ ಟ್ಯಾಂಕುಗಳ ನಿರ್ಮಾಣ ಮಾಡಬೇಕು. ಬೆಟ್ಟಸಾಲುಗಳ ಈಚೆ ಬದಿಯಲ್ಲಿಯೂ ಹಾಗೆಯೇ ಮಾಡಬೇಕು. ಅಂಥ ಟ್ಯಾಂಕುಗಳನ್ನೇ.

ಇವುಗಳು ಎರಡಕ್ಕೂ ಭೂಮಿಯ ಒಳಗೇಯೇ ಭಾರೀ ಭಾರೀ ಕೊಳವೆಗಳನ್ನು ಜೋಡಿಸಬೇಕು. ಹೀಗೆ ಇವುಗಳನ್ನು ಜೋಡಿಸುವಾಗ ಪರಿಸರ ನಾಶವಾಗುವುದಿಲ್ಲವೆ? ಕಾಡನ್ನು ಬೋಳು ಮಾಡಬೇಕಾಗುತ್ತದೆ ಅಲ್ಲವೆ? ಬೋಳು ಮಾಡದೆ ಜೋಡಿಸುವುದು ಹೇಗೆ ಸಾಧ್ಯ? ಇರಲಿ.

ಆಮೇಲೆ ಮುಂದಿನ ಕಾರ್ಯಾಚರಣೆ. ವಿದ್ಯುತ್ತನ್ನು ಕೊಳವೆಗಳಲ್ಲಿ ಹರಿಯ ಬಿಡುವುದು. ಇಂಥ ವಿದ್ಯುತ್ತಿನ ವೇಗದ ಚಾಲನೆಯಿಂದ, ದೊಡ್ಡ ದೊಡ್ಡ ಕೊಳವೆಗಳ ಮೂಲಕ ನೀರು ಪ್ರವಾಹ ಪ್ರವಾಹವಾಗಿ ಹಾಯ್ದು ಪೂರ್ವನದಿಗಳ ನೀರಿನೊಂದಿಗೆ ಸೇರಿಬಿಡುತ್ತದೆ. ಪೂರ್ವನದಿಗಳು ತುಂಬಿಕೊಳ್ಳುತ್ತವೆ. ಆಗ ಕ್ರಾಂತಿಯೋ ಕ್ರಾಂತಿ. ನಕ್ಸಲ್ ಕ್ರಾಂತಿ ಅಲ್ಲ, ಹಸಿರು ಕ್ರಾಂತಿ.

ಹೀಗೆಲ್ಲ ಆಗುವುದಾದರೆ ಸಂತೋಷ. ಆಗಲಿ, ಯಾರು ಬೇಡವೆನ್ನುತ್ತಾರೆ? ಈ ನದಿಗಳ ಹೆಚ್ಚು ನೀರಿನಿಂದ ಹುಲುಸಾಗಿ ಬೆಳೆಯುವ ಭತ್ತ–ಅಕ್ಕಿಗಳಿಂದ ತಯಾರಿಸುವ ಬಿಸಿಬಿಸಿ ತೆಳುದೋಸೆಗಳನ್ನೂ ಕಾಯಿದೋಸೆಗಳನ್ನೂ ನಾವೂ ಹಿಗ್ಗಿನಿಂದ ತಿನ್ನೋಣ.

ಹಾಗಿಲ್ಲವೋ ಕಾಡನ್ನು ಬೋಳು ಮಾಡುತ್ತೇವೆ, ನಿಸರ್ಗ ಸಂಪತ್ತಿಗೆ ಕೊಡಲಿ ಚಾಚುತ್ತೇವೆ ಎಂದರೆ ನಮ್ಮದೂ ತೀವ್ರ ಆಕ್ಷೇಪಣೆ ಇದೆ; ಪ್ರತಿಭಟನೆ ಇದೆ. ಪರಿಸರವಾದಿಗಳೊಂದಿಗೆ ನಾವೂ ಸೇರಿಕೊಂಡು ಮರಗಳನ್ನು ಅಪ್ಪಿಕೊಳ್ಳುತ್ತೇವೆ; ಅಪ್ಪಿಕೊಳ್ಳಬೇಕಾಗುತ್ತದೆ.

*****

೭. ನೀರು ಬೇಕೆ ? ನೀರು ಹಿಡಿದಿಟ್ಟುಕೊಳ್ಳಿ

ನಮ್ಮ ಗೃಹಿಣಿಯರಿಗೆ ಅದರಲ್ಲೂ ಬೆಂಗಳೂರಿನಲ್ಲಿ ವಾಸಿಸುತ್ತ ಇರುವವರಿಗೆ ಈ ಅನುಭವ ಚೆನ್ನಾಗಿದೆ. ಯಾರೂ ಹೇಳಿಕೊಡಬೇಕಾಗಿಯೇ ಇಲ್ಲ. ಬೆಂಗಳೂರಿನಲ್ಲಿ ಕುಡಿಯಲು ಎರಡು ದಿನಗಳಿಗೊಮ್ಮೆ ನೀರು ಬಿಡುತ್ತಾರಷ್ಟೆ.

ಆಗ ಮನೆಗೆ ಮನೆಯಲ್ಲಿ ವಾಸಿಸುತ್ತ ಇರುವವರ ಸಂಖ್ಯೆಗೆ ಅನುಗುಣವಾಗಿ, ಇಷ್ಟು ಪಾತ್ರೆಗಳಲ್ಲಿ ನೀರನ್ನು ಹಿಡಿದಿಟ್ಟುಕೊಂಡರೆ ಇಷ್ಟು ಜನರಿಗೆ ಸಾಕಾಗುತ್ತದೆ. ಇಂಥ ಲೆಕ್ಕಾಚಾರ. ಏನಾದರೂ ಕಾರಣಗಳಿಂದ ನಾಳೆ ನೀರನ್ನು ಬಿಡದೆ ಹೋದರೆ ಇರಲಿ ಎಂದು ಒಂದೆರಡು ಪಾತ್ರೆಗಳನ್ನು ಸಹ ಆಕೆ ಜಾಸ್ತಿಯಾಗಿಯೇ ಸಂಗ್ರಹ ಮಾಡಿಕೊಳ್ಳುತ್ತಾಳೆ. ಈ ಸಂಗ್ರಹಣೆಗೆ ಮೊದಲು ಆಕೆ ಶ್ರದ್ಧೆಯಿಂದ ಪಾತ್ರೆ ಪಗಡಿ ಎಲ್ಲವನ್ನೂ ತೊಳೆದು ಬೆಳಗಿ ಶುದ್ಧಮಾಡಿಕೊಂಡಿರುತ್ತಾಳೆ. ಶ್ರದ್ಧೆಯಿಂದ ಮಾಡುತ್ತಾಳೆ. ಸ್ವಲ್ಪವೂ ಬೇಸರ ಪಡುವುದಿಲ್ಲ. ಸೋಮಾರಿಯೂ ಆಗುವುದಿಲ್ಲ. ಇನ್ನು ಬಟ್ಟೆ ಒಗೆಯಲು ಇತರೇ ಬೇಡಿಕೆಗಳಿಗಾಗಿ ಮನೆಯ ಮೇಲೆ ಕರೀ ನೀಲಬಣ್ಣದ ಒಂದು ಟ್ಯಾಂಕ್ ಇದ್ದೇ ಇದೆ. ಬೋರ್ ನೀರು. ಇದು ದಿನಚರಿ.

ಈ ಲೆಕ್ಕಾಚಾರವನ್ನೇ ಇನ್ನುಮುಂದೆ ನಾವು ಕುಡಿಯುವ ನೀರಿಗಾಗಿ ಮಾತ್ರ ಅಲ್ಲ, ನೀರಾವರಿ ಮತ್ತು ನೀರಿನ ಆವಶ್ಯಕತೆಗಳಿಗಾಗಿಯೇ ಅಳವಡಿಸಿಕೊಳ್ಳಬೇಕಾಗಿದೆ.

ನೀರಿನ ಆವಶ್ಯಕತೆ ದಿನದಿಂದ ದಿನಕ್ಕೆ ಹೆಚ್ಚುತ್ತ ಇದೆ. ಕಾರಣ ಐವತ್ತು ವರುಷಗಳ ಹಿಂದೆ ಇದ್ದ ಪರಿಸ್ಥಿತಿ ಈಗ ಇಲ್ಲ. ಜನಸಂಖ್ಯೆ ಹೆಚ್ಚಿದೆ. ನೀರಾವರಿಯ ವ್ಯಾಪ್ತಿ ಹೆಚ್ಚಿದೆ. ಸಿಕ್ಕ ಸಿಕ್ಕಲ್ಲೆಲ್ಲ ಕೊಳವೆಬಾವಿಗಳನ್ನು ತೋಡಿ ದಾಂಧಲೆ ನಡೆಸಿದ್ದೂ ಆಗಿದೆ. ಈ ಕೊಳವೆಬಾವಿಗಳೂ ಈಗ ಬತ್ತಿಹೋಗಿವೆ; ಬತ್ತಿಹೋಗುತ್ತ ಇವೆ.

ಎಂದರೆ ನಾವು ಭೂಮಿಯಿಂದ ಎಷ್ಟು ಪಡೆಯಬೇಕಾಗಿದೆಯೋ ಅದಕ್ಕಿಂತಲೂ ಹೆಚ್ಚಾಗಿ ಉಪಯೋಗಿಸಿ ಮಣ್ಣಿನ ಸಾರವನ್ನೆ ಹೀರಿಬಿಟ್ಟಿದ್ದೇವೆ. ನೀರಿನ ಕೊರತೆ ನೀಗಿಸಲು ಪರಿಹಾರ ಮಾತ್ರ ಏನೂ ಮಾಡುತ್ತ ಇಲ್ಲ.

ಭೂಮಿಯ ಮೇಲೆ ಬೀಳುವ ನೀರನ್ನು ಹಿಡಿದಿಡುವುದು, ಇಂಗಿಸುವುದು, ಆ

ಮೂಲಕ ನೀರನ್ನು ಮತ್ತೆ ತುಂಬಿಕೊಳ್ಳುವ ಯತ್ನ ಮಾಡುವುದು ಎಂದರೆ ಮರುಪೂರಣ– ಈ ಬಗ್ಗೆ ನಾವು ಸ್ವಲ್ಪವೂ ಚಿಂತನೆಯನ್ನೇ ಮಾಡಿಲ್ಲ; ತಲೆ ಕೆಡಿಸಿಕೊಂಡಿಲ್ಲ.

ಈಗ ಅಂತರ್ಜಲದ ಮಟ್ಟ ಎಷ್ಟರಮಟ್ಟಿಗೆ ಕುಸಿದಿದೆ ಎಂದರೆ, ಗಾಬರಿಬೀಳುವ ಮಟ್ಟಕ್ಕೆ ಕುಸಿದುಹೋಗಿದೆ. ಇದು ಭೂಮಿಯನ್ನು ಬಗೆದು ಬಗೆದು ನಾವು ಸರ್ವನಾಶ ಮಾಡಿರುವ ಫಲಶ್ರುತಿ.

ಒಂದು ಎಕರೆ ಪ್ರದೇಶದಲ್ಲಿ ಬೀಳುವ ಮಳೆನೀರನ್ನು ಸಂಗ್ರಹಿಸಿದರೇ ಸಾಕು, ೨೦ ದಶಲಕ್ಷ ಲೀಟರ್ ನೀರನ್ನು ಪಡೆಯಬಹುದಂತೆ. ಇದು ತಜ್ಞರ ಲೆಕ್ಕಾಚಾರ. ಹೀಗೆ ಮಾಡಿ ಸಾಧ್ಯವಿರುವ ಕಡೆಗಳಲ್ಲೆಲ್ಲ ಇಂಗುಗುಂಡಿ, ಕೃಷಿ ಹೊಂಡಗಳನ್ನು ತೋಡಿಸಬೇಕು. ತೆರೆದ ಬಾವಿಗಳನ್ನು ನಿರ್ಮಿಸಬೇಕು. ಈ ರೀತಿ ಮಾಡಿದರೆ, ಬರಿದಾದ ಕೊಳವೆ ಬಾವಿಗೆ ಈ ನೀರನ್ನು ಇಂಗಿಸಿದರೆ ಅಥವಾ ತೆರೆದ ಬಾವಿಯಲ್ಲಿ ಶೇಖರಿಸಿದರೆ ನೀರಿನ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ಇದೂ ತಜ್ಞರ ಹೇಳಿಕೆಯೇ.

ಯಾವಾಗಲೂ ಮಳೆ ಬೀಳುತ್ತದೆಯೇ? ಆಗ ನಮ್ಮನ್ನು ತಡೆಹಿಡಿಯುವವರು ಯಾರು? ಆಗ ನಮಗೆ ನಾಲ್ಕು ಮೀಸೆಗಳು ಮೊಳೆತುಬಿಡುತ್ತವೆ. ದುರಂಹಕಾರ ತಲೆ ಎತ್ತುತ್ತದೆ.

ಹಾಗೆಲ್ಲ ಆಗುವುದೇ ಇಲ್ಲ, ಆಗುವುದೂ ಸಾಧ್ಯವಿಲ್ಲ. ವರ್ಷ ಪೂರಾ ಮಳೆ ಬೀಳುವುದಿಲ್ಲ. ಸರಿಯಾಗಿ ಲೆಕ್ಕ ಹಾಕಿದರೆ ಆರು ತಿಂಗಳ ನೀರ ಸುರಿತವನ್ನು ಮಾತ್ರ ನಾವು ಪಡೆಯುತ್ತೇವೆ. ಈ ಆರು ತಿಂಗಳ ನೀರ ಸುರಿತ ಮತ್ತೆ ಆರು ತಿಂಗಳಿಗೆ ನಮಗೆ ಸಾಕಾಗುವುದಿಲ್ಲ. ಆಗ ಏನು ಮಾಡಬೇಕು? ನಾಳೆಯ ನೀರಿಗೆ ಗೃಹಿಣಿ ಹೇಗೆ ಎಚ್ಚರವಹಿಸುತ್ತಾಳೋ ಹಾಗೆಯೇ ಆರು ತಿಂಗಳ ನೀರನ್ನು ನಾವು ದಾಸ್ತಾನು ಮಾಡಿಕೊಳ್ಳಬೇಕು. ಅಂತರ್ಜಲದ ಶೇಖರಣೆಗೆ ತೀವ್ರ ನಿಗಾ ವಹಿಸಬೇಕು.

ನೀರಿಲ್ಲ ಎಂದು ಅಂತರ್ಜಲದ ಅಭಿವೃದ್ಧಿಯನ್ನೇ ಮಾಡದೆ, ಬರೇ ಕೊಳವೆ ಬಾವಿಗಳನ್ನು ತೋಡಿಸುತ್ತ ಹೋದರೆ ನೀರು ಸಿಗುವುದು ಹೇಗೆ ಸಾಧ್ಯ? ಭುಗ್ಗನೆ ಇದ್ದಕ್ಕಿದ್ದಂತೆ ನೀರು ಚಿಮ್ಮುತ್ತದೆಯೆ? ಅಂತರ್ಜಲದ ಕನಿಷ್ಠ ಬಳಕೆಯ ಬಗ್ಗೆ ನಮ್ಮ ನಾಡಿನ ನೀರಿನ ತಜ್ಞರು ಹಾಗೂ ಅರ್ಥಶಾಸ್ತ್ರಜ್ಞರು ಮತ್ತು ಅಭಿವೃದ್ಧಿರಂಗದ ಹೊಣೆ ಹೊತ್ತವರಿಗೆ ತೀರಾ ಆತಂಕದ ವಿಷಯವಾಗಿದೆಯಂತೆ.

ಒಬ್ಬ ವ್ಯಕ್ತಿಗೆ, ಒಂದು ದಿನಕ್ಕೆ, ೭೫ರಿಂದ ೧೩೦ ಲೀಟರ್ ನೀರು ಬೇಕಾಗುತ್ತದೆ. ಒಂದು ಕೆಜಿ ಭತ್ತ ಬೆಳೆಯಲು ೧೨,೦೦೦ ಲೀಟರ್ ನೀರು ಬೇಕಾಗುತ್ತದಂತೆ. ಆದರೆ ಮಡಗಾಸ್ಕರ್ ವಿಧಾನದಲ್ಲಿ ಬೆಳೆದರೆ ೧೨೫೦ ಲೀಟರ್ ನೀರು ಸಾಕಾಗುತ್ತದಂತೆ.

ಇಂಥವೆಲ್ಲವನ್ನೂ ನಾವು ಜನರಿಗೆ ಸಾಕಷ್ಟು ಪರಿಣಾಮಕಾರಿಯಾಗಿ ತಿಳಿಸಬೇಕು. ಜನರನ್ನು ಜಾಗೃತಗೊಳಿಸಬೇಕು.

ನೀರನ್ನು ಸಂಗ್ರಹಿಸಿದರೆ, ಗೃಹಿಣಿಯ ಹಾಗೆ ಹಿಡಿದಿಟ್ಟುಕೊಂಡರೆ, ಎಷ್ಟೋ ವಿಧಗಳಲ್ಲಿ ನಮಗೆ ಸಹಕಾರಿಯಾಗುತ್ತದೆ. ಈ ಅಂಶವನ್ನು ಜನರಿಗೆ ನಾವು ಮನದಟ್ಟು ಮಾಡಿಕೊಡಬೇಕು.

ಒಂದು ಎಕರೆ ಪ್ರದೇಶದಲ್ಲಿ ಒಂದು ಅಂಗುಲ ಮಳೆನೀರು ಸುರಿದರೆ ಅದರ ಪ್ರಮಾಣ ೧,೦೪,೪೪೦ ಲೀಟರ್ ಆಗುತ್ತದೆ. ವಾರ್ಷಿಕವಾಗಿ ಬೀಳುವ ಮಳೆಯಿಂದ ೧೫-೧೬ ಲಕ್ಷ ಲೀಟರ್ ನೀರನ್ನು ನಮ್ಮಿಂದ ಸಂಗ್ರಹಿಸಲು ಸಾಧ್ಯವಿದೆ. ಮಳೆ ನೀರಿನ ಈ ಸಂಗ್ರಹಣೆಯಿಂದ, ವಾರ್ಷಿಕವಾಗಿ ಬೀಳುವ ಮಳೆಯಿಂದ, ಒಂದು ಸಾವಿರ ಜನರಿಗೆ ಒಂದು ವರ್ಷಕ್ಕಾಗುವಷ್ಟು ನೀರಿನ ಅಗತ್ಯವನ್ನು ನಾವು ಪೂರೈಸಿಕೊಳ್ಳಬಹುದು.

ಸಾಮಾನ್ಯವಾಗಿ ವರ್ಷದಲ್ಲಿ ಬೀಳುವ ಮಳೆಯ ಪ್ರಮಾಣದಲ್ಲಿ ಶೇಕಡಾ ೨೦ ರಿಂದ ೩೫ರಷ್ಟು ನೀರು ಭೂಮಿಯ ಮೇಲೆಯೇ ಹರಿಯುತ್ತದೆ. ಇದು, ಈ ನೀರು, ವ್ಯರ್ಥವಾಗಿಯೇ ಹೋಗುತ್ತದೆ. ಹೀಗೆ ಹರಿಯುವ ನೀರು, ಕೆರೆಕಟ್ಟೆ ನಾಲೆ, - ಮುಂತಾದ ಕಡೆ ಹೋಗಿಬಿಡುತ್ತದೆ. ಇದರಿಂದ ನೀರಿನೊಂದಿಗೆ ಕಸ, ಕಡ್ಡಿ ಸೇರಿಕೊಂಡು ಕೆರೆಯ ಹೂಳೂ ಹೆಚ್ಚುತ್ತದೆ. ಆದರೆ ಭೂಮಿಯ ಮೇಲೆ ಬೀಳುವ ಇಂಥ ನೀರನ್ನು ಭೂಮಿಯಲ್ಲಿಯೇ ಸಂಗ್ರಹಿಸಿದರೆ ಅಥವಾ ಇಂಗಿಸಿದರೆ ಹೇಗೆ? ಈಗ ವ್ಯರ್ಥವಾಗುವ ಎಂದರೆ ಸಂಗ್ರಹಿಸಿದ ನೀರು ಮುಂದೆ ಅದೇ ಭೂಮಿಯಲ್ಲಿ ಸಸಿ-ಗಿಡ ಮುಂತಾದವುಗಳಿಗೆ ಎರೆದು ಪ್ರಯೋಜನ ಪಡೆದುಕೊಳ್ಳಬಹುದು.

ನಮ್ಮ ಕೆರೆಕಟ್ಟೆಗಳು ನಾಶವಾಗಬಾರದು. ಗ್ರಾಮ ಗ್ರಾಮಗಳಲ್ಲಿ ಸಂಗ್ರಹವಾಗುವ ಮರಳನ್ನು ತೆಗೆದು, ಹರಿದು ವ್ಯರ್ಥವಾಗುವ ನೀರನ್ನು ಮೊದಲು ನಿಲ್ಲಿಸಬೇಕು. ನಿಂತ ನೀರು ಮತ್ತೆ ಭೂಮಿಯೊಳಗೆಯೇ ಹೋಗುವಂತೆ ಇಂಗಿಸಬೇಕು. ಎಲ್ಲೆಲ್ಲಿ ಮಳೆ ಬೀಳುತ್ತದೆಯೋ ಅಲ್ಲೆಲ್ಲ ನೀರಿನ ಸಂಗ್ರಹಣೆ. ಆಗ ಮಾತ್ರ ನಾವು ನೀರಿನ ವಿಚಾರದಲ್ಲಿ ಸ್ವಾವಲಂಬಿಗಳಾಗುತ್ತೇವೆ. ಗೃಹಿಣಿಯ ಎಚ್ಚರ ಹೊರಗೂ ನಮಗೆ ದಾರಿದೀಪ ಆಗಬೇಕು.

ಅದು ಸರಿ. ಗಿಡ, ಮರ, ಕಾಡು ಇಂಥವುಗಳ ಚೊಕ್ಕಟ ಅದ್ದೂರಿಯಾಗಿ ನಡೆಯುತ್ತ ಇರುವಾಗ ಮಳೆ ಮೊದಲಿನ ಹಾಗೆಯೇ ಸುರಿಯಬೇಕು ಎಂದರೆ ಎಲ್ಲಿಯ ಮಳೆ? ಎಲ್ಲಿಯ ಗುಡುಗು? ಕಳೆದ ೧೫ ವರ್ಷಗಳಿಂದ ೨,೦೦೦ ಹೆಕ್ಟೇರ್ ಅರಣ್ಯ ನಾಶವನ್ನು ನಾವು ಮಾಡಿದ್ದೇವೆ ಎಂದು ಅಂಕಿ ಸಂಖ್ಯೆಗಳು ಹೇಳುತ್ತವೆ.

ಒಂದು ಉದಾಹರಣೆ. ಸುಲಭವಾಗಿಯೇ ಯೋಚನೆ ಮಾಡುವಂಥದು. ನಾವು ಭೂಮಿಯಿಂದ ನಾನಾ ಬೇಡಿಕೆಗಳಿಗಾಗಿ ನೀರನ್ನು ಹೊರತೆಗೆಯುತ್ತೇವಷ್ಟೆ ಎಂದರೆ ಅಷ್ಟು ನೀರು ಭೂಮಿಯಿಂದ ಖಾಲಿಯಾಯಿತು. ಖಾಲಿಯಾದಷ್ಟು ನೀರನ್ನು ತುಂಬಿಸಿದರೆ ತಾನೆ ನಾಳೆ ನಮಗೇ ಪ್ರಯೋಜನವಾದೀತು. ಹಾಗಿಲ್ಲದೆ ನಾಳೆ ನಾಳೆ ನಾಳೆ ಈ ನೀರನ್ನೇ ನಾವು ಮೊಗೆದುಕೊಂಡಿದ್ದರೆ ಒಂದು ದಿನ ಪಾತ್ರೆ ಬರಿದಾಗಿ ಬಿಡುತ್ತದೆ. ಕಾರಣ ನಾವು ಬರೇ ಖರ್ಚು ಮಾಡುತ್ತ ಇದ್ದೇವೆಯೇ ಹೊರತು ಸ್ವಲ್ಪವೂ ಸಂಗ್ರಹ ಮಾಡುತ್ತ ಇಲ್ಲ. ಭೂಮಿಯೊಳಗೆ ನೀರು ಇರುತ್ತದೆ, ನಿಜ. ಅದಕ್ಕೂ ಒಂದು ಮಿತಿ ಇದೆ. ಈ ಮಿತಿ ದಾಟಿದರೆ ಅದರ ಪ್ರಮಾಣ ಕಡಮೆಯಾಗತೊಡಗುತ್ತದೆ. ಅಂತರ್ಜಲ ಬಹುವಾಗಿ ಕುಸಿಯುತ್ತ ಇರುವುದು, ಗಾಬರಿ ಬೀಳುವಂಥಾಗಿರುವುದು, ಜಲಕ್ಷಾಮ ಉಂಟಾಗಿರುವುದು ಈ ಕಾರಣಗಳಿಂದಲೇ. ಹನಿ ಹನಿ ಮಳೆ ನೀರೂ ಪೋಲಾಗದಂತೆ ನಾವು ಎಚ್ಚರ ವಹಿಸಿದರೆ ಮಾತ್ರ ಜಲಕ್ಷಾಮದ ಪರಿಹಾರಕ್ಕೆ ಮಾರ್ಗಗಳು ಸಿಗುತ್ತವೆ. ತೆರೆದುಕೊಳ್ಳುತ್ತವೆ. ಇಲ್ಲವೋ ಭಾರೀ ದಂಡವನ್ನೇ ನಾವು ತೆರಬೇಕಾಗುತ್ತದೆ.

ನಾವು ಖರ್ಚು ಮಾಡದೆಯೇ ನಿಸರ್ಗವೂ ಸ್ವಲ್ಪ ಮಟ್ಟಿನ ನೀರನ್ನು ಕುಗ್ಗಿಸುತ್ತದೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಈಗ ಕೊಡೋಣ.

ಒಂದು ಆಳ ಇರುವ ತಟ್ಟೆಗೆ ನೀರು ತುಂಬಿ ಮುಚ್ಚಿಡಿ. ಕೆಲವು ದಿನಗಳ ಮೇಲೆ ಮುಚ್ಚಳ ತೆರೆದು ನೋಡಿದರೆ ನೀವು ಹಾಕಿದ್ದ ನೀರಿನ ಪ್ರಮಾಣ ಕಡಮೆಯಾಗಿರುತ್ತದೆ. ಎಂದರೆ ಹವಾಗುಣಕ್ಕೆ ಅನುಗುಣವಾಗಿ ನೀರು ಆವಿಯಾಗಿರುತ್ತದೆ. ಕುದಿಸಿದರೆ ಮಾತ್ರ ನೀರು ಆವಿಯಾಗುತ್ತದೆ ಎಂದೇನೂ ಇಲ್ಲ. ಇದಕ್ಕೆ ಬಾಷ್ಪೀಕರಣ ಎನ್ನುತ್ತಾರೆ. ಕೆರೆಕಟ್ಟೆ ಕಾಲುವೆ ನದಿ ಸಮುದ್ರ – ಹೀಗೆ ಎಲ್ಲ ನೀರಿನ ತಾಣಗಳಲ್ಲಿಯೂ ಹವಾಗುಣಕ್ಕೆ ಅನುಸಾರವಾಗಿ ನೀರಿನ ಪ್ರಮಾಣ ಕುಗ್ಗುತ್ತದೆ.

ನಗರಗಳಲ್ಲಂತೂ ನೀರಿನ ಸಂಗ್ರಹಣೆಯ ಯೋಜನೆಯನ್ನೇ ಯಾರೂ ಮಾಡುತ್ತ ಇಲ್ಲ. ಕ್ರಿಕೆಟ್, ಟಿವಿ– ಇಂಥವುಗಳಲ್ಲೇ ಜನ ಮುಳುಗಿಹೋಗಿರುತ್ತಾರೆ. ಕೆಲಸಗಳೂ ಹಾಗೆಯೇ ಇರುತ್ತವೆ. ತರಾತುರಿ. ಮುಂದಿನ ಆಗುಹೋಗುಗಳನ್ನು ಆಲೋಚಿಸಲು ವ್ಯವಧಾನ ಎಲ್ಲಿದೆ? ಬೆಂಗಳೂರಿನಲ್ಲಿ ಪ್ರತಿ ದಿನ ೧೫,೦೦೦ ಲಕ್ಷ ಲೀಟರ್ ನೀರು ಬೇಕಾಗುತ್ತದಂತೆ. ಮಳೆಗಾಲ ಬಂದಾಗ ಎಚ್ಚರವಹಿಸಿ ಮಳೆಯ ನೀರನ್ನೇ ಸಂಗ್ರಹಿಸಿದರೆ ಇದರಲ್ಲಿ ಅರ್ಧಭಾಗ ಸಮಸ್ಯೆಗಳು ಪರಿಹಾರ ಆಗುತ್ತವೆ. ಮನಸ್ಸಿದ್ದರೆ ಮಹಾದೇವ. ಜೈ ಶಂಕರ. ಮನಸ್ಸು ಮಾಡಬೇಕಲ್ಲ.

ಬೆಂಗಳೂರು ೯೨೦ ಮೀಟರ್ ಎತ್ತರದಲ್ಲಿ ಇದೆ. ಒಂದು ಕಾಲದಲ್ಲಿ ಈ ನಗರಕ್ಕೆ ಉದ್ಯಾನವನಗಳ ನಗರ ಎಂದು ಹೆಸರಿತ್ತು. ಆ ಹೆಸರು ಬರಲು ಕಾರಣ ಸುತ್ತಮುತ್ತ

ಹಸಿರುರಾಶಿ. ಮರಗಿಡಗಳ ಸೊಂಪು. ೩೦೦ಕ್ಕೂ ಹೆಚ್ಚಿನ ಕೆರೆಗಳು ಈ ನಗರದಲ್ಲಿ ಇದ್ದವು. ಈಗ ಈ ಸಂಖ್ಯೆ ೮೨ಕ್ಕೆ ಇಳಿದಿದೆ. ಅದೂ ಸದಾ ನೀರು ಇರುವುದು ಕೇವಲ ೮-೧೦ ಮಾತ್ರ. ಉಳಿದವು ಎಲ್ಲವನ್ನೂ ಭೂಗಳ್ಳರು ಕಬಳಿಸಿದ್ದಾರೆ. ಸುಮ್ಮಸುಮ್ಮನೇ ಕಬಳಿಸಲು ಆದೀತೆ? ಅಧಿಕಾರಿಗಳಿಗೆ ಈ ಭೂಗಳ್ಳರು ಕಿಸೆಗಳನ್ನು ತುಂಬಿದ್ದಾರೆ. ನೀರು ತುಂಬಿಲ್ಲ. ಝಣ ಝಣ ಝಣ ತುಂಬಿದ್ದಾರೆ. ಭೂಮಿಗಳು ಇದ್ದ ಜಾಗವನ್ನೆಲ್ಲ ಆಕ್ರಮಿಸಿ, ಕೆರೆಗಳನ್ನು ಮುಚ್ಚಿಸಿ, ಅಪಾರ್ಟ್‌ಮೆಂಟುಗಳನ್ನು ಮಾಡಿಕೊಂಡು ಕೋಟ್ಯಧೀಶರಾಗಿ ಕೊಬ್ಬಿದ್ದಾರೆ.

ಲಂಚಕೋರ ಈ ಅಧಿಕಾರಿಗಳಿಗೂ ಸಮಾಜಶತ್ರು ಈ ಭೂಗಳ್ಳರಿಗೂ ಏನು ಶಿಕ್ಷೆ ? ಶಿಕ್ಷೆ ಕೊಡುವರು ಯಾರು ?

ಹಿಂದೆ ನಮ್ಮ ಹಳ್ಳಿಗಳಲ್ಲಿ ಊರ ಮುಂದೆ ಗೊಬ್ಬರದ ಗುಂಡಿಗಳು ಇರುತ್ತ ಇದ್ದವು. ಇವಕ್ಕೆ ತಿಪ್ಪೆ ಎನ್ನುತ್ತ ಇದ್ದರು. ಈ ತಿಪ್ಪೆಯನ್ನು ಅಥವಾ ಗೊಬ್ಬರವನ್ನು ತಮ್ಮ ಭೂಮಿಗಳಿಗೆ ಗುಡ್ಡೆ ಗುಡ್ಡೆಯಾಗಿ ಸುರಿದು ಎಳಕೊಟ್ಟುಗಳಿಂದ ಸಮ ಮಾಡುತ್ತ ಇದ್ದರು. ''ಇಸ್ಟು ಗೊಬ್ರ ಆಕಿಪ್ನಿ ಕಣ್ಲಾ...'' ಎನ್ನುವ ಮಾತು ಜನಪ್ರಿಯವಾಗಿತ್ತು.

ಈಗ ರಾಸಾಯನಿಕಗಳನ್ನು ಸುರಿದರು. ಭೂಮಿಗಳನ್ನು ಹದಗೊಳಿಸುತ್ತ ಇದ್ದ ಎರೆಹುಳಗಳೆಲ್ಲವೂ ನಾಶವಾದವು. ಎರೆಹುಳ ರೈತನ ಮಿತ್ರ. ರೈತನ ಬೆಳೆಗೆ ಎರೆ ಹುಳ ತುಂಬಾ ಸಹಾಯ ಮಾಡುತ್ತದೆ. ಸಿಕ್ಕ ಸಿಕ್ಕ ಹಾಗೆ ಕೊಳವೆ ಬಾವಿಗಳಾದವು. ನೀರನ್ನು ಯದ್ವಾತದ್ವಾ ಉಪಯೋಗಿಸಿದರು. ನಮಗೆ ನೀರಿನ ಕೊರತೆ ಉಂಟಾಗಲು ಇವೇ ಪ್ರಮುಖ ಕಾರಣಗಳು.

ರಾಜ್ಯ ರಾಜ್ಯಗಳಿಗೆ ಅಣೆಕಟ್ಟು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಜನರಿಗೆ ನೀರಿನ ಬಗ್ಗೆ ತಿಳಿವಳಿಕೆ ಹೇಳುವುದು. ಅಂತರ್ಜಲವನ್ನು ನಾವು ಹೆಚ್ಚಿಸಬೇಕು ಎನ್ನುವುದು. ಇಷ್ಟು ನೀರು ನಮಗೆ ಸಿಗುತ್ತದೆ, ಅದನ್ನು ಬಳಸಿದ ಮೇಲೆ ಇಷ್ಟು ನೀರನ್ನು ತುಂಬಬೇಕು ಎನ್ನುವುದು. ಬಳಕೆ ಮಾಡಿದ ಮೇಲೆ ಅಷ್ಟು ನೀರನ್ನು ತುಂಬಿಸಿದರೆ ಅಲ್ಲವೇ ಮತ್ತೆ ಮೊಗೆಯಲು ಸಾಧ್ಯ.

ಹಿಂದೆ 'ನಾವಿಬ್ಬರು, ನಮಗಿಬ್ಬರೇ ಮಕ್ಕಳು...' ಪ್ರಾರಂಭಿಸಿದಾಗ ಕೀಟಲೆ ಪ್ರಿಯರಿಗೆ ಆ ಘೋಷಣೆ ಹಾಸ್ಯದ ವಸ್ತುವಾಗಿತ್ತು. ಕ್ರಮೇಣ ಜನ ಇದರ ಮಹತ್ವವನ್ನು ಅರಿತುಕೊಂಡರು. ಆಚರಣೆಗೂ ತಂದರು. ಆ ಘೋಷಣೆಯಲ್ಲಿದ್ದ ಸತ್ಯವೂ ಅರಿವಾಯಿತು.

ಅದು ಸರಿ. ಅಂತರ್ಜಲ ಏಕೆ ಕುಸಿಯುತ್ತದೆ? ಹೇಗೆ ಕುಸಿಯುತ್ತದೆ?

ಅರಣ್ಯ ನಾಶ ಎನ್ನುವಾಗ ಒಂದು ಮುಖ್ಯ ವಿಷಯವನ್ನು ಪ್ರಸ್ತಾಪಿಸಬೇಕಾಗುತ್ತದೆ. ೧೯೫೭ರಿಂದ ಜಲಾಶಯ ನಿರ್ಮಾಣಗಳು ಮತ್ತು ಇತರೇ ಅಭಿವೃದ್ಧಿ ಕಾರ್ಯಗಳು ಎನಿಸಿಕೊಂಡು, ಮುಳುಗಡೆ ಆಗಿರುವ ಒಟ್ಟು ಅರಣ್ಯ ಪ್ರದೇಶ ೨೨೪೨ ಚದುರ ಕಿಲೋಮೀಟರ್ ಆಗುತ್ತದಂತೆ.

ಕೈಗಾರಿಕೆಗಳ ಹೆಚ್ಚಳ, ನಗರೀಕರಣ, ಅರಣ್ಯನಾಶ ಮುಂತಾದವು ಅಂತರ್ಜಲ ಕುಸಿಯಲು ಮುಖ್ಯ ಕಾರಣಗಳಾಗಿವೆ. ಕೈಗಾರಿಕಾ ಘಟಕಗಳ ತ್ಯಾಜ್ಯವಸ್ತುಗಳನ್ನು ನೈಸರ್ಗಿಕ ಜಲಾಶಯಗಳಿಗೇ ಸುರಿಯುವುದರಿಂದ ಆಗುವ ಅಪಾಯ ಭಾರೀ ಹೆಚ್ಚಿನದು.

ಅಂತೆಯೇ ನೀರಿನ ರಕ್ಷಣೆಗೂ ದೊಡ್ಡ ಚಳುವಳಿಯೇ ಆಗಬೇಕು. ನೀರು ಬೇಕೇ ? ನೀರು ಹಿಡಿದಿಟ್ಟುಕೊಳ್ಳಿ ಎಂದು. ಜನರಿಗೆ ಈ ತಿಳಿವನ್ನು ಮೂಡಿಸಬೇಕು. ಆಗಷ್ಟೆ ರಾಜ್ಯ ರಾಜ್ಯಗಳು ನೀರಿಗಾಗಿ ಜಗಳ ಆಡುವುದು ತಪ್ಪುತ್ತದೆ. ಸುಭಿಕ್ಷ ಕಾಣಲು ಸಾಧ್ಯವಿದೆ.

ಹಿಂದೆ ಕೊಳವೆಬಾವಿ ಎನ್ನುವ ಹೆಸರನ್ನೇ ಯಾರೂ ಕೇಳಿರಲಿಲ್ಲ, ಹಾಗಾಗಿಯೇ ನೂರಾರು ವರುಷಗಳು ಕಳೆದರೂ ನಮ್ಮ ತಿಳಿವು ಬಂದ ಕಾಲದಿಂದಲೂ ಅಂತರ್ಜಲ ಸಮೃದ್ಧಿಯಾಗಿತ್ತು. ಪ್ರಗತಿಯ ಹೆಸರಿನಲ್ಲಿ ಏನೆಲ್ಲ ನಾವು ಅನರ್ಥ ಮಾಡಲು ಹೊರಟೆವೋ, ಆಗಷ್ಟೆ ನೀರಿನ ಕೊರತೆಯ ಅರಿವು ನಮಗೆ ಮುಟ್ಟತೊಡಗಿತು. ನೀರು ಬಿಸಿಯಾಗತೊಡಗಿತು.

ವೈಜ್ಞಾನಿಕ ಕಾರಣಗಳು ಏನು ಹೇಗೆ ಇತ್ಯಾದಿಗಳು ತಿಳಿಯದಿದ್ದರೂ ನಮ್ಮ ಹಿರಿಯರಿಗೆ ಅಂತರ್ಜಲದ ಅರಿವಿತ್ತು. ಬೇವಿನ ಮರ ಇರುವ ಕಡೆ ನೀರು ಇರುತ್ತದೆ ಎಂದು ನಂಬಿದ್ದರು. ಹೀಗೆಯೇ ಅನೇಕ ಸುಳಿವುಗಳಿಂದ ಈ ಜಾಗದಲ್ಲಿ ನೀರು ಸಿಗುತ್ತದೆ ಎಂದು ಪತ್ತೆಹಚ್ಚುವಲ್ಲಿ ಅವರು ಸಫಲರಾಗುತ್ತ ಇದ್ದರು.

ನಮ್ಮ ನಾಡಿನಲ್ಲಿ ದೊರಕುವ ಅಂತರ್ಜಲದ ಪ್ರಮಾಣ ಈ ರೀತಿ ಇದೆ :

ಉತ್ತರ ಪ್ರದೇಶ	:	ಶೇಕಡಾ ೧೯.೯
ಮಧ್ಯ ಪ್ರದೇಶ	:	'' ೧೨.೯
ಬಿಹಾರ	:	'' ೧೨.೯
ಆಂಧ್ರಪ್ರದೇಶ	:	'' ೧೦.೧
ಮಹಾರಾಷ್ಟ್ರ	:	'' ೭.೫
ಗುಜರಾತ್	:	'' ೬.೫

ತಮಿಳುನಾಡು	:	" ೫.೪
ಪಶ್ಚಿಮ ಬಂಗಾಳ	:	" ೫.೦
ಕರ್ನಾಟಕ	:	" ३.೫

ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕದಲ್ಲಿಯೇ ತುಂಬಾ ಕಡಮೆ. ಅಂತರ್ಜಲ ಲಭ್ಯತೆಯಲ್ಲಿ ಕರ್ನಾಟಕಕ್ಕೆ ೧೨ನೆಯ ಸ್ಥಾನ. ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ತಮಿಳುನಾಡು ಕ್ರಮವಾಗಿ ಮೂರು, ನಾಲ್ಕು ಮತ್ತು ಏಳನೆಯ ಸ್ಥಾನಗಳನ್ನು ಪಡೆದುಕೊಂಡಿವೆ.

ಸಿಕ್ಕ ಹಾಗೆ ಬೋರ್ ಕೊರೆದು ಹೇಗೆ ನಾವು ಭೂಮಿಯೊಳಗೆ ಅಂತರ್ಜಲವನ್ನು ಕುಗ್ಗಿಸಿದ್ದೇವೆಯೋ ಅದೇ ರೀತಿ ಮೇಲಿಂದ ಸುರಿವ ಮಳೆನೀರಿಗೂ ಧಕ್ಕೆ ಉಂಟು ಮಾಡಿದ್ದೇವೆ.

ನಮಗೆ ಸ್ವಾತಂತ್ರ್ಯ ಬಂದಾಗ ನಮ್ಮ ಕಾಡು ३೭% ರಿಂದ ೪೦% ರಷ್ಟು ದಟ್ಟವಾಗಿತ್ತು. ಸರಿ, ಉದ್ದಕ್ಕೂ ನಾವು ಕೋಡಾಲಿ ಚಾಚಿದೆವು. ಈ ಪ್ರಮಾಣ ೧೯೮೨ರಲ್ಲಿ ೧೨%ಕ್ಕೆ ಇಳಿಯಿತು. ೨೦೦೨ರ ಕಾಲದಲ್ಲಿ ಶೇಕಡಾ ೬ ರಷ್ಟು ದಟ್ಟವಾದ ಕಾಡು, ಹಾಗೂ ಶೇಕಡಾ ೧೭ ಸಾಧಾರಣವಾದ ಕಾಡು ಇದೆ ಎಂದು ಒಂದು ವರದಿ ತಿಳಿಸುತ್ತದೆ.

ಒಟ್ಟು ಸಾರಾಂಶ: ಅಂತರ್ಜಲದ ಸಂರಕ್ಷಣೆಯೇ ಈಗ ನಮ್ಮ ಮುಂದಿರುವ ಮುಖ್ಯ ಕಾರ್ಯಾಚರಣೆ ಆಗಬೇಕು; ಗುರಿ ಆಗಬೇಕು. ಇದರಲ್ಲಿ ವಿಫಲರಾದೆವೋ ಮುಂದೆ ಗಂಡಾಂತರದ ದಿನಗಳನ್ನು ನಾವು ನಡೆಮುಡಿ ಹಾಸಿ ಎದುರುಗೊಳ್ಳಬೇಕಾಗುತ್ತದೆ.

*****

ಗ್ರಂಥಋಣ

ಎ. ಕನ್ನಡ

೧. ಕೇಳಿ ಕೃಷ್ಣೆಯ ಕೂಗು – ಎಚ್.ಕೆ. ಪಾಟೀಲ್

೨. ಜಲಾನಯನ ಸಮಗ್ರ ಅಭಿವೃದ್ಧಿ – ಡಾ|| ಕೆ.ಸಿ. ಶಶಿಧರ

೩. ನೆಲ–ಜಲ–ಜನ – ಅಯ್ಯಪ್ಪ ಮಸಗಿ

೪. ಅಂತರ್ಜಲ – ಡಾ|| ಟಿ. ಗೋವಿಂದಯ್ಯ

೫. ಅಂತರ್ಜಲದ ವೈಜ್ಞಾನಿಕ ಅರಿವು – ಎನ್.ಪಿ. ಶ್ರೀಕಾಂತ


೬. ಪರಿಸರ ಸಮಿತಿಯ ಅಂತಿಮ ವರದಿ ೨೦೦೧

A. English

1. Man of vision - Kamala Balekundry
2. The story of our Rivers - Al. Valliappa
3. The Report of the Krishna water disputes Tribunal with the decision

****

ಕೃತಿಕಾರರ ಪರಿಚಯ




ಕರ್ಣಾಟಕ ಮತ್ತು ತಮಿಳುನಾಡಿನ ಗಡಿಯಲ್ಲಿ ಇರುವ ತಾಳವಾಡಿ ಫಿರ್ಕಾದ ಪಾಳ್ಯ ಎನ್ನುವ ಕುಗ್ರಾಮದಲ್ಲಿ ದಿನಾಂಕ ೧೯-೮-೧೯೨೭ರಂದು ಶೇಷನಾರಾಯಣ ಅವರ ಜನನ. ಪದವೀಧರರಲ್ಲದ ಇವರ ಸಾಧನೆ ಮೆಚ್ಚುವಂಥದ್ದು. ಉದ್ದಕ್ಕೂ ಬರವಣಿಗೆಯಿಂದಲೇ ಜೀವನ ಸಾಗಿಸಿ ಬಂದಿರುವ ಶೇಷನಾರಾಯಣ ಮಧ್ಯೆ ಮಧ್ಯೆ ಪತ್ರಿಕೋದ್ಯಮ ಇತರೆ ಖಾಸಗಿ ಸಂಸ್ಥೆಗಳಲ್ಲಿಯೂ ಕೆಲಸ ಮಾಡಿ ಅನುಭವವನ್ನು ಗಳಿಸಿಕೊಂಡಿದ್ದಾರೆ. ಹಲವಾರು ಕಥೆ, ಕಾದಂಬರಿಗಳನ್ನು ಬರೆದಿರುವ ಶ್ರೀಯುತರು ಉತ್ತಮ ಭಾಷಾಂತರಕಾರರೂ ಹೌದು. ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ತಮಿಳಿನಿಂದ ಕನ್ನಡಕ್ಕೆ ಅನೇಕ ಉತ್ಕೃಷ್ಟ ಕೃತಿಗಳನ್ನೂ ಹಾಗೆಯೇ ಕನ್ನಡದಿಂದ ತಮಿಳಿಗೆ ಮಾಸ್ತಿ, ಭೈರಪ್ಪ ಮುಂತಾದವರ ಕೃತಿಗಳನ್ನೂ ಅನುವಾದ ಮಾಡಿರುವ ಶೇಷನಾರಾಯಣ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಅನುವಾದ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಇವರ ಅನುಭವ ಸೇವೆಗಾಗಿ ತಮಿಳುನಾಡು ಸರಕಾರದ 'ಕುರಳ್ ಪೀಠಂ' ಪ್ರಶಸ್ತಿಯೂ ಲಭಿಸಿದೆ. ಅವರ 'ಬೀಸು' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನವೂ ದೊರಕಿದೆ. 'ಮೊಲ್ಲೆ, ಮಲ್ಲಿಗೆ' ಕಥಾಸಂಕಲನ ಬೆಂಗಳೂರು ವಿಶ್ವವಿದ್ಯಾನಿಲಯದ ಪಿಯುಸಿ ತರಗತಿಗೆ ಪಠ್ಯ ಪುಸ್ತಕವೂ ಆಗಿದೆ. ಇತ್ತೀಚೆಗೆ ಶ್ರೀಯುತರು ಪ್ರಕಟಿಸಿದ 'ಕಾವೇರಿ : ಒಂದು ಚಿಮ್ಮು ಒಂದು ಹೊರಳು' ಕೃತಿ ಕಾವೇರಿ ನದಿಯ ಸಮಗ್ರ ಚಿತ್ರಣವನ್ನೂ ಈ ವೈಮನಸ್ಯಗಳನ್ನೂ ಹೋರಾಟವನ್ನೂ ಅಂಕಿ ಅಂಶಗಳ ಮೂಲಕ ಎತ್ತಿ ಹಿಡಿಯುವುದರೊಂದಿಗೆ, ಓದುಗರ ಮತ್ತು ವಿಮರ್ಶಕರ ತುಂಬು ಮೆಚ್ಚುಗೆಯನ್ನು ಗಳಿಸಿಕೊಂಡಿದೆ. ಅಷ್ಟಲ್ಲದೆ ಈ ಕೃತಿ ಕಾವೇರಿ ನದಿಯ ಬಗ್ಗೆ ಕನ್ನಡದಲ್ಲಿ ಬಂದಿರುವ ಏಕೈಕ ಗ್ರಂಥವೂ ಆಗಿದೆ. ಶ್ರೀಯುತರು ಇದುವರೆಗೆ ಒಟ್ಟು ಮೂವತ್ತೇಳು ಕೃತಿಗಳನ್ನು ರಚಿಸಿದ್ದಾರೆ. 'ನಮ್ಮ ನದಿಗಳು ಮತ್ತು ಸಮಸ್ಯೆಗಳು' ಕರ್ಣಾಟಕದ ನದಿಗಳು ಮತ್ತು ಅವುಗಳ ಸಮಸ್ಯೆಗಳನ್ನು ಸ್ಥೂಲವಾಗಿ ಚಿತ್ರಿಸುವ ಒಂದು ಕಿರುಹೊತ್ತಿಗೆ.

ವಿಳಾಸ : ಶ್ರೀ ಶೇಷನಾರಾಯಣ
ನಂ.೯, ಲಕ್ಕಪ್ಪ ಬಡಾವಣೆ
೧ನೇ ಕ್ರಾಸ್, ಸಿಂಗಾಪುರ
ವಿದ್ಯಾರಣ್ಯಪುರ ಅಂಚೆ
ಬೆಂಗಳೂರು-೫೬೦೦೯೭
ದೂರವಾಣಿ: ೦೮೦-೫೫೩೩೦೦೫೯

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೩ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮